# ಯುಗಶ್ರೀ

★ ಮುಕ್ತಿ ಮಾರ್ಗ

★ ಅನ್ಯರ ಹಕ್ಕನ್ನು ಅಪಹರಿಸದಿರಿ

★ ಇಸ್ಲಾಮಿಕ ರಾಜ್ಯಾಡಳಿತೆ

★ ಪ್ರವಾದಿತ್ವ—ಅಲ್ಲಾಹನ ಕರಾರು—ಮೌದೂದಿ

★ ಖುಮೇನಿಯ ಕೃತ್ಯಗಳು ಇಸ್ಲಾಮಿಕವಲ್ಲ

★ ಇಸ್ಲಾಂ ಮತ ತತ್ತ್ವಜ್ಞಾನ

ತ್ರೈಮಾಸಿಕ

ಸೆಪ್ಟಂಬರ್ - ಅಕ್ಟೋಬರ್

1980

ಬೆಲೆ: ರೂ. 1-00

ಓ ವಿಶ್ವಾಸಿಗಳೇ, ನಿಮ್ಮ ಸಂಪತ್ತಾಗಲಿ ನಿಮ್ಮ ಸಂತಾನಗಳಾಗಲಿ ದೈವಸ್ಮರಣೆಯಿಂದ ನಿಮ್ಮನ್ನು ಪರಾಙ್ಮುಖರನ್ನಾಗಿ ಮಾಡದಿರಲಿ. ಯಾರು ಹಾಗೆ ಮಾಡುವರೋ ಅವರು ನಷ್ಟಹೊಂದಿದವರಾಗಿದ್ದಾರೆ.

—ಪವಿತ್ರ ಖುರ್‌ಆನ್ (63:10)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು-575 001.

ಸಂಪುಟ : 6 ಸೆಪ್ಟಂಬರ್-ಅಕ್ಟೋಬರ್ 1980/ತಬೂಕ್-ಇಖಾ 1359 ಸಂಚಿಕೆ: 2

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


**ವಿಷಯ ಸೂಚಿಕೆ:** ಪುಟ


* ಮುಕ್ತಿ ಮಾರ್ಗ ... ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... 2
* ಅನ್ಯರ ಹಕ್ಕನ್ನು ಅಪಹರಿಸದಿರಿ ... ... 3
* ಇಸ್ಲಾಮಿಕ ರಾಜ್ಯಾಡಳಿತೆ ... ... 8
* ಪ್ರವಾದಿತ್ವದ ಬಗ್ಗೆ ಅಲ್ಲಾಹನ ಕರಾರು ಮತ್ತು ಮೌದೂದಿ ವ್ಯಾಖ್ಯಾನ ... 21
* ಖುಮೇನಿಯ ಕೃತ್ಯಗಳು ಇಸ್ಲಾಮಿಕವಲ್ಲ ... ... 24
* ಸಂಪಾದಕರಿಗೆ ಪತ್ರ ... ... 26
* ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು ... ... 27



ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಜ಼್ರತ್ ಮಿರ್ಜಾ಼ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI, Kannada Quarterly,
23/1008, Ansari Road, Bunder, Mangalore-575 001.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

| ಸಂಪುಟ: 6 | ಸೆಪ್ಟಂಬರ್-ಅಕ್ಟೋಬರ್ 1980 / ತಬೂಕ್-ಇಖಾ 1359 | ಸಂಚಿಕೆ: 2 |
|---|---|---|

## — ಮುಕ್ತಿ ಮಾರ್ಗ —

ಲೋಕಾರಂಭದಿಂದಲೇ ಪಾಪಕ್ಕೆ ಒಂದು ಪರಿಹಾರವಿದೆ. ವಿವೇಕಯುತ ಚಿಂತನದಿಂದಲೂ ಸುಸ್ಪಷ್ಟವಾದ ಇತರ ರುಜುವಾತುಗಳಿಂದಲೂ ದೈವಸತ್ತೆಯಲ್ಲಿ ಸುದೃಢ ಹಾಗೂ ಪ್ರಬಲ ವಿಶ್ವಾಸವುಂಟಾಗಿ, ದೈವಕೋಪ ನಾಶಕರವೆಂದು ಚೆನ್ನಾಗಿ ಅರಿತುಕೊಂಡರೆ, ಆಗ ದೈವಿಕ ಪ್ರಭೆ ಮನುಷ್ಯನಲ್ಲಿ ಪ್ರಕಾಶ ಬೀರುತ್ತದೆ. ದೇವನು ಸಕಲವಿಧ ಶಾಂತತೆಯ ಮತ್ತು ಪರಿಪೂರ್ಣ ಸಂತೃಪ್ತಿಯ ಭಂಡಾಗಾರವೆಂದು ಆಗ ಅವನು ಕಾಣುತ್ತಾನೆ. ದುರಾಗ್ರಹಗಳನ್ನೆಲ್ಲಾ ದಮನಿಸಿ ಮನುಷ್ಯ ಹೃದಯದಲ್ಲಿ ಒಂದು ಪರಿವರ್ತನೆಯನ್ನುಂಟುಮಾಡಲು ಇದೊಂದು ದಾರಿ ಮಾತ್ರವಾಗಿದೆ. ದೈವಾಸ್ತಿತ್ವದಲ್ಲಿ ಪರಿಪೂರ್ಣ ವಿಶ್ವಾಸವಿರಿಸಿ ದೇವನ ಭಯ–ಭಕ್ತಿ–ಸ್ನೇಹದಲ್ಲಿ ಲೀನವಾದರೆ ಒಬ್ಬನಿಗೆ ಪಾಪದಿಂದ ಸಂಪೂರ್ಣ ವಿಮುಕ್ತನಾಗಬಹುದು. ಮನುಷ್ಯನು ವಿಶೇಷ ಬುದ್ಧಿಯುಳ್ಳವನಾದುದರಿಂದ ಅವನಿಗೆ ತನ್ನ ಮುಂದೆ ಗೋಚರವಾಗುವ ನಾಶಕರವಾದ ಪಥದಿಂದ ಹಿಂದಕ್ಕೆ ಸರಿಯಲು ಸಾಧ್ಯವಿದೆ. ಪಾಪ ಮತ್ತು ಪರಿಪೂರ್ಣ ಜ್ಞಾನ ಒಂದೇ ಸಮಯದಲ್ಲಿ ಒಂದೇ ಹೃದಯದಲ್ಲಿ ಕೂಡಿಕೊಂಡಿರುವುದು ಅಸಾಧ್ಯ. ಸಂಕ್ಷಿಪ್ತವಾಗಿ ಹೇಳುವುದಾದರೆ, ದೃಢವಿಶ್ವಾಸ ಮಾತ್ರವೇ ಮನುಷ್ಯನನ್ನು ಪಾಪದ ದಂಷ್ಟ್ರದಿಂದ ಸಂರಕ್ಷಿಸುತ್ತದೆ. ಈ ಲೋಕದಲ್ಲಿ ಪಾಪಕ್ಕೆ ಬೇರೆ ಯಾವುದೇ ಪರಿಹಾರವಿಲ್ಲ. ಯಾರ ಶಿಲುಬೆಯ ಮೇಲಿನ ಮರಣಕ್ಕೂ ನಿಮ್ಮನ್ನು ಪಾಪದ ಮುಷ್ಟಿಯಿಂದ ವಿಮೋಚಿಸಲಿಕ್ಕೆ ಸಾಧ್ಯವಾಗದು. ಯಾರ ರಕ್ತದಿಂದಲೂ ನಿಮ್ಮ ದುರಾಗ್ರಹಗಳನ್ನು ನಿರೋಧಿಸಲು ಅಶಕ್ಯ. ಇದು ಮತ್ತು ಇದಕ್ಕೆ ಸಂಬಂಧಿಸಿದ ಸಂಗತಿಗಳಿಂದ ಮುಕ್ತಿಮಾರ್ಗದಲ್ಲಿ ಯಾವುದೇ ಸಹಾಯವಾಗಲಿ ಲಭಿಸಲಾರದು. ಪ್ರಾರ್ಥಿಸಿರಿ; ನಿಜವೇನೆಂದು ತಿಳಿಯಲು ಪ್ರಯತ್ನಿಸಿರಿ; ಸತ್ಯವನ್ನೇ ಅವಲಂಬಿಸಿರಿ. ಆ ಮೇಲೆ ಅವುಗಳನ್ನೊಮ್ಮೆ ಪರೀಕ್ಷಿಸಿ ನೋಡಿರಿ. ಆಗ, ಸುದೃಢವಾದ ವಿಶ್ವಾಸದಿಂದ ಮಾತ್ರ ತಮೋನಿಮಗ್ನವಾದ ಹೃದಯವನ್ನು ತೇಜೋಮಯವನ್ನಾಗಿ ಮಾಡಲು ಸಾಧ್ಯವೆಂದೂ ಪರಿಪೂರ್ಣವಾದ ಜ್ಞಾನದಿಂದ ಮಾತ್ರ ನಿಮ್ಮ ಹೃದಯ ಮಾಲಿನ್ಯಗಳನ್ನು ವಿಸರ್ಜಿಸಲು ಶಕ್ಯವೆಂದೂ ಸತ್ಯವೀಕ್ಷಣೆಯಿಂದ ಮಾತ್ರ ಅಜ್ಞಾತಾ ಗಹ್ವರದಿಂದ ಮೇಲೇರಲು ಸುಲಭವೆಂದು ಬೋಧ್ಯವಾದೀತು.

—ಹಝ್ರತ್ ಅಹ್ಮದ್, ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಅಧಿಕ ಖರ್ಚಿಲ್ಲದೆ ವಿವಾಹಿತಳಾಗುವ ಸ್ತ್ರೀ ಅತ್ಯಂತ ಅನುಗ್ರಹೀತಳು.

2. ನಾಲ್ಕು ಕಾರ್ಯಗಳಿಗಾಗಿ ಪುರುಷನು ಸ್ತ್ರೀಯ ಪಾಣಿಗ್ರಹಣ ಮಾಡುತ್ತಾನೆ–ಅವಳ ಸಂಪತ್ತು, ಅವಳ ಕುಟುಂಬ ಮಹಿಮೆ, ಅವಳ ಸೌಂದರ್ಯ, ಅವಳ ಧರ್ಮನಿಷ್ಠೆ. ಆದರೆ ನೀವು ಧರ್ಮನಿಷ್ಠೆಗೆ ಪ್ರಾಶಸ್ತ್ಯ ನೀಡಬೇಕು.

3. ಒಬ್ಬ ಪಿತ ತನ್ನ ಸಂತಾನಕ್ಕೆ ಸುಶಿಕ್ಷಣಕ್ಕಿಂತ ಮಿಗಿಲಾದ ಒಂದು ಕೊಡುಗೆ ನೀಡಲಾರ.

4. ಓದು, ಬರಹ, ಈಜಾಟ, ಧನುರ್ವಿದ್ಯೆ ಎಂಬೀ ಅಭ್ಯಾಸ ಮತ್ತು ನ್ಯಾಯವಾದ ಮಾರ್ಗದಲ್ಲಿರುವ ಉತ್ತಮ ಆಹಾರವನ್ನು ಯಾವುದೇ ಮಗುವಿಗೂ ತನ್ನ ಪಿತನಿಂದ ಪಡೆಯುವ ಹಕ್ಕಿದೆ.

5. ಗಂಡು ಮಕ್ಕಳಿಗೆ ಈಜಾಟವನ್ನೂ ಧನುರ್ವಿದ್ಯೆಯನ್ನೂ ಕಲಿಸಿರಿ; ಹೆಣ್ಣು ಮಕ್ಕಳಿಗೆ ನೂಲುವುದನ್ನು ಸಹ.

6. ಅಲ್ಲಾಹನಿಗೆ ಸಲ್ಲಿಸುವ ಕರ್ತವ್ಯದ ಕುರಿತು ಸ್ಮರಿಸಿರಿ. ಮಕ್ಕಳೆಡೆಯಲ್ಲಿ ಸಮಭಾವನೆಯನ್ನುಪಾಲಿಸಿರಿ.

7. ಪಾರಿತೋಷಕಗಳನ್ನು ನೀಡುವ ಕಾರ್ಯದಲ್ಲಿ ನೀವು ಮಕ್ಕಳೊಡನೆ ನೀತಿ ಪೂರ್ವಕವಾಗಿ ವರ್ತಿಸಿರಿ; ಔದಾರ್ಯದಲ್ಲೂ ಸ್ನೇಹ ಪ್ರಕಟನೆಯಲ್ಲೂ ನಿಮ್ಮೊಡನೆ ಅವರು ನೀತಿಯುತ ವರ್ತಿಸಬೇಕೆಂದು ನೀವು ಆಶಿಸುವ ರೀತಿಯಲ್ಲೇ.

8. ಕ್ಷಾಮವನ್ನುಂಟುಮಾಡಿ ಲಾಭ ಪಡೆಯಲಿಕ್ಕಾಗಿ ಧಾನ್ಯವನ್ನು ಅಕ್ರಮ ಸಂಗ್ರಹ ಮಾಡುವವನು ಪಾಪಿಯಾಗಿದ್ದಾನೆ.

9. ಲಾಭವನ್ನು ಆಶಿಸಿ, ಧಾನ್ಯವನ್ನು ನಲ್ವತ್ತು ದಿನಗಳ ವರೆಗೆ ಅಡಗಿಸಿಟ್ಟು ಕ್ಷಾಮವನ್ನು ಸೃಷ್ಟಿಸುವವನು ದೇವನನ್ನು ಕೈಬಿಡುವನು. ಅವನನ್ನು ದೇವನೂ ಕೈಬಿಡುವನು.

10. ಒಂದು ವಸ್ತುವಿನ ಸರಿಯಾದ ಸ್ಥಿತಿಯನ್ನು ಬಯಲುಗೊಳಿಸದೆ ಅದನ್ನು ಮಾರಬಾರದು.

(ಸರ್ ಮುಹಮ್ಮದ್ ಝಫರುಲ್ಲಾ ಖಾನರ **Wisdom of the Holy Prophet Muhammad** ಎಂಬ ಪುಸ್ತಕದಿಂದ ಆಯ್ದುದು)


## AHMADIYYA URDU LITERATURE

1. Ahmadiyyat Ka Paigham
2. Imam Mahdi Ka Zuhoor
3. Sadakat Hazrat Masih Mauwood
4. Silsila Nubuwwat Allah Ka Abdi Ahd Hai
5. Khatamunnabiyyeen

**WILL BE SENT FREE**

Apply with 25 paise Stamp for each book to:

**The Editor: "YUGARASHMI" Kannada Quarterly,**

23/1008, Ansari Road, Bunder, MANGALORE-575 001.

# ಅನ್ಯರ ಹಕ್ಕನ್ನು ಅಪಹರಿಸದಿರಿ

**(ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ — ಅಹ್ಮದಿಯಾ ಸಂಘಟನೆಯ ಸರ್ವೋನ್ನತ ನಾಯಕರಾದ ಖಲೀಫ — ಅವರು ರಬ್ವಾದ ಮಸ್ಜಿದ್ ಅಖ್ಸಾದಲ್ಲಿ 25-1-1980ನೇ ಶುಕ್ರವಾರ ಮಾಡಿದ ಖುತ್ಬಾ ಪ್ರವಚನ)**

**ಒಬ್ಬರು ಇನ್ನೊಬ್ಬರ ಧನವನ್ನು ಮೋಸ ಮತ್ತು ವಂಚನೆಯಿಂದ ಅಪಹರಿಸಿಕೊಂಡು ಅನರ್ಹವಾದ ರೂಪದಲ್ಲಿ ಅದನ್ನು ತಿನ್ನಬೇಡಿರಿ ಎಂದು ಅಲ್ಲಾಹು ಆಜ್ಞಾಪಿಸಿರುವನು. ಅನುಚಿತ ಮಾರ್ಗವನ್ನವಲಂಬಿಸಿ ಇನ್ನೊಬ್ಬರ ಹಕ್ಕನ್ನು ಅಪಹರಿಸುವುದು ಅವರನ್ನು ಕೊಲೆಗೈಯುವುದಕ್ಕೆ ಸಮವಾಗಿದೆ. ಇಸ್ಲಾಂ ಅದನ್ನು ಒಪ್ಪುವುದಿಲ್ಲ.**

ಸೂರ: ಫಾತಿಹಾ ಓದಿದ ನಂತರ ಹಝ್ರತ್ ಸಾಹೇಬರು ಪವಿತ್ರ ಖುರ್‌ಆನಿನ ಐದು ವಚನಗಳನ್ನು ಓದಿದರು. ಅವುಗಳ ಅರ್ಥ ಈ ರೀತಿಯಿದೆ:

"ನೀವು ಪರಸ್ಪರ ಅನ್ಯಾಯದ ಮಾರ್ಗದಲ್ಲಿ ಧನ ಸಂಗ್ರಹಮಾಡಿ ಅದನ್ನು ತಿನ್ನದಿರಿ. ಅಂತೆಯೇ ನೀವು ತಿಳಿದಿದ್ದೂ ಇತರರ ಸಂಪತ್ತಿನ ಒಂದು ಭಾಗವನ್ನು ಅನ್ಯಾಯವಾಗಿ ಸ್ವಾಯತ್ತಮಾಡಿಕೊಳ್ಳಲು ಅದರ ಕುರಿತಾದ ವಿವಾದವನ್ನು ಆಡಳಿತಾಧಿಕಾರಿಗಳ ಬಳಿಗೆ ಕೊಂಡೊಯ್ಯದಿರಿ" (2:189)

"ಎಲೈ ವಿಶ್ವಾಸಿಗಳೇ, ನೀವು ಪರಸ್ಪರ ತೃಪ್ತಿಪಟ್ಟುಕೊಂಡು ನಡೆಸುವ ವ್ಯಾಪಾರದ ಮೂಲಕವಲ್ಲದೆ ಅನ್ಯೋನ್ಯ ನ್ಯಾಯರಹಿತವಾದ ಮಾರ್ಗದಲ್ಲಿ ಧನ ಸಂಗ್ರಹಿಸಿ ತಿನ್ನಬೇಡಿರಿ. ನೀವು ನಿಮ್ಮನ್ನೇ ಕೊಲೆ ಮಾಡದಿರಿ. ನಿಶ್ಚಯವಾಗಿಯೂ ಅಲ್ಲಾಹು ನಿಮ್ಮೊಡನೆ ಸತತವಾಗಿ ಕರುಣೆದೋರುವವನಾಗಿದ್ದಾನೆ. ಮತ್ತೂ ಯಾರಾದರೂ ಅಕ್ರಮವಾಗಿಯೂ ಅನ್ಯಾಯವಾಗಿಯೂ ಆ ರೀತಿ ಮಾಡಿದರೆ, ಅವರನ್ನು ಅಗ್ನಿಯಲ್ಲಿ ಹಾಕಲಾಗುವುದು; ಅಲ್ಲಾಹನಿಗೆ ಇದು ಸುಲಭದ ಕೆಲಸವಾಗಿದೆ" (4:30-31)

"ಅಲ್ಲಾಹು ನಿಮ್ಮೊಡನೆ ದಯೆತೋರಲು ಇಚ್ಛಿಸುತ್ತಾನೆ. ದೇಹೇಚ್ಛೆಯನ್ನು ಅನುಕರಿಸುವವರು ನಿಮ್ಮನ್ನು ಕೆಡುಕಿನ ಕಡೆ ಸೆಳೆಯುತ್ತಾರೆ. ಅಲ್ಲಾಹು ನಿಮ್ಮ ಭಾರವನ್ನು ಲಘೂಕರಿಸಲು ಬಯಸುತ್ತಾನೆ; (ಯಾಕೆಂದರೆ) ಮನುಷ್ಯನು ಬಲಹೀನನಾಗಿ ಸೃಷ್ಟಿಸಲ್ಪಟ್ಟಿರುವನು." (4:28-29)

ಈ ವಚನಗಳಲ್ಲಿ ಹೇಳಲ್ಪಟ್ಟಿರುವ ವಿಷಯಗಳ ಕಡೆ ಗಮನಿಸಿರಿ. ಇನ್ನೊಬ್ಬರ ಸಂಪತ್ತನ್ನು ಅನ್ಯಾಯವಾಗಿಯೂ ನಿಯಮ ಬಾಹಿರವಾಗಿಯೂ ಕರಗತ ಮಾಡಿಕೊಂಡು ಭಕ್ಷಿಸುವ ಕೆಲವರು ಈ ಲೋಕದಲ್ಲಿದ್ದಾರೆ. ಆ ರೀತಿ ಅನ್ಯಾಯವಾಗಿಯೂ ಅಕ್ರಮವಾಗಿಯೂ ಇತರರ ಸಂಪತ್ತನ್ನು ಕಸಿದುಕೊಳ್ಳಲು ಮನುಷ್ಯನು ಹಲವಾರು ಮಾರ್ಗಗಳನ್ನು ಸ್ವೀಕರಿಸುತ್ತಾನೆ. ಕಳ್ಳತನ, ಕೊಳ್ಳೆ ಹೊಡೆಯುವುದು, ಅಳತೆ—ತೂಕದಲ್ಲಿ ಕಡಿಮೆ ಮಾಡುವುದು, ಕಲಬೆರಕೆ, ಹಾಳಾದ ವಸ್ತುವನ್ನು ಮಾರಾಟಮಾಡುವುದು, ಲಂಚ ನೀಡುವುದು, ಅದೇ ರೀತಿ ಅಧಿಕಾರಿಗಳಲ್ಲಿ ಪ್ರಭಾವ ಬೀರಿ ಇನ್ನೊಬ್ಬರ ಹಕ್ಕನ್ನು ಸ್ವಾಧೀನಪಡಿಸಿಕೊಳ್ಳುವುದು ಇತ್ಯಾದಿ ಅನೇಕ ಮಾರ್ಗಗಳನ್ನು ಸ್ವೀಕರಿಸಿ ಅವರು ಅನ್ಯಾಯವಾದ ಮಾರ್ಗದಲ್ಲಿ ಧನ ಸಂಪಾದಿಸಿ ತಿನ್ನುತ್ತಾರೆ.

ಆದರೆ, "ಎಲೈ ವಿಶ್ವಾಸಿಗಳೇ, ನೀವು ಆ ರೀತಿ ಅಕ್ರಮವೂ ಅನ್ಯಾಯವೂ ಆದ ಮಾರ್ಗದಲ್ಲಿ ಧನ ಸಂಪಾದನೆ ಮಾಡಬೇಡಿರಿ" ಎಂದು ಅಲ್ಲಾಹು ಆಜ್ಞಾಪಿಸುತ್ತಾನೆ. ಸಂಪತ್ತು ಪರಸ್ಪರ ವಿನಿಮಯವಾಗಬೇಕಾದದ್ದೇ. ಆ ರೀತಿ ಒಬ್ಬರಿಂದ ಇನ್ನೊಬ್ಬರ ಕೈಗೆ ಸಂಪತ್ತು ವಿನಿಮಯವಾಗುವ ಸಂದರ್ಭಗಳಲ್ಲಿ ಯಾರೂ ಇನ್ನೊಬ್ಬರ ಹಕ್ಕನ್ನು ಸ್ವಾಯತ್ತಪಡಿಸಿಕೊಳ್ಳಲು ಪ್ರಯತ್ನಿಸಬಾರದೆಂದೂ ಅವರವರ ನ್ಯಾಯೋಚಿತವಾದ ಹಕ್ಕನ್ನು ಮಾತ್ರ ತೆಗೆದುಕೊಳ್ಳಬೇಕೆಂದೂ ಇಸ್ಲಾಂ ಮೂಲಭೂತವಾಗಿ ನಿರ್ದೇಶಿಸುತ್ತದೆ. ಹೀಗೆ, ಆರ್ಥಿಕ ರಂಗದಲ್ಲಿ ಇಸ್ಲಾಂ ನಿರ್ದೇಶಿಸುವ ವ್ಯವಸ್ಥೆಯು ಸಮಾಜದಲ್ಲಿ ಶಾಂ

ತಿಯ ವಾತಾವರಣವನ್ನುಂಟುಮಾಡುತ್ತದೆ. ಮನುಷ್ಯ ನಿರ್ಮಿತವಾದ ವ್ಯವಸ್ಥೆಯು ಇದರಿಂದ ಭಿನ್ನವಾದುದಾಗಿದೆ.

ಇಲ್ಲಿ, ಮನುಷ್ಯನನ್ನು ಅತ್ಯಧಿಕ ದು:ಖಿತನನ್ನಾಗಿ ಮಾಡುವ ಒಂದು ವಿಷಯವನ್ನು ಎತ್ತಿ ಹೇಳಲಾಗಿದೆ. ಅದು, ಅನ್ಯರ ಧನವನ್ನು ಅನ್ಯಾಯವಾದ ಕ್ರಮದಲ್ಲಿ ಸ್ವಾಧೀನಪಡಿಸಿಕೊಳ್ಳಲು ಶ್ರಮಿಸುವುದೂ ಈ ಉದ್ದೇಶಕ್ಕಾಗಿ ಕಾನೂನಿನ ನೆರವನ್ನು ಪಡೆದು ನ್ಯಾಯಾಲಯದ ತೀರ್ಪನ್ನು ಕರಗತಮಾಡಿಕೊಳ್ಳುವುದೂ ಆಗಿದೆ. ಅವನಿಗೆ ಗೊತ್ತು, ಈ ಧನ ತನ್ನದಲ್ಲವೆಂದು. ಈ ತುಂಡು ಜಮೀನು ತನ್ನದಲ್ಲವೆಂದೂ ಈ ಕಟ್ಟಡ ತನ್ನದಲ್ಲವೆಂದೂ ಈ ಜಮೀನಿನಲ್ಲಿರುವ ಬೆಳೆ ತನ್ನದಲ್ಲವೆಂದೂ ಈ ಕಾರ್ಖಾನೆಯಲ್ಲಿ ಉತ್ಪನ್ನವಾಗುವ ವಸ್ತುಗಳೂ ಆದಾಯವೂ ಪೂರ್ಣವಾಗಿ ತನ್ನದಲ್ಲವೆಂದೂ ಅದರಲ್ಲಿ ಕಾರ್ಮಿಕರ ಹಕ್ಕು ಸಹ ಒಳ್ಳಪಟ್ಟಿದೆ ಎಂದೂ ಅವನಿಗೆ ಗೊತ್ತಿದೆ. ಇದೆಲ್ಲಾ ತಿಳಿದಿದ್ದೂ ಅವನು ತನ್ನ ಮನಸ್ಸನ್ನು ತೃಪ್ತಿಪಡಿಸಿಕೊಳ್ಳಲಿಕ್ಕಾಗಿ ಕಳ್ಳಸಾಕ್ಷಿ ಮೂಲಕವೋ ಲಂಚ ನೀಡಿಯೋ ಬೇರೆ ರೀತಿಯಲ್ಲಿ ಪ್ರಭಾವ ಬೀರಿಯೋ ನ್ಯಾಯಾಧೀಶರಿಂದ ತನಗೆ ಅನುಕೂಲಕರವಾದ ತೀರ್ಮಾನವನ್ನು ಪಡಕೊಳ್ಳುತ್ತಾನೆ. ಆ ರೀತಿಯಲ್ಲಿ ತನ್ನ ಆತ್ಮವನ್ನು ಸಮಾಧಾನಪಡಿಸಿಕೊಳ್ಳಲು ಅವನು ಶ್ರಮಿಸುವನು. ಆದರೆ, ಅಲ್ಲಾಹು ಎಚ್ಚರಿಕೆ ನೀಡುತ್ತಾನೆ: ಅಧಿಕಾರಿಗಳ ಅಥವಾ ನ್ಯಾಯಾಧೀಶರ ತೀರ್ಮಾನವು ನಿಮ್ಮನ್ನು ನಾನು ನರಕಕ್ಕೆ ಹಾಕಿ ಶಿಕ್ಷಿಸುವೆನು ಎಂಬ ನನ್ನ ತೀರ್ಮಾನಕ್ಕೆ ಅಡ್ಡಿ ಬರಲಾರದು ಎಂದು.

ಲೋಕದಲ್ಲಿ ವ್ಯಾಪಿಸಿರುವ ಈ ನೀಚತನವು ಅತ್ಯಧಿಕ ಅಪಾಯಕಾರಿಯೂ ಸಾಮೂಹಿಕ ಜೀವನದಲ್ಲಿ ಬಹಳಷ್ಟು ಅಸಮಾಧಾನವನ್ನು ಸೃಷ್ಟಿಸುವಂಥದ್ದೂ ಆಗಿದೆ. ಕಳ್ಳ ಮೊಕದ್ದಮೆ ಹೂಡಿ, ಕಳ್ಳ ಸಾಕ್ಷಿಗಳನ್ನು ಹಾಜರುಪಡಿಸಿ, ಕಳ್ಳ ಪ್ರಮಾಣ ಮಾಡಿ, ಅಂದರೆ ತನ್ನ ಅಪರಾಧಕ್ಕೆ ಪರಮಾತ್ಮನನ್ನು ಸಹ ಸಾಕ್ಷಿ ನಿಲ್ಲಿಸಿಕೊಂಡು ಅವನು ತನ್ನ ಪರವಾಗಿ ತೀರ್ಪನ್ನು ಪಡೆದುಕೊಳ್ಳುತ್ತಾನೆ. ನೀವು ಆಯಾಕಾಲದ ಅಧಿಕಾರಿಗಳಿಂದ ಅನ್ಯಾಯವಾದ ಮಾರ್ಗದಲ್ಲಿ ನಿಮಗನುಕೂಲಕರವಾದ ತೀರ್ಪನ್ನು ಪಡೆಯದಿರಿ ಎಂದು ಅಲ್ಲಾಹು ನಮ್ಮೊಡನೆ ಆಜ್ಞಾಪಿಸಿರುತ್ತಾನೆ.

ಪವಿತ್ರ ಖುರ್‌ಆನ್ ಒಂದು ಮಹತ್ತಾದ ಗ್ರಂಥವಾಗಿದೆ. ಅದು ನಮ್ಮೊಡನೆ ಹೇಳುತ್ತದೆ: ಕೆಲವರು ತಿಳುವಳಿಕೆಯ ಅಭಾವದಿಂದಲೂ ತಪ್ಪು ತಿಳುವಳಿಕೆಯ ಕಾರಣದಿಂದಲೂ ಕೆಲವೊಮ್ಮೆ ಕಳ್ಳಮೊಕದ್ದಮೆ ಹೂಡಲು ಸಾಧ್ಯತೆಯಿದೆ. ಆದುದರಿಂದ ಅದನ್ನು ಸಹ ಇಲ್ಲಿ ಸೂಚಿಸಲಾಗಿದೆ. ಯಾರಾದರೂ ತನಗೆ ಹಕ್ಕಿಲ್ಲದ ಒಂದು ವಸ್ತುವು ನಿಜವಾಗಿಯೂ ತನಗೆ ಸೇರಿದ್ದೆಂದು ತಪ್ಪಾಗಿ ತಿಳಿದುಕೊಂಡು ಅದರ ಬಗ್ಗೆ ತನ್ನ ಪರವಾಗಿ ತೀರ್ಪು ಪಡಕೊಳ್ಳಲು ನ್ಯಾಯಾಲಯಕ್ಕೆ ಹೋಗಬಹುದು. ಅಲ್ಲಾಹು ಹೇಳುತ್ತಾನೆ, ಅಂತಹ ವ್ಯಕ್ತಿಗಳೋ ಸಂಘಗಳೋ ನನ್ನ ಈ ಸಂಬೋಧನೆಯಲ್ಲಿ ಒಳಪಡುವುದಿಲ್ಲ. ತಾವು ಹೂಡುತ್ತಿರುವ ಮೊಕದ್ದಮೆಗಳು ಅನುಚಿತವೆಂದು ತಿಳಿದೂ ಆ ರೀತಿ ಮಾಡುವವರು ಮಾತ್ರವೇ ನನ್ನ ಸಂಬೋಧನೆಯಲ್ಲಿ ಒಳಪಡುತ್ತಾರೆ. ಒಬ್ಬನು ಅಜ್ಞಾನದ ಕಾರಣದಿಂದ ಅಥವಾ ತಪ್ಪು ಕಲ್ಪನೆ ನಿಮಿತ್ತ ಅಥವಾ ಅಲಕ್ಷ್ಯ ಹೇತುವಾಗಿ ಸುಳ್ಳು ಮೊಕದ್ದಮೆ ಹೂಡಿ ತನ್ನ ಪರವಾಗಿ ತೀರ್ಪನ್ನು ಪಡಕೊಂಡರೆ ಅಂಥವನಿಗೆ ಈ ಶಿಕ್ಷೆಯು ಅನ್ವಯಿಸುವುದಿಲ್ಲ. ಬದಲಾಗಿ, ಉದ್ದೇಶಪೂರ್ವಕವಾಗಿ ಇನ್ನೊಬ್ಬರ ಧನವನ್ನು ಅಪಹರಿಸಿ ತಿನ್ನುವವರಿಗೂ ಅದಕ್ಕಾಗಿ ನ್ಯಾಯಾಲಯದ ಆಶ್ರಯವನ್ನು ಪಡೆಯುವವರಿಗೂ ಕಠಿಣವಾದ ಶಿಕ್ಷೆಯಿದೆ ಎಂದು ಖುರ್‌ಆನ್ ಹೇಳಿರುತ್ತದೆ.

ಇಲ್ಲಿ ಹೇಳಲ್ಪಟ್ಟಿರುವ ಇನ್ನೊಂದು ವಿಷಯ, ಇತರರ ಕೈಯಿಂದ ಲಭಿಸುವ ಧನವನ್ನು ಸಂಪಾದಿಸಿಕೊಳ್ಳಲು ನ್ಯಾಯೋಚಿತವಾದ ಮಾರ್ಗವಿದೆ; ಆ ಮಾರ್ಗದ ಮೂಲಕ ನೀವು ಧನ ಸಂಪಾದನೆ ಮಾಡಿರಿ ಎಂಬುದಾಗಿದೆ. ಏನಿದ್ದರೂ ಸಂಪತ್ತು ಒಬ್ಬರ ಬಳಿಯೇ ಇರುವಂಥದ್ದಲ್ಲ. ಒಬ್ಬ ರೈತನಿಗೆ ಒಂದು ಸಾವಿರ ಮಣ ಗೋದಿ ಬೆಳೆಯಿತೆಂದು ತಿಳಿಯಿರಿ. ಆ ರೈತನ ಸ್ವಂತ ಉಪಯೋಗಕ್ಕೆ ಇನ್ನೂರು ಮಣ ಗೋದಿ ಮಾತ್ರ ಸಾಕು ಎಂದಾದರೆ ಉಳಿದ ಎಂಟುನೂರು ಮಣ ಗೋಧಿಯನ್ನು ಅವನು ಹೇಗಾದರೂ ಇತರರ ಮನೆಗಳಿಗೆ ತಲಪಿಸಬೇಕಾಗಿದೆ. ಅದನ್ನು ನಿಮ್ಮ ಮನೆಗೆ ತರಲಿಕ್ಕಾಗಿ ನ್ಯಾಯೋಚಿತವಾದ ಒಂದು ಮಾರ್ಗವಿದೆ. ಅದು ಇಸ್ಲಾಮಿಕ ರೀತ್ಯಾ ನಡೆಸುವ ವ್ಯಾಪಾರವಾಗಿದೆ. ಪರಮಾತ್ಮ ನಿರ್ದೇಶಿಸಿರುವ, ಕೆಳಗೆ ವಿವರಿಸುವ ವ್ಯಾಪಾರ ಕ್ರಮವನ್ನು ಪಾವನವಾದ

ವ್ಯಾಪಾರವೆಂದು ನಮಗೆ ಹೇಳಬಹುದು. ಸಾಧನಗಳು ಕೈಬದಲಾವಣೆಯಾಗುವ ವೇಳೆ ಅದರಲ್ಲಿ ನ್ಯೂನತೆಗಳಿರಬಾರದು. ವ್ಯವಹಾರದಲ್ಲಿ ವಾಗ್ದಾನ ಉಲ್ಲಂಘನೆಯಾಗಬಾರದು. ಪ್ರಮಾಣವನ್ನು ಹೆಚ್ಚಿಸುವ ಉದ್ದೇಶದಿಂದ ಧಾನ್ಯಗಳನ್ನು ನೆನೆಹಾಕಬಾರದು. ತೂಕ ಮತ್ತು ಅಳತೆಯಲ್ಲಿ ಕಡಿಮೆ ಮಾಡಬಾರದು. ಉತ್ತಮವಾದುದನ್ನು ಸ್ಯಾಂಪಲ್ ತೋರಿಸಿ ಕೆಟ್ಟದ್ದನ್ನು ನೀಡಬಾರದು. ಮಾರುಕಟ್ಟೆಯ ಬೆಲೆಗಿಂತ ಹೆಚ್ಚಿನ ಬೆಲೆ ಲಭಿಸಲಿಕ್ಕಾಗಿ ಮಾರುಕಟ್ಟೆಯ ಹೊರಗೆ ವ್ಯಾಪಾರ ನಡೆಸಬಾರದು. ಅದೇ ರೀತಿ, ಮಾರುವವನಿಗೆ ಸರಿಯಾದ ಬೆಲೆ ಲಭಿಸದಿರಲಿ ಎಂಬ ಉದ್ದೇಶದಿಂದಲೂ ಮಾರುಕಟ್ಟೆಯ ಹೊರಗೆ ವ್ಯಾಪಾರ ನಡೆಯಬಾರದು. ವ್ಯಾಪಾರದಲ್ಲಿ ಮಾರುವವನಿಗೂ ಕೊಳ್ಳುವವನಿಗೂ ಅನ್ಯಾಯವಾಗಬಾರದು. ಈ ಸಾಮಾಜಿಕ ವ್ಯವಸ್ಥೆಯು ಈ ರೀತಿಯದ್ದಾಗಿದೆ. ಅಂದರೆ, ಒಬ್ಬನು ಉತ್ಪಾದಿಸುತ್ತಾನೆ. ಆ ಸಾಮಾಗ್ರಿಯು ಇನ್ನೊಬ್ಬನ ಬಳಿಗೆ ಹೋಗುತ್ತದೆ. ನಂತರ ಮೂರನೆಯವನ ಬಳಿ ಸಾಗುತ್ತದೆ. ಮನುಷ್ಯರು ನಾಗರಿಕತೆಯ ಜೀವನ ನಡೆಸಬೇಕಾದವರು. ಅವರಿಗೆ ಪರಮಾತ್ಮನು ವ್ಯತ್ಯಸ್ತವಾದ ಶಕ್ತಿಗಳನ್ನು ದಯಪಾಲಿಸಿದ್ದಾನೆ. ಎಲ್ಲರಿಗೂ ಅಲ್ಲಾಹು ಧಾನ್ಯ ಉತ್ಪಾದನೆಯ ಶಕ್ತಿಯನ್ನು ಮಾತ್ರವೇ ನೀಡಿರುತ್ತಿದ್ದರೆ, ಇಲ್ಲಿ ವಸ್ತ್ರ ನಿರ್ಮಾಣಕ್ಕೆ ಯಾರೂ ಇರುತ್ತಿರಲಿಲ್ಲ. ವಸ್ತ್ರದ ಅಭಾವದಿಂದ ಚಳಿಗಾಲದಲ್ಲಿ ನಾವು ಶೀತದಿಂದ ನಡುಗಬೇಕಾಗಿತ್ತು. ನಗ್ನತೆ ಮರೆಸಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ. ಕೆಲವರಿಗೆ ಬುದ್ಧಿಶಕ್ತಿಯನ್ನೂ ದೀರ್ಘದೃಷ್ಟಿಯನ್ನೂ ನೀಡಲಾಗಿದೆ. ಇಂದು ಲೋಕದಲ್ಲಿ ಇಪ್ಪತ್ತೈದು ಸಾವಿರದಷ್ಟು ಕಾರ್ಮಿಕರು ಕೆಲಸ ಮಾಡುವ ವಸ್ತ್ರ ನಿರ್ಮಾಣ ಕಾರ್ಖಾನೆಗಳಿವೆ. ಈ ಇಪ್ಪತ್ತೈದು ಸಾವಿರ ಕಾರ್ಮಿಕರಿಗೆ ತಿನ್ನಲು ಆಹಾರದ ಆವಶ್ಯಕತೆಯುಂಟು. ಅವರಿಗೆ ಹಸಿವೆಯಿದೆ. ಅವರಿಗೆ ಹೆಂಡತಿ ಮಕ್ಕಳಿದ್ದಾರೆ; ಸಂಬಂಧಿಕರಿದ್ದಾರೆ; ಅವರ ಆಶ್ರಯದಲ್ಲಿ ಜೀವಿಸುವವರಿದ್ದಾರೆ. ಇವರೆಲ್ಲರಿಗೂ ಬೇಕಾಗಿ ಕೃಷಿಕನು ಧಾನ್ಯಉತ್ಪಾದನೆ ಮಾಡುತ್ತಾನೆ. ಆ ಕೃಷಿಕನಿಗೆ ವಸ್ತ್ರದ ಅವಶ್ಯಕತೆಯೂ ಇದೆ. ಕಾರ್ಖಾನೆಗಳಲ್ಲಿ ನಿರ್ಮಾಣವಾಗುವ ವಸ್ತ್ರವು ಕೃಷಿಕನ ಬಳಿಗೆ ತಲಪಬೇಕಾಗಿದೆ. ಅದೇ ರೀತಿ ಕೃಷಿಕನ ಉತ್ಪಾದನೆಯು ಕಾರ್ಮಿಕನ ಬಳಿಗೂ ತಲಪಬೇಕು. ಆದುದರಿಂದ ಅಲ್ಲಾಹು ಈ ಲೋಕದಲ್ಲಿ ವ್ಯಾಪಾರ ಪದ್ಧತಿಯನ್ನು ನ್ಯಾಯಬದ್ಧದೆಂದು ಸಾರಿರುವನು. ಅದಕ್ಕಾಗಿ ನಿರ್ದೇಶನಗಳನ್ನು ನೀಡಿರುವನು. ಮನುಷ್ಯರು ನಿರಂಕುಶರಾಗಿ ವರ್ತಿಸಿ ಪೈಶಾಚಿಕ ವಲಯದಲ್ಲಿ ಸಿಲುಕದಿರಲಿ ಎಂದು ಅಲ್ಲಾಹು ಕೆಲವು ಮಿತಿಯನ್ನು ನಿರ್ಣಯಿಸಿರುವನು. ಈಗ ಎಲ್ಲಾ ಕಾರ್ಯಗಳೂ ನಮ್ಮ ಮುಂದೆ ತೆರೆದಿಡಲ್ಪಟ್ಟಿವೆ. ನ್ಯಾಯಬದ್ಧವಾದ ಮಾರ್ಗ ಯಾವುದೆಂದೂ ಅನ್ಯಾಯವಾದ ಮಾರ್ಗ ಯಾವುದೆಂದೂ ಸರಿಯಾಗಿ ವಿವರಿಸುವ ಒಂದು ಗ್ರಂಥವನ್ನು ನಮ್ಮ ಕೈಯಲ್ಲಿ ಕೊಡಲಾಗಿದೆ. ಆದುದರಿಂದ ಆ ಗ್ರಂಥದಲ್ಲಿ ವಿವರಿಸಲಾದ ನಿರ್ದೇಶನಗಳಿಂದ ಕೂಡಿದ ವ್ಯಾಪಾರವು ಪಾವನವೂ ಪರಿಶುದ್ಧವೂ ಆದ ವ್ಯಾಪಾರವಾಗಿರುವುದು.

ವ್ಯಾಪಾರದ ಕುರಿತು ಎರಡು ತತ್ವಗಳನ್ನು ಇಲ್ಲಿ ಹೇಳಲಾಗಿದೆ. ಒಂದನೆಯದು ವ್ಯಾಪಾರ ನ್ಯಾಯಬದ್ಧವಾಗಿರಬೇಕು. ಅಲ್ಲಾಹು ನಿರ್ದೇಶಿಸಿದ ರೀತಿಯನ್ನನುಸರಿಸಿರಬೇಕು. ಎರಡನೆಯದು, ಮಾರುವವನೂ ಕೊಳ್ಳುವವನೂ ಪರಸ್ಪರ ತೃಪ್ತಿಪಟ್ಟುಕೊಂಡು ಮಾತ್ರ ವ್ಯಾಪಾರ ನಡೆಸಿರಬೇಕು. ಉದಾಹರಣೆಗೆ, ಒಬ್ಬನು ಇನ್ನೊಬ್ಬನಿಂದ ಗೋದಿಯನ್ನು ಖರೀದಿಸಲು ಬಯಸುತ್ತಾನೆ. ನ್ಯಾಯವಾದ ಬೆಲೆಯನ್ನು ನೀಡಲಿಕ್ಕೂ ತಯಾರಿದ್ದಾನೆ. ಆದರೆ, ಮಾರುವವನು ಗೋದಿಯನ್ನು ಆತನಿಗೆ ವಿಕ್ರಯಿಸಲು ಇಷ್ಟ ಪಡುವುದಿಲ್ಲ. ಅಂತಿದ್ದೂ ಒಡೆಯನ ಅನುಮತಿಯಿಲ್ಲದೆ ಆತನ ಮನೆಯಿಂದ ನೂರು ಚೀಲ ಗೋದಿಯನ್ನು ತನ್ನ ಮನೆಗೆ ಸಾಗಿಸಿ ಮಾರುಕಟ್ಟೆಯ ಬೆಲೆಯನ್ನೇ ನೀಡಿದರೂ ದೈವ ದೃಷ್ಟಿಯಲ್ಲಿ ಆತನು ನಿರಪರಾಧಿಯಲ್ಲ. ಕಾರಣ, ಮಾಲಿಕನ ಅನುಮತಿಯಿಲ್ಲದೆಯೇ ಅವನು ಗೋದಿಯನ್ನು ಅಲ್ಲಿಂದ ತೆಗೆದುಕೊಂಡಿದ್ದಾನೆ. ಆದುದರಿಂದ ಅದು "ಪರಸ್ಪರ ತೃಪ್ತಿ ಪಟ್ಟುಕೊಂಡು ನಡೆಸುವ ವ್ಯಾಪಾರ"ವಲ್ಲ. ಒಂದನೆಯದಾಗಿ ವ್ಯಾಪಾರವು ಅದರ ಮೂಲಭೂತ ತತ್ವವನ್ನನುಸರಿಸಿರಬೇಕು. ಎರಡನೆಯದಾಗಿ ಇಬ್ಬರೂ ಪರಸ್ಪರ ತೃಪ್ತಿ ಪಟ್ಟುಕೊಂಡು ನಡೆಸುವ ವ್ಯಾಪಾರವಾಗಿರಬೇಕು. ಈ ತೃಪ್ತಿಯೊಳಗೆ ಬಹಳ ವಿಸ್ತಾರವಾದ ವಿವರಣೆಯು ಅಡಕವಾಗಿದೆ. ಉದಾಹರಣೆಗೆ ಗ್ರಾಹಕರಲ್ಲಿ ಯಾರೊಬ್ಬನೂ ತನಗೆ ಕೀಳ್ಮಟ್ಟದ ಸಾಮಾಗ್ರಿಗಳು ಲಭಿಸುವುದರಿಂದ ತೃಪ್ತಿಪಡಲಾರನು. ತನಗೆ ಹುಳಬಿದ್ದ ಧಾನ್ಯ ನೀಡಿದರೆ

ಸಾಕೆಂದು ಹೇಳಲಾರನು. ನಿಶ್ಚಯಿಸಿದ ಅವಧಿಗಿಂತಲೂ ಆರು ತಿಂಗಳು ಯಾ ಒಂದು ವರ್ಷದ ನಂತರ ಸಿಕ್ಕಿದರೆ ಸಾಕೆಂದು ಹೇಳಲಾರನು. ಅವನು ಇವತ್ತಿನ ಆವಶ್ಯಕತೆಗಾಗಿ ಸಾಮಾಗ್ರಿಗಳನ್ನು ಇವತ್ತು ಅವಶ್ಯಪಡುತ್ತಾನೆ. ಆದುದರಿಂದ ಅವಧಿಯೊಳಗಾಗಿ ಸಾಮಾಗ್ರಿಗಳು ಅವನಿಗೆ ಲಭಿಸಬೇಕು. ಹದಿನೈದು ದಿನಗಳ ಅವಧಿ ನಿರ್ಣಯಿಸಿ ವ್ಯಾಪಾರ ನಡೆಯಿತೆಂದಾದರೆ, ಆ ಹದಿನೈದು ದಿವಸಗಳಲ್ಲಿ ಆತನಿಗೆ ವಸ್ತು ಲಭಿಸಬೇಕಾಗಿದೆ. ಮತ್ತು ಅಂತರಾಷ್ಟ್ರೀಯ ವ್ಯವಹಾರದಲ್ಲಾದರೆ ಕೆಲವೊಮ್ಮೆ ಒಂದೋ ಎರಡೋ ವರ್ಷಗಳಿಗೆ ಮೊದಲೇ ಕರಾರು ಮಾಡುವುದಿದೆ. ಇದು 1980ನೇ ಇಸವಿಯುಷ್ಟೆ. 1982ನೇ ಮಾರ್ಚ್ ತಿಂಗಳಲ್ಲಿ ಇಂತಹ ಸಾಮಾಗ್ರಿಗಳನ್ನು ನಮಗೆ ನೀಡಬೇಕು ಎಂದು ಕರಾರು ಮಾಡುತ್ತಾರೆ. ಇದೇ "ಪರಸ್ಪರ ತೃಪ್ತಿ" ಎಂಬುದು. ವ್ಯಾಪಾರವು ಈ ರೀತಿಯಲ್ಲಿ ಪರಸ್ಪರ ತೃಪ್ತಿಪಟ್ಟುಕೊಂಡು ನಡೆಯುವಂಥಾದ್ದಾಗಿರಬೇಕು. ಇದರ ಕುರಿತು ಬಹಳ ದೀರ್ಘವಾಗಿ ವಿವರಿಸಬೇಕಾಗಿದೆ. ಆದರೆ, ಕಾರ್ಯಗಳನ್ನು ತಿಳಿದುಕೊಳ್ಳಲಿಕ್ಕಾಗಿ ಈಗ ಸಂಕ್ಷಿಪ್ತ ವಿವರಣೆ ಮಾತ್ರ ನೀಡಿರುವೆನು. ಇಲ್ಲಿ ಅಲ್ಲಾಹು ವ್ಯಾಪಾರದ ಒಂದು ಮಹತ್ತಾದ ತತ್ವದ ಕುರಿತು ಹೇಳಿರುವನು. ಪರಸ್ಪರ ತೃಪ್ತಿಯ ಕುರಿತು ವಿಸ್ತಾರವಾದ ವಿವರಣೆಯು ಪವಿತ್ರ ಖುರ್‌ಆನಿನ ಬೇರೆ ಸ್ಥಳಗಳಲ್ಲಿ ವಿವರಿಸಲಾಗಿದೆ. ಅದರ ಬಗ್ಗೆ ಒಂದು ಚಿಕ್ಕ ವಾಕ್ಯದಲ್ಲಿ-ಕೆಲವು ಶಬ್ದಗಳಲ್ಲಿ ಮಾತ್ರ ಇಲ್ಲಿ ಪ್ರತಿಪಾದಿಸಲಾಗಿದೆ.

ಅಲ್ಲಾಹು ಇಲ್ಲಿ ಹೇಳಿರುವ ಇನ್ನೊಂದು ವಿಷಯ ಇದಾಗಿದೆ: ನೋಡಿರಿ, ಅನ್ಯಾಯವಾಗಿಯೂ ಅನುಚಿತವಾಗಿಯೂ ವಂಚನಾತ್ಮಕವಾಗಿಯೂ ಅನ್ಯರ ಧನವನ್ನು ಅಪಹರಿಸದಂತೆ ನಾವು ತಡೆಯುವುದು, ಅದು ಅವರನ್ನು ಹಸಿವೆಯಿಂದ ಸಾಯಿಸುವುದಕ್ಕೆ ಸಮವೆಂಬ ಕಾರಣದಿಂದಾಗಿದೆ. ಅನ್ಯರ ಧನವು ಅಪಹರಿಸಲ್ಪಡುವುದಾದರೆ ದಾರಿದ್ರ್ಯವು ಅವರನ್ನು ಮರಣದ ವರೆಗೂ ಕೊಂಡೊಯ್ಯಬಹುದು. ಜನರನ್ನು ಉಪವಾಸ ಹಾಕಿ ಸಾಯಿಸಲು ಇಸ್ಲಾಂ ಅನುಮತಿಸುವುದಿಲ್ಲ. ಇಸ್ಲಾಂ ಮನುಷ್ಯರನ್ನು ಜೀವಂತ ಮಾಡಲಿಕ್ಕೂ ಆರೋಗ್ಯವಂತರನ್ನಾಗಿ ಮಾಡುವ ವಾತಾವರಣವನ್ನು ಸೃಷ್ಟಿಸಲಿಕ್ಕೂ ಲೋಕದಲ್ಲಿ ಅವತೀರ್ಣವಾಗಿದೆ. ಕೆಲವು ರಾಷ್ಟ್ರಗಳು ಮಾಡಿದ ಹಾಗೆ ನೀವೂ ಅನ್ಯರ ಧನ ಅಪಹರಿಸುವಿರೆಂದಾದರೆ ಲಕ್ಷಾಂತರ ಜನರನ್ನೂ ದಶಗಟ್ಟಳೆ ಸಮುದಾಯಗಳನ್ನೂ ಹಸಿವೆಯಿಂದ ಸಾಯಿಸಲು ನೀವು ಸಹ ಶ್ರಮಿಸಿದಂತೆಯೇ ಆಗುವುದು. ಕೆಲ ರಾಷ್ಟ್ರದವರು ಇನ್ನು ಕೆಲವು ರಾಷ್ಟ್ರಗಳಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸಿದಾಗ ನೂರಾರು ವರ್ಷಗಳ ತನಕ ಈ ರೀತಿಯ ಅಕ್ರಮವನ್ನು ಎಸಗಿದರು. ನಾನು ಆಫ್ರಿಕದಲ್ಲಿ ಪರ್ಯಟನೆ ನಡೆಸಿದ ವೇಳೆ ಪ್ರಥಮವಾಗಿ ಸಂದರ್ಶಿಸಿದ ರಾಷ್ಟ್ರ ನೈಜೀರಿಯಾ ಆಗಿತ್ತು. ನಾನು ನೈಜೀರಿಯಾ ತಲಪಿದಾಗ ಎರಡು ಮೂರು ದಿವಸಗಳಲ್ಲಿ ನನಗೆ ಉಂಟಾದ ಅನುಭವವೇನೆಂದರೆ ಅಲ್ಲಾಹು ನೈಜೀರಿಯಾದ ಜನರಿಗೆ ಎಲ್ಲಾ ವಿಧದ ಸಂಪತ್ತನ್ನೂ ಅನುಗ್ರಹಿಸಿರುವನು; ಆದರೆ, "ದೇವರಾದ ಯೇಸುಕ್ರಿಸ್ತರ" ಸ್ನೇಹ ಸಂದೇಶದೊಂದಿಗೆ ನಾವು ನಿಮ್ಮ ಬಳಿ ಬಂದಿರುವೆವೆಂದು ಘೋಷಿಸಿದ ಒಂದು ವಿಭಾಗದವರು ಅವರಲ್ಲಿ ಏನನ್ನೂ ಬಾಕಿಯಿಡಲಿಲ್ಲ. ಎಲ್ಲವನ್ನೂ ಅವರು ಅಪಹರಿಸಿ ಕೊಂಡುಹೋಗಿದ್ದರು. ಅಲ್ಲಿಯ ಜನ ಹಸಿವೆಯಿಂದ ಸಾಯುತ್ತಿದ್ದಾರೆ. You had all, you were deprived of all (ಎಲ್ಲವೂ ನಿಮಗೆ ಲಭಿಸಿತ್ತು ಆದರೆ, ಎಲ್ಲವೂ ನಿಮಗೆ ತಡೆಯಲ್ಪಟ್ಟಿತ್ತು) ಎಂಬುದೇ ನನ್ನ ಪ್ರತೀಕರಣವೆಂದು ಅಲ್ಲಿಯವರೊಡನೆ ನಾನು ಹೇಳಿದೆ. ಮರುದಿವಸ ಅಲ್ಲಿನ ರಾಷ್ಟ್ರಾಧ್ಯಕ್ಷರನ್ನು ಸಹ ನಾನು ಭೇಟಿಯಾಗಿದ್ದೆ. ನನ್ನ ಪ್ರತಿಕ್ರಿಯೆ ಇದೆಂದು ಅವರೊಡನೆ ನಾನು ತಿಳಿಸಿದಾಗ ಅವರು ಹೇಳಿದರು: How true you are, how true you are! (ನೀವು ಹೇಳುತ್ತಿರುವುದು ಎಷ್ಟೊಂದು ಸತ್ಯ!).

ಪ್ರಸ್ತುತ ಖುರ್‌ಆನ್ ವಚನಗಳಲ್ಲಿ ಅಲ್ಲಾಹು ನಮಗೆ ಒಂದು ವ್ಯಕ್ತವಾದ ಸೂಚನೆಯನ್ನು ನೀಡಿರುವನು – ಅನುಚಿತವೂ ಅನರ್ಹವೂ ಆದ ರೀತಿಯಲ್ಲಿ ಇನ್ನೊಬ್ಬರ ಸಂಪತ್ತನ್ನು ಕಸಿದು ತಿನ್ನುವುದು ಅವರನ್ನು ವಧಿಸಲು ಶ್ರಮಿಸುವುದಕ್ಕೆ ಸಮವೆಂದು. "ನೀವು ನಿಮ್ಮನ್ನೇ ಕೊಲೆ ಮಾಡದಿರಿ" ಎಂಬ ವಾಕ್ಯವನ್ನು ಅದರ ಜೊತೆಯಲ್ಲೇ ಹೇಳಿರುವುದರಿಂದ ಇದು ವ್ಯಕ್ತವಾಗುತ್ತದೆ. ವಧೆ ಹಸಿವೆಯಿಂದಲ್ಲದೆ ಬೇರೆ ಕಾರಣದಿಂದಲೂ ಉಂಟಾಗಬಹುದಾದ್ದರಿಂದ ಎಲ್ಲಾ ತರದ ವಧೆಯನ್ನೂ ಅಲ್ಲಾಹು ವಿರೋಧಿಸಿರುವನು. ಹಸಿವೆಯಿಂದ ಸಾಯಿ

ಸುವುದನ್ನೂ ವಿರೋಧಿಸಿದ್ದಾನೆ. ಯಾವ ವಿಧದಲ್ಲೂ ನೀವು ಪರಸ್ಪರ ಕೊಲೆ ಮಾಡಬಾರದು ಎಂದು ತಾತ್ಪರ್ಯ. ನಂತರ ಅಲ್ಲಾಹು ಬಹಿರಂಗವಾದ ಎಚ್ಚರಿಕೆ ನೀಡುತ್ತಾನೆ: "ಮತ್ತೂ ಯಾರಾದರೂ ಅಕ್ರಮವಾಗಿಯೂ ಅನ್ಯಾಯವಾಗಿಯೂ ಆ ರೀತಿ ಮಾಡಿದರೆ ಅವರನ್ನು ನರಕಾಗ್ನಿಯಲ್ಲಿ ಹಾಕಲಾಗುವುದು" ಎಂದು. ಹಝ್ರತ್ ಮುಸ್ಲಿಹ್ ಮೌಊದ್ (ರ) 'ತಫ್ಸೀರ್ ಸಗೀರ್'ನಲ್ಲಿ "ಯಫ್‌ಅಲ್ ದಾಲಿಕ" (ಆ ರೀತಿ ಮಾಡಿದರೆ) ಎಂಬ ಪದಕ್ಕೆ ಅನ್ಯಾಯವಾಗಿ ಇತರರ ಧನವನ್ನು ತಿನ್ನುವುದೆಂದು ತಾತ್ಪರ್ಯ ನೀಡಿರುವರು. ಅಂದರೆ, ಅಲ್ಲಾಹು ಹೇಳುತ್ತಾನೆ: ಅನುಚಿತವೂ ಅನರ್ಹವೂ ಆದ ಮಾರ್ಗವನ್ನವಲಂಬಿಸಿ ಇತರರ ಧನವನ್ನು ತಿನ್ನುವುದು ಅಕ್ರಮವಾಗಿದೆ, ಅನ್ಯಾಯವೂ ಆಗಿದೆ. ನಿಮ್ಮ ಈ ವರ್ತನೆಯು ಅಲ್ಲಾಹು ನಿರ್ಣಯಿಸಿದ ಪರಿಧಿಯನ್ನು ಉಲ್ಲಂಘಿಸುವಂಥದ್ದಾಗಿದೆ. ಅದೇ ರೀತಿ ಮನುಷ್ಯರೊಡನೆ ಅನ್ಯಾಯವಾಗಿ ವರ್ತಿಸುವುದೂ ಆಗಿದೆ. ಆದುದರಿಂದ ನೀವು ಎರಡು ಬಗೆಯ ಪಾಪ ಮಾಡಿದವರಾಗಿ ದೈವ ಸನ್ನಿಧಿಯಲ್ಲಿ ಹಾಜರಾಗಬೇಕಾಗುವುದು. ಅಲ್ಲಾಹುವಿಗೆ ಯಾರ ಆಶ್ರಯವೂ ಬೇಕಾಗಿಲ್ಲ. ಅವನಿಗೆ ನಮ್ಮ ಸೇವೆಯ ಆವಶ್ಯಕತೆಯಿಲ್ಲ. ನಮ್ಮ ಧನದ ಅಗತ್ಯವಿಲ್ಲ; ನಮ್ಮ ಸಂಪತ್ತಿನ ಅಗತ್ಯವಿಲ್ಲ. ನಮ್ಮ ಶೋಧನೆಯ ಅಗತ್ಯವೂ ಕೈಗಾರಿಕೆಗಳ ಆವಶ್ಯಕತೆಯೂ ಅವನಿಗಿಲ್ಲ. ಬದಲಾಗಿ ಅವನು ನಮಗೆ ಬೇಕಾದ ಎಲ್ಲವನ್ನೂ ನೀಡುತ್ತಾನೆ. ನಾವು ಅಲ್ಲಾಹನನ್ನು ಅನುಸರಿಸಬೇಕು ಎಂಬುದು ನಾವು ಅವನಿಗೆ ಸಲ್ಲಿಸುವ ಋಣವಾಗಿದೆ. ಅವನು ನಮಗೆ ಅಸಂಖ್ಯಾತ ಅನುಗ್ರಹಗಳನ್ನು ನೀಡಿದ್ದಾನೆ. ನಾವು ಅದಕ್ಕಾಗಿ ಅವನೊಡನೆ ಕೃತಜ್ಞತೆಯುಳ್ಳವರಾಗಬೇಕು. ಅವನ ಸತ್ತೆಯ ಹಾಗೂ ಅವನ ಗುಣಸ್ವಭಾವಗಳ ಜ್ಞಾನವನ್ನು ಗಳಿಸಿಕೊಂಡು ಸದಾ ಅವನನ್ನು ಸ್ತುತಿಸುತ್ತಿರುವವರಾಗಬೇಕು. ಅವನ ಪಾವನತೆಯನ್ನು ಕೀರ್ತಿಸುವವರಾಗಬೇಕು. ಅವನ ಮಹತ್ವವನ್ನು ಕೊಂಡಾಡುವವರಾಗಬೇಕು. ಅಲ್ಲಾಹು ಹೇಳುತ್ತಾನೆ, ಅನ್ಯರ ಧನವನ್ನು ಅನುಚಿತವಾಗಿಯೂ ಅನ್ಯಾಯವಾಗಿಯೂ ಕೈವಶಪಡಿಸುವುದು ಅವನು ನಿರ್ಣಯಿಸಿದ ಹದ್ದನ್ನು ಮೀರುವುದಾಗಿದೆ ಎಂದು. ನೀವು ಅಲ್ಲಾಹು ನಿಶ್ಚಯಿಸಿದ ಎಲ್ಲೆಯನ್ನು ಮೀರುವವರಾದರೆ, ಇತರರ ಹಕ್ಕನ್ನು ಕಿತ್ತು ತಿನ್ನುವಿರಾದರೆ "ನಿಮ್ಮನ್ನು ನಾನು ಅಗ್ನಿಯಲ್ಲಿ ಹಾಕುವೆನು; ಅಲ್ಲಾಹನಿಗೆ ಅದು ಸುಲಭದ ಕೆಲಸವಾಗಿದೆ" ಎಂದು ಅವನು ಹೇಳಿರುವನು. ನೀವು ಅಲ್ಲಾಹು ನಿಶ್ಚಯಿಸಿರುವ ಸೀಮೆಯನ್ನು ಉಲ್ಲಂಘಿಸಿದರೆ, ಮಾನವನ ಹಕ್ಕನ್ನು ಚ್ಯುತಿಗೊಳಿಸಿದರೆ ಅವನ ಕೋಪದಿಂದಲೂ ಶಿಕ್ಷೆಯಿಂದಲೂ ನಿಮ್ಮನ್ನು ರಕ್ಷಿಸಲು ಲೋಕದ ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ. ಇದು ಒಂದು ಸಾಮಾನ್ಯ ತರದ ಪಾಪವಲ್ಲ; ಬಹಳ ಆಪತ್ಕರವಾದ ಪಾಪವಾಗಿದೆ ಎಂದು ನಮಗೆ ವಿವರಿಸಿ ತಿಳಿಸಲ್ಪಟ್ಟಿದೆ. ಕೆಲವು ಅಹ್ಮದೀಯರ ಬಗ್ಗೆ ಇಂತಹ ಕೆಲವು ಕೇಸುಗಳು ಉಂಟಾಗಿವೆ. ಅದು ನನಗೆ ಅತಿಯಾದ ವೇದನೆಯನ್ನುಂಟುಮಾಡಿದೆ. ಆದುದರಿಂದಲೇ ನಾನೀ ಕಾರ್ಯಗಳನ್ನು ಇಲ್ಲಿ ವಿವರಿಸುತ್ತಿರುವುದು. ಅಂದರೆ, ನ್ಯಾಯಾಲಯಗಳಿಂದ ನೀವು ತರುವ ತೀರ್ಮಾನಗಳು ಅನ್ಯರ ಧನವನ್ನು ಅಪಹರಿಸಿಕೊಳ್ಳಲು ನಿಮಗೆ ಹಕ್ಕನ್ನು ನೀಡುವುದಿಲ್ಲ. ಕಾರಣ, ಮರಣಾನಂತರ ನೀವು ಹಾಜರಾಗಬೇಕಾದುದು ಕೋರ್ಟಿನ ಮುಂದೆಯಲ್ಲ. ಯಾರ ಮುಂದೆ ನೀವು ಹಾಜರಾಗಬೇಕೋ ಆ ಪರಮಾತ್ಮನು ಎಲ್ಲಾ ಶಕ್ತಿಗಳ ಒಡೆಯನಾಗಿರುವನು. ಅವನು ಈಗಲೇ ನಿಮ್ಮನ್ನು ಎಚ್ಚರಿಸಿದ್ದಾನೆ. ನೀವು ಅನೀತಿಯಿಂದಲೂ ಅಕ್ರಮವಾಗಿಯೂ ವರ್ತಿಸುವಿರಾದರೆ ಮತ್ತೆ ಅವನ ಪ್ರಜ್ವಲಿಸುವ ಅಗ್ನಿಯಿಂದ ಪಾರಾಗಲು ನಿಮ್ಮಿಂದ ಸಾಧ್ಯವಾಗಲಾರದು. ಇದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಿರಿ. ಅನ್ಯರ ಒಂದು ಚಿಕ್ಕಾಸು ಕೂಡಾ ಅನ್ಯಾಯವಾದ ರೀತಿಯಲ್ಲಿ ಕೈವಶಪಡಿಸಲು ನೀವು ಧೈರ್ಯಪಡಬೇಡಿರಿ. ಒಮ್ಮೆ ಒಬ್ಬ ಸಹಾಬಿ (ಅನುಚರ) ತಿಳಿಯದೆ ಒಂದು ಖರ್ಜೂರವನ್ನು ಕೈಗೆತ್ತಿಕೊಂಡಾಗ ಪೈಗಂಬರರು ಅದನ್ನು ಎಸೆದು ಬಿಡುವಂತೆ ಆಜ್ಞಾಪಿಸಿದರು. ಅದನ್ನು ತಿನ್ನದಂತೆ ವಿರೋಧಿಸಿ. ಅನ್ಯರ ಒಂದು ಖರ್ಜೂರವನ್ನು ಸಹ ಅಪಹರಿಸಿಕೊಂಡು ಅನ್ಯಾಯವಾಗಿ ಅದನ್ನು ಭಕ್ಷಿಸುವ ವ್ಯಕ್ತಿ ನರಕದಲ್ಲಿ ಪ್ರವೇಶಿಸುವನು ಎಂದು ಮುಹಮ್ಮದ್ ಪೈಗಂಬರ್ (ಸ) ಎಚ್ಚರಿಸಿದರು. ಇಲ್ಲಿ ಧನ ಹೆಚ್ಚೋ ಕಡಿಮೆಯೋ ಎಂಬುದು ಪ್ರಶ್ನೆಯಲ್ಲ. ಒಂದು ಪೈಸೆ ಅಥವಾ ಒಂದು ಕೋಟಿ ರೂಪಾಯಿಯ ಪ್ರಶ್ನೆಯಿಲ್ಲ. ನಿಜವಾದ ಪ್ರಶ್ನೆ ದೇವರ ಆಜ್ಞೆಯನ್ನು ಮೀರುವುದಾಗಿದೆ. ದೇವನು ಹೇಳುತ್ತಾನೆ; ನೀವು ನನ್ನ ಆಜ್ಞೆಯನ್ನು ಉಲ್ಲಂಘಿಸುತ್ತಾ ನನ್ನ ಪ್ರಜೆಗಳನ್ನು ಕಷ್ಟಕ್ಕೀಡುಮಾಡಿ ಅವರನ್ನು ಒಂದು ತರದಲ್ಲಿ ಕೊಲ್ಲಲು ಶ್ರಮಿಸುವುದಾದರೆ ನೀವು ನರಕಕ್ಕೆ ಹೋಗುವಿರಿ ಎಂದು, ಆದರಿಂದ ರಕ್ಷಣೆ ಹೊಂದಲು ನಿಮ್ಮಿಂದ ಸಾಧ್ಯವಾಗಲಾರದು. ○

ಅನುವಾದ: ಐ ಎ.

# ಇಸ್ಲಾಮಿಕ ರಾಜ್ಯಾಡಳಿತೆ★

—ಸರ್ ಮುಹಮ್ಮದ್ ಝಫರುಲ್ಲಾಹ್ ಖಾನ್
ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ.

ಇಸ್ಲಾಮಿಕ ರಾಜ್ಯಾಡಳಿತ ಕ್ರಮದ ಕುರಿತು ಭಾಷಣ ಮಾಡಲು ನನ್ನನ್ನು ಆಮಂತ್ರಿಸಿ ಗೌರವಿಸಿದುದಕ್ಕಾಗಿ ಈ ಸಭೆಯ ಸಂಘಟಕರಿಗೆ ನಾನು ಹೃತ್ಪೂರ್ವಕವಾಗಿ ಕೃತಜ್ಞನಾಗಿದ್ದೇನೆ.

ಜಗತ್ತಿನ ಮೇಲೆ ಸರ್ವಾಧಿಕಾರ ದೇವನಿಗೆ ಮಾತ್ರ ಇರುವುದೆಂದು ಇಸ್ಲಾಮ್ ಧರ್ಮದ ಮೂಲಭೂತ ತತ್ವವಾಗಿದೆ. ಆದರೆ ಮನುಷ್ಯರಿಗೆ ದೇವನ ಪ್ರತಿನಿಧಿಗಳೆಂಬ ನೆಲೆಯಲ್ಲಿ ಕೆಲವು ವಲಯಗಳಲ್ಲಿ ಅಧಿಕಾರ ನೀಡಲಾಗಿದೆ. ಈ ಅಧಿಕಾರ ಒಂದು ವಿಶ್ವಸ್ತ ಹೊಣೆಗಾರಿಕೆಯ ರೂಪದಲ್ಲಿ ಈಯಲಾಗಿದೆ. ಈ ಹೊಣೆಗಾರಿಕೆಯ ನಿರ್ವಹಣೆಯ ಕುರಿತು ದೇವನಿಗೆ ಲೆಕ್ಕವೊಪ್ಪಿಸಿ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗಿದೆ. ಪವಿತ್ರ ಪೈಗಂಬರರು ಈ ರೀತಿ ನುಡಿದಿರುವರು. ನಿಮ್ಮಲ್ಲಿ ಪ್ರತಿಯೊಬ್ಬನೂ ಒಬ್ಬ ಮೇಲ್ವಿಚಾರಕನಾಗಿರುವನು: ನಿಮ್ಮ ಮೇಲ್ವಿಚಾರಕ್ಕೆ ನೀಡಲ್ಪಟ್ಟಿರುವುದರ ಕುರಿತು ನಿಮ್ಮ ಪೈಕಿ ಪ್ರತಿಯೊಬ್ಬರೂ ಲೆಕ್ಕವೊಪ್ಪಿಸಬೇಕಾಗಿದೆ.

ದೇವನ ಸಾರ್ವಭೌಮಾಧಿಕಾರ ಜಗತ್ತಿನಾದ್ಯಂತ ವ್ಯಾಪಿಸಿರುವ ಕಾರಣ ಇಸ್ಲಾಮಿಕ ದೃಷ್ಟಿಯಲ್ಲಿರುವ ರಾಜ್ಯ ಜಾಗತಿಕ ರಾಜ್ಯವಾಗಿದೆ, ಅದು ಆಂತರಿಕ ಸ್ವಾತಂತ್ರ್ಯವನ್ನು ಗಳಿಸಿದ ರಾಜ್ಯಗಳ ಒಂದು ಒಕ್ಕೂಟವಾಗಿದ್ದು, ಅಭಿಪ್ರಾಯ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು, ಶಾಂತಿ ಪರಿಪಾಲನೆ ಮತ್ತು ಜಗತ್ತಿನಾದ್ಯಂತ ಮಾನವ ಕೋಟಿಗೆ ಕಲ್ಯಾಣವನ್ನುಂಟುಮಾಡುವ ಕಾರ್ಯಕ್ರಮಗಳನ್ನು ರೂಪಿಸಲಿಕ್ಕಾಗಿ ಪರಸ್ಪರ ಸಹಕರಿಸಲಿಕ್ಕಾಗಿ ಈ ರಾಜ್ಯಗಳು ಒಟ್ಟಿಗೆ ಸೇರಿವೆ. ಈ ಧ್ಯೇಯೋದ್ದೇಶದೊಂದಿಗೆ ಪವಿತ್ರ ಪೈಗಂಬರರಿಂದ ಸ್ಥಾಪಿತವಾದ ಇಸ್ಲಾಮಿಕ ರಾಜ್ಯ ಕ್ಷಿಪ್ರವಾಗಿ ಪಶ್ಚಿಮಾಭಿಮುಖವಾಗಿ ಈಜಿಪ್ಟ್, ಉತ್ತರಕ್ಕೆ ಆಫ್ರಿಕ ಮತ್ತು ಸ್ಪೈನ್ ವರೆಗೂ ಪೂರ್ವಕ್ಕೆ ಇರಾಕ್, ಇರಾನ್, ಮಧ್ಯ ಏಶ್ಯಾದಿಂದ ಚೀನದ ಗಡಿಯ ವರೆಗೆ ವ್ಯಾಪಿಸಿತು. ಈ ರಾಷ್ಟ್ರದ ಪ್ರಜೆಗಳ ರಾಷ್ಟ್ರೀಯತೆ ಒಂದೇ ಆಗಿದ್ದು ಏಕಮಾತ್ರ ರಾಷ್ಟ್ರಾಧ್ಯಕ್ಷರಾದ "ಖಲೀಫ"ರಿಗೆ ಸಂಪೂರ್ಣ ಬೆಂಬಲನೀಡುವವರಾಗಿದ್ದರು. ಖಲೀಫರು ಇಸ್ಲಾಮಿಕ ರಾಷ್ಟ್ರದ ಸಂರಕ್ಷಕರೂ ಏಕೋದ್ದೇಶದಿಂದ ಪ್ರಭಾವಿಕರಾಗಿ ಸಂಘಟಿತರಾದ ಬಹುದೊಡ್ಡ ಜನ ಸಮೂಹದ ಏಳಿಗೆಗೆ ಶ್ರಮಿಸುವವರೂ ಆಗಿದ್ದರು. ಆದರೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಅಧಃಪತನದಿಂದಾಗಿ ಈ ಘನೋದ್ದೇಶವು ಅವಗಣಿಸಲ್ಪಟ್ಟಿತು. ಕೇಂದ್ರದ ಅಧಿಕಾರವು ಕ್ರಮೇಣ ಬಲಹೀನವಾಯಿತು. ಕೊನೆಗೆ ಖಲೀಫರ ಜೊತೆಗಿರುವ ಸಂಬಂಧ ಕೇವಲ ಔಪಚಾರಿಕವಾಗಿ ಪರಿಣಮಿಸಿ ಸ್ಥಳೀಯ ಆಡಳಿತೆಗಾರರು ಸ್ವತಂತ್ರರಾದರು.

ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡಿದರೆ ಆ ಪವಿತ್ರ ಗ್ರಂಥ ಎರಡು ರೀತಿಯ ರಾಜ್ಯಗಳ ಕುರಿತು ಸೂಚಿಸುವುದಾಗಿ ತಿಳಿಯುತ್ತದೆ. ಈ ರಾಜ್ಯಗಳ ಉದ್ದೇಶ ಲಕ್ಷ್ಯಗಳು ಒಂದೇ ಆಗಿದ್ದರೂ ಅವುಗಳ ಅಧಿಕಾರದ ಪರಿಧಿ ಮತ್ತು ಸ್ಥಾಪನೆಯ ರೀತಿ ಭಿನ್ನವಾಗಿರುವುದಾಗಿ ವ್ಯಕ್ತವಾಗುತ್ತದೆ. ರಾಜ್ಯದ ಅಧ್ಯಕ್ಷ ಲೌಕಿಕ ಮತ್ತು ಆಧ್ಯಾತ್ಮಿಕ ವಲಯಗಳಲ್ಲಿ ಅಧಿಕಾರ ಮಾಡುವುದು ಇಸ್ಲಾಮಿಕ ರಾಜ್ಯದ ಉದ್ದೇಶವಾಗಿದೆ. ಪವಿತ್ರ ಖುರ್ ಆನ್ ಈ ರೀತಿ ಹೇಳುತ್ತದೆ:

> ನಿಮ್ಮ ಪೈಕಿ ನಂಬಿ ಸತ್ಕರ್ಮಗಳನ್ನು ಮಾಡುವವರಿಗೆ ದೇವನು ವಾಗ್ದಾನ ಮಾಡಿರುವನು: ಅವನು ಅವರ ಹಿಂದಿನ ಜನರನ್ನು ದೈವಪ್ರತಿನಿಧಿಗಳನ್ನಾಗಿ ಮಾಡಿದಂತೆ ಅವರನ್ನೂ ದೈವ ಪ್ರತಿನಿಧಿಗಳನ್ನಾಗಿ ಮಾಡುವನು. ಅವರಿಗಾಗಿ ಅವನಿಂದ ಆರಿಸಲ್ಪಟ್ಟ ಧರ್ಮವನ್ನು ಅವನು ಸುಸ್ಥಾಪಿಸುವನು. ಅವರ ಭಯವನ್ನು ಹೋಗಲಾಡಿಸಿ ಅವರಿಗೆ ಭದ್ರತೆಯನ್ನೂ ಶಾಂತಿಯನ್ನೂ ನೀಡು

★ 28-9-79ರಂದು ಸ್ವಿಜರ್ಲೆಂಡಿನ ಝೂರಿಚ್ ನಗರದಲ್ಲಿ ಅಹ್ಮದಿಯಾ ಕನ್‌ವೆನ್ಷನ್‌ನಲ್ಲಿ ಮಾಡಿದ ಭಾಷಣ

ವನು. ಅವರು ನನ್ನನ್ನೇ ಆರಾಧಿಸಬೇಕಾಗಿದೆ. ನನಗೆ ಸಾಟಿಯಾಗಿ ಯಾರನ್ನೂ ಸ್ವೀಕರಿಸಬಾರದು. ಅನಂತರ ಆಜ್ಞಾ ಲಂಘನೆ ಮಾಡುವವರು ದ್ರೋಹಿಗಳಾಗಿರುವರು (24:56)

ಖಲೀಫರ ಆಯ್ಕೆ ಚುನಾವಣೆಯ ಮೂಲಕವಾಗಿದೆ. ಖಲೀಫರು ನೇರವಾಗಿ ಚುನಾಯಿಸಲ್ಪಡಬಹುದು. ಆದರೆ ಪವಿತ್ರ ಪೈಗಂಬರರ ಎರಡನೆಯ ಖಲೀಫರಾದ ಹಝ್‌ರತ್ ಉಮರ್ ಅವರನ್ನು ಅವರ ಹಿಂದಿನ ಖಲೀಫರು ನಾಮನಿರ್ದೇಶಗೈದಂತೆ ಹಿಂದಿನ ಖಲೀಫರಿಂದ ಯಾರಾದರೂ ನಾಮಕರಣಗೊಳಿಸಲ್ಪಟ್ಟರೆ ಅವರ ನಾಮಕರಣ ನಾಮ ನಿರ್ದೇಶ ಮಾಡುವ ಖಲೀಫರ ಮರಣದ ನಂತರ ಜನರ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ.

ಖಲೀಫರ ಅಧಿಕಾರ ಅವರ ಜೀವನ ಪರ್ಯಂತವಿರುತ್ತದೆ. ಅವರಿಗೆ ಅಧಿಕಾರ ತ್ಯಾಗ ಮಾಡುವ ಹಕ್ಕು ಇರುವುದಿಲ್ಲ. ಅವರನ್ನು ಅಧಿಕಾರ ತ್ಯಾಗ ಮಾಡಲು ನಿರ್ಬಂಧಿಸಬಾರದು. ಅವರು ತನ್ನ ಪೂರ್ಣ ಸಮಯವನ್ನು ಮತ್ತು ತನ್ನ ಪೂರ್ಣ ವ್ಯಕ್ತಿಗತ ಸಾಮರ್ಥ್ಯಗಳನ್ನು ಜನರ ಸೇವೆಗಾಗಿ ವಿನಿಯೋಗಿಸಬೇಕಾಗಿದೆ. ದೈವಿಕ ನಿಯಮಗಳ ಮತ್ತು ಅವುಗಳು ನೆಲೆಗೊಂಡಿರುವ ತತ್ವಗಳ ಆಧಾರದ ಮೇಲೆ ಖಲೀಫರು ಆಡಳಿತೆ ನಡೆಸಬೇಕಾಗಿದೆ. ದೇವನ ಆಜ್ಞೆಗಳನ್ನು ಖಲೀಫರು ಅಕ್ಷರಶಃವಾಗಿಯೂ ಅವುಗಳಲ್ಲಿ ಅಂತರ್ಲೀನವಾದ ಉದ್ದೇಶ ಲಕ್ಷ್ಯಗಳನ್ನು ಪರಿಗಣಿಸಿಯೂ ಜನರಿಗೆ ಅತ್ಯಧಿಕ ಗುಣಕರವಾದ ರೀತಿಯಲ್ಲಿ ಜಾರಿಗೊಳಿಸಬೇಕಾಗಿದೆ.

ಖಲೀಫ ತನ್ನ ನಿರ್ಧಾರಗಳನ್ನು ಮತ್ತು ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಜನರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಪರಿಗಣಿಸಿ ನಿರ್ಣಯಿಸಬೇಕಾಗಿದೆ. ತನ್ನ ನಿರ್ಧಾರಗಳನ್ನು ಕೈಗೊಳ್ಳಲು ಸಹಕಾರಿಯಾದ ವಿಷಯ ಸಂಗ್ರಹಿಸಲಿಕ್ಕಾಗಿಯೂ, ತಾತ್ಕಾಲಿಕ ಸಮಸ್ಯೆಗಳನ್ನು ಪರಿಹರಿಸಲಿಕ್ಕಾಗಿಯೂ ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಜನರ ಪ್ರತಿನಿಧಿಗಳಿಗೆ ತರಬೇತಿಯನ್ನು ನೀಡಲಿಕ್ಕಾಗಿಯೂ ಈ ಅಭಿಪ್ರಾಯ ವಿನಿಮಯ ಸಹಕಾರಿಯಾಗಿದೆ (ಪವಿತ್ರ ಖುರ್‌ಆನ್ 42:39 ನೋಡಿರಿ). ಜನರ ಕುರಿತು ಹೇಳುವುದಾದರೆ, ಆಡಳಿತ ವ್ಯವಸ್ಥೆಗಾಗಿ ಅಧಿಕಾರ ನೀಡಲ್ಪಟ್ಟವರಿಗೆ ಅವರು ಸಹಕಾರ ನೀಡಿ ಅವರ ಆಜ್ಞೆಗಳನ್ನು ಪಾಲಿಸುವುದು ನಿರ್ಬಂಧಕರವಾಗಿದ್ದು ಈ ಕರ್ತವ್ಯವನ್ನು ದೇವನನ್ನೂ ಅವನ ಪೈಗಂಬರರನ್ನೂ ಅನುಸರಿಸುವಂತೆಯೇ ನಿರ್ವಹಿಸಬೇಕಾಗಿದೆ. (ಪವಿತ್ರ ಖುರ್‌ಆನ್ 4:60 ನೋಡಿರಿ)

ಖಿಲಾಫತ್ ವ್ಯವಸ್ಥೆ ಲೌಕಿಕ ಮತ್ತು ಆಧ್ಯಾತ್ಮಿಕ ಸ್ವಭಾವಗಳನ್ನು ಹೊಂದಿದೆ. ಖಲೀಫ ಜನ ಚುನಾಯಿತ ಪ್ರತಿನಿಧಿಯಾಗಿದ್ದು ಅವರಿಗೆ ದೈವಸಹಾಯದ ವಾಗ್ದಾನವನ್ನು ನೀಡಲಾಗಿದೆ. ಆದರೆ ಈ ವಾಗ್ದಾನ ನೆರವೇರಲು ಖಿಲಾಫತ್ ವ್ಯವಸ್ಥೆ ಪವಿತ್ರ ಖುರ್‌ಆನಿನ ನಿರ್ದೇಶಗಳನ್ನು ಪಾಲಿಸುವಂತಹ ಸ್ಥಿತಿಯಲ್ಲಿರಬೇಕೇ ಹೊರತು ದುರದೃಷ್ಟಕರವಾಗಿ ಮುಸ್ಲಿಮ್ ಜನಾಂಗದ ಚರಿತ್ರೆಯಲ್ಲಿ ಹೆಚ್ಚಾಗಿ ಸಂಭವಿಸಿದಂತೆ ನಾಮ ಮಾತ್ರ ಖಿಲಾಫತ್ ಆಗಿರಬಾರದು.

ಇನ್ನೊಂದು ರೀತಿಯ ಇಸ್ಲಾಮಿಕ ರಾಜ್ಯ ವ್ಯವಸ್ಥೆಯಲ್ಲಿ ರಾಜ್ಯದ ಪ್ರಮುಖ ಆಡಳಿತಾಧಿಕಾರಿ ಜನರ ಪ್ರತಿನಿಧಿಯಾಗಿ ಖಲೀಫರಿಗಿರುವಂತಹ ಕರ್ತವ್ಯಗಳನ್ನೂ ಹೊಣೆಗಾರಿಕೆಗಳನ್ನೂ ಹೊಂದಿದ್ದರೂ ಆ ವ್ಯಕ್ತಿಯ ಆಡಳಿತಾವಧಿ, ಆಡಳಿತೆಯ ಅಧಿಕಾರದ ಪರಿಧಿ, ಅಧಿಕಾರದ ಕಟ್ಟುಪಾಡುಗಳು, ಮೊದಲಾದುವುಗಳು ಯಾವ ರಾಜ್ಯದ ಸಂವಿಧಾನವನ್ನನುಸರಿಸಿ ಆ ವ್ಯಕ್ತಿ ಚುನಾಯಿತನಾಗಿರುವನೋ ಆ ರಾಜ್ಯದ ಸಂವಿಧಾನಕ್ಕನುಗುಣವಾಗಿ ಇರಬೇಕಾಗಿದೆ. ಈ ವಿಷಯದಲ್ಲಿಯೂ ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತದೆ:

> ಅಧಿಕಾರವನ್ನು ಅದನ್ನು ನಿರ್ವಹಿಸಲು ಯೋಗ್ಯರಾದವರಿಗೆ ಕೊಡಬೇಕೆಂದು ಅಲ್ಲಾಹು ಆಜ್ಞಾಪಿಸುತ್ತಾನೆ. (4:59)

ಆಡಳಿತ ವ್ಯವಸ್ಥೆಯಲ್ಲಿ ಸಾರ್ವಭೌಮಾಧಿಕಾರ ಇರುವುದು ಜನರಿಗೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ರಾಜ್ಯಾಡಳಿತವನ್ನು ನಿರ್ವಹಿಸಲು ಅತ್ಯಂತ ಯೋಗ್ಯರಾದವರಿಗೆ ಅಧಿಕಾರ ನೀಡಬೇಕೆಂದು ಜನರಿಗೆ ದೇವನು ಆಜ್ಞಾಪಿಸಿರುವನು. ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸಲು ಯೋಗ್ಯರಾದವರನ್ನು ಚುನಾಯಿಸಲಿಕ್ಕಿರುವ ಹಕ್ಕನ್ನು ಒಂದು ಪವಿತ್ರ ಹೊಣೆಗಾರಿಕೆಯನ್ನಾಗಿ ಈ ವಚನವು ಪರಿವರ್ತಿಸಿದೆ. ಮೇಲಿನ ಪವಿತ್ರ ಖುರ್‌ಆನ್ ವಚನ ಹೀಗೆ ಮುಂದುವರಿಯುತ್ತಿದೆ:

ನೀವು ನ್ಯಾಯ ತೀರ್ಮಾನ ಮಾಡಲು ಅಥವಾ ಜನರ ಮೇಲೆ ಆಡಳಿತೆ ನಡೆಸಲು ಕರೆಯಲ್ಪಟ್ಟರೆ ನೀವು ಆ ಕರ್ತವ್ಯವನ್ನು ನೀತಿ ಮತ್ತು ನ್ಯಾಯ ಪೂರ್ವಕವಾಗಿ ನಿರ್ವಹಿಸಬೇಕು.

ಈ ವಚನದಲ್ಲಿ ಇಬ್ಬಗೆಯ ಹೊಣೆಗಾರಿಕೆಗಳನ್ನು ವಿಧಿಸಲಾಗಿದೆ. ಪ್ರಥಮವಾಗಿ ತಮ್ಮ ಪ್ರತಿನಿಧಿಗಳನ್ನು ಜಾಣ್ಮೆಯಿಂದ ಆಯ್ಕೆ ಮಾಡಬೇಕೆಂದು ಜನರೊಡನೆ ಆಜ್ಞಾಪಿಸಲಾಗಿದೆ. ದ್ವಿತೀಯವಾಗಿ ಆಯ್ಕೆಯಾದ ಜನತಾ ಪ್ರತಿನಿಧಿಗಳು ತಮ್ಮ ಕರ್ತವ್ಯಗಳನ್ನು ನೀತಿ ಯುತವಾಗಿಯೂ ನ್ಯಾಯ ಪೂರ್ಣವಾಗಿಯೂ ನಿರ್ವ ಹಿಸಬೇಕೆಂದು ಆಜ್ಞೆ ನೀಡಲಾಗಿದೆ. ಇದು ಉತ್ತಮ ಆಡಳಿತ ವ್ಯವಸ್ಥೆಯ ಮುಖ್ಯ ಸತ್ವವಾಗಿದೆ. ಈ ವಚನ ಈ ರೀತಿ ಮುಗಿತಾಯವಾಗುತ್ತದೆ:

ದೇವನು ಯಾವುದರ ಕುರಿತು ಎಚ್ಚರಿಕೆ ನೀಡು ತ್ತಿರುವನೋ ಆ ಎಚ್ಚರಿಕೆ ಖಂಡಿತವಾಗಿಯೂ ಅತ್ಯುತ್ತಮವಾಗಿದೆ. ದೇವರು ಎಲ್ಲವನ್ನೂ ಆಲಿ ಸುವವನೂ ಎಲ್ಲವನ್ನೂ ನೋಡುವವನೂ ಆಗಿ ದ್ದಾನೆ.

ಈ ವಚನದಿಂದ ಒಂದು ವಿಷಯ ಸ್ಪಷ್ಟವಾಗು ತ್ತದೆ. ಮುಸ್ಲಿಮರು ಕಾಲಾಂತರದಲ್ಲಿ ಈ ಎರಡು ಪ್ರಮುಖ ತತ್ವಗಳನ್ನು ಕೈಬಿಡುವ ಸಂದರ್ಭ ಬರಬಹು ದೆಂದೂ ಇತರ ಆಡಳಿತಾತ್ಮಕ ಪ್ರಯೋಗಗಳನ್ನು ಮಾ ಡಲು ಪ್ರೇರೇಪಿಸಲ್ಪಡುವರೆಂದೂ ಆದರೆ ದೇವನು ಯಾವ ಆಡಳಿತ ವ್ಯವಸ್ಥೆಯ ಕುರಿತು ಮುನ್ನೆಚ್ಚರಿಕೆ ನೀಡಿ ರುವನೋ ಆ ಆಡಳಿತ ವ್ಯವಸ್ಥೆಯೇ ಅತ್ಯುತ್ತಮವೆಂದೂ ಆಡಳಿತದ ಕರ್ತವ್ಯಗಳನ್ನು ನಿರ್ವಹಿಸಲು ಅತ್ಯಂತ ಉಪ ಕಾರಿಯೆಂದೂ ಈ ವಚನ ಸೂಚಿಸುತ್ತದೆ. ದೇವನು ಆಡಳಿತಾಧಿಕಾರಿಗಳ ಕರ್ತವ್ಯ ನಿರ್ವಹಣೆಯನ್ನು ವೀಕ್ಷಿ ಸುತ್ತಿದ್ದಾನೆಂದೂ ಅವರು ಅವನಿಗೆ ಉತ್ತರ ನೀಡಬೇಕಾ ಗಿದೆಯೆಂದೂ ಈ ವಚನ ವ್ಯಕ್ತಗೊಳಿಸುತ್ತದೆ.

ಮುಸ್ಲಿಂ ರಾಜ್ಯದ ರಾಷ್ಟ್ರಾಧ್ಯಕ್ಷ ಸಾರ್ವಜನಿಕ ಆಡಳಿತೆಯನ್ನು ನಿರ್ವಹಿಸಲಿಕ್ಕಾಗಿ ಮಾಡಿದ ಯಾವುದೇ ಕಾರ್ಯಕ್ಕಾಗಿ ಆತನನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ. ಆದರೆ ಒಬ್ಬ ಸಾಮಾನ್ಯ ಪ್ರಜೆ ಯೆಂಬ ನೆಲೆಯಲ್ಲಿ ಕೈಕೊಂಡ ಕಾರ್ಯಗಳಿಗಾಗಿ ಆತನಿಗೆ ಯಾವುದೇ ವಿನಾಯತಿ ದೊರಕಲಾರದು ಮತ್ತು ಆತನ ಮೇಲೆ ಇತರ ಪ್ರಜೆಗಳ ಹಾಗೆಯೇ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಸಾಧ್ಯವಿದೆ.

ಇಸ್ಲಾಮಿಕ ರಾಜ್ಯದ ಕರ್ತವ್ಯಗಳು ಇತರ ಯಾವು ದೇ ಪ್ರಜೋಪಕಾರಿ ರಾಜ್ಯಗಳ ಅಥವಾ ಆಡಳಿತೆಗಾರರ ಕರ್ತವ್ಯಗಳಿಗಿಂತ ಭಿನ್ನವಾಗಿಲ್ಲ. ಆದರೆ ಈ ಕರ್ತವ್ಯಗಳು ಎಲ್ಲಾ ಸಂಸ್ಥೆಗಳ ನಿರ್ವಹಣೆಯಲ್ಲಿ ಪ್ರತಿಬಿಂಬಿಸಬೇಕಾದ ಇಸ್ಲಾಮಿಕ ಚೈತನ್ಯದಿಂದ ಕೂಡಿ ಇರಬೇಕಾದುದು ಅತ್ಯಾವಶ್ಯಕವಾಗಿದೆ. ಈ ಸಂಗತಿಯನ್ನೇ ಪರಮಾದರ ಣೀಯರಾದ ಪೈಗಂಬರರು ಸಂಕ್ಷಿಪ್ತವಾಗಿ ಎಚ್ಚರಿಕೆ ರೂಪವಾಗಿ ಈ ರೀತಿ ವ್ಯಕ್ತಗೊಳಿಸಿರುವರು:–"ನಿಮ್ಮಲ್ಲಿ ಪ್ರತಿಯೊಬ್ಬನೂ ಒಬ್ಬ ಮೇಲ್ವಿಚಾರಕನಾಗಿರುವನು. ನಿಮ್ಮ ಮೇಲ್ವಿಚಾರಕ್ಕೆ ನೀಡಲ್ಪಟ್ಟಿರುವುದರ ಕುರಿತು ನಿಮ್ಮ ಪೈಕಿ ಪ್ರತಿಯೊಬ್ಬರೂ ಜವಾಬ್ದಾರನಾಗಿದ್ದು ಅದರ ಕುರಿತು ದೇವನಿಗೆ ಲೆಕ್ಕವೊಪ್ಪಿಸಬೇಕಾಗಿದೆ." ದೊರೆ ತನ್ನ ಪ್ರಜೆಗಳ ಸಂರಕ್ಷಣೆಗೆ ಜವಾಬ್ದಾರನಾಗಿದ್ದು ಅದರ ಕುರಿತು ದೇವನಿಗೆ ಲೆಕ್ಕವೊಪ್ಪಿಸಬೇಕಾಗಿದೆ. ಪ್ರತಿ ಯೊಬ್ಬ ಪುರುಷ ಅವನ ಕುಟುಂಬದ ಸದಸ್ಯರ ಜವಾ ಬ್ದಾರಿಯನ್ನು ಹೊಂದಿದ್ದು ತನ್ನ ಕರ್ತವ್ಯ ನಿರ್ವಹಣೆಯ ಕುರಿತು ದೇವನಿಗೆ ಲೆಕ್ಕವೊಪ್ಪಿಸಬೇಕಾಗುವುದು. ಪ್ರತಿ ಯೊಬ್ಬ ಸ್ತ್ರೀ ತನ್ನ ಮನೆಯ ಮತ್ತು ಮಕ್ಕಳ ಕುರಿತು ಜವಾಬ್ದಾರಳಾಗಿದ್ದು ಅದರ ಕುರಿತು ಪ್ರಶ್ನಿಸಲ್ಪಡುವಳು. ಪ್ರತಿಯೊಬ್ಬ ನೌಕರನು ಆತನ ಮೇಲ್ವಿಚಾರಣೆಗೆ ನೀಡ ಲ್ಪಟ್ಟ ಯಜಮಾನನ ಆಸ್ತಿಯ ಸಂರಕ್ಷಣೆಯ ಕುರಿತು ಜವಾಬ್ದಾರನಾಗಿದ್ದು ಅದರ ಕುರಿತು ಸಮಾಧಾನಕರ ವಾದ ಉತ್ತರ ನೀಡಬೇಕಾಗಿದೆ.

ಇಸ್ಲಾಮ್ ಧರ್ಮವು ರಾಜ್ಯವನ್ನು ಕುರಿಮಂದೆ ಯ ಮೇಲ್ವಿಚಾರಕನಾದ ಕುರಿಗಾಹಿಯಂತೆ ಪರಿಗಣಿಸು ತ್ತದೆ. ಕುರಿಗಾಹಿ ತನ್ನ ಸುಪರ್ದಿಗೆ ನೀಡಲ್ಪಟ್ಟ ಕುರಿ ಮಂದೆಯನ್ನು ಸಂರಕ್ಷಿಸಿ ಅದರ ಆವಶ್ಯಕತೆಗಳನ್ನು ಪೂರೈ ಸುವ ರೀತಿಯಲ್ಲಿಯೇ ಇಸ್ಲಾಮಿಕ ರಾಜ್ಯವು ತನ್ನ ಪ್ರಜೆಗಳನ್ನು ಕಾಪಾಡಬೇಕಾಗಿದೆ. ಕುರಿಗಾಹಿಯು ಕುರಿಗಳು ಹಿಂಡನ್ನು ಬಿಟ್ಟು ದಾರಿ ತಪ್ಪಿ ಹೋಗದಂತೆ ನೋಡಿಕೊಳ್ಳುತ್ತಾನೆ, ಅವಿತು ದಾಳಿ ಮಾಡಲೆತ್ನಿಸುವ ತೋಳಗಳಿಂದ ಅವುಗಳನ್ನು ಸಂರಕ್ಷಿಸುತ್ತಾನೆ, ಅವುಗಳಿಗೆ ಆಹಾರ ಮತ್ತು ವಸತಿಯನ್ನು ಏರ್ಪಡಿಸುತ್ತಾನೆ, ಅವು ಗಳನ್ನು ಅಂಟು ರೋಗಗಳಿಂದಲೂ ಸಾಮಾನ್ಯ ರೋಗ

ಗಳಿಂದಲೂ ಸುರಕ್ಷಿತಗೊಳಿಸುತ್ತಾನೆ. ಇದೇ ರೀತಿ ಇಸ್ಲಾಮಿಕ ರಾಜ್ಯವು ತನ್ನ ಪ್ರಜೆಗಳನ್ನು ಒಡಕಿನಿಂದಲೂ, ಅವ್ಯವಸ್ಥೆಯಿಂದಲೂ, ಗಲಭೆಯಿಂದಲೂ, ಪೀಡನೆಗಳಿಂದಲೂ ಕಾಪಾಡಬೇಕಾಗಿದೆ. ಪ್ರಜೆಗಳನ್ನು ಹೊರಗಿನ ಆಕ್ರಮಣದಿಂದ ಸುರಕ್ಷಿತರನ್ನಾಗಿ ಮಾಡಿ ಅವರ ಬೌದ್ಧಿಕ ಮತ್ತು ಲೌಕಿಕ ಆವಶ್ಯಕತೆಗಳನ್ನು ಪೂರೈಸುವುದು ಇಸ್ಲಾಮಿಕ ರಾಜ್ಯದ ಕರ್ತವ್ಯಗಳಾಗಿವೆ. ರಾಜ್ಯದ ಸುರಕ್ಷಿತತೆಯನ್ನು ಕಾಪಾಡುವುದು ಅದರ ಸಂರಕ್ಷಣೆಯ ಏರ್ಪಾಡುಗಳನ್ನು ಸುವ್ಯವಸ್ಥೆಗೊಳಿಸುವುದು ಇಸ್ಲಾಮಿಕ ರಾಜ್ಯದ ಪ್ರಾಮುಖ್ಯ ಕರ್ತವ್ಯವಾಗಿದೆ. (ಪವಿತ್ರ ಖುರ್‌ಆನ್ 3:201 ನೋಡಿರಿ).

ಇಸ್ಲಾಮ್ ಕಲ್ಯಾಣ ರಾಷ್ಟ್ರದ (Welfare State) ಕಲ್ಪನೆಯನ್ನು ಪ್ರಥಮವಾಗಿ ಲೋಕದ ಮುಂದಿರಿಸಿತು. ಪರಿಶ್ರಮದ ಘನತೆಯನ್ನು ಅದು ಒತ್ತಿ ಹೇಳಿತು. ಪರಮಾದರಣೀಯರಾದ ಪೈಗಂಬರರು ಒಂದು ಸಂದರ್ಭದಲ್ಲಿ ಒಬ್ಬ ಕೆಲಸಗಾರನ ಒರಟು ಕೈಗಳನ್ನು ತನ್ನ ಮೆದು ಹಸ್ತಗಳಿಂದ ಹಿಡಿದು ಅವುಗಳನ್ನು ಮೆತ್ತಗೆ ನೀವುತ್ತಾ, "ಈ ಕೈಗಳು ದೇವನಿಗೆ ಅತ್ಯಂತ ಪ್ರಿಯವಾಗಿವೆ" ಎಂದು ಹೇಳಿದರು. ರಾಜ್ಯದ ಎಲ್ಲಾ ಪ್ರಜೆಗಳಿಗೆ ಅವರ ಜೀವನಾವಶ್ಯಕ ಸಾಮಾಗ್ರಿಗಳನ್ನು ಒದಗಿಸಿ ಕೊಡುವುದು ಮುಸ್ಲಿಮ್ ರಾಜ್ಯದ ಕರ್ತವ್ಯವಾಗಿದೆಯೆಂದು ಇಸ್ಲಾಮ್ ಧರ್ಮ ಆಜ್ಞಾಪಿಸುತ್ತದೆ. ಪ್ರಜೆಗಳಿಗೆ ಹಿತಕರವಾದ ಸಾಮಾಜಿಕ ಸಂಸ್ಥೆಯು ಕನಿಷ್ಠ ತರವಾದ ಕರ್ತವ್ಯ ಇದಾಗಿದೆಯೆಂದು ಪವಿತ್ರ ಖುರ್‌ಆನ್ ತಿಳಿಸುತ್ತದೆ. (ಪವಿತ್ರ ಖುರ್‌ಆನ್ 20:119–120 ನೋಡಿರಿ).

ಹಝ್ರತ್ ಉಮರ್ ಖಲೀಫರಾಗಿದ್ದಾಗ ಮದೀನ ನಗರದ ಹೊರಗೆ ಒಬ್ಬ ಸ್ತ್ರೀ ಮತ್ತು ಆಕೆಯ ಮೂವರು ಮಕ್ಕಳಿಗೆ ಆಹಾರ ಪದಾರ್ಥಗಳು ಎರಡು ದಿವಸ ಆಕೆಯ ಬಳಿ ಹಣವಿಲ್ಲದ ಕಾರಣ ದೊರಕಿಲ್ಲವೆಂದು ಖಲೀಫರಿಗೆ ಆಕಸ್ಮಾತ್ತಾಗಿ ತಿಳಿಯಿತು. ಹಝ್ರತ್ ಉಮರ್ ಇದು ತಿಳಿದ ಕೂಡಲೇ ಮದೀನಕ್ಕೆ ಹೋಗಿ ಒಂದು ದೊಡ್ಡ ಚೀಲದಲ್ಲಿ ಹಿಟ್ಟು, ಬೆಣ್ಣೆ, ಮಾಂಸ ಮತ್ತು ಖರ್ಜೂರವನ್ನು ತುಂಬಿಸಿ ಆ ಚೀಲವನ್ನು ತಾನೇ ಎತ್ತಲಿಕ್ಕಾಗಿ ಒಬ್ಬ ನೌಕರರನ್ನು ಸಹಾಯಕ್ಕಾಗಿ ಕರೆದರು. ನೌಕರನು ಖಲೀಫರಿಗೆ ಅದನ್ನು ಹೊರಿಸಲು ಇಷ್ಟಪಡದೆ ತಾನೇ ಅದನ್ನು ಹೊರುವುದಾಗಿ ಹೇಳಿದರೂ ಹಝ್ರತ್ ಉಮರ್ ಒಪ್ಪದೆ "ಖಂಡಿತವಾಗಿ ಈ ದಿನ ನೀನು ಈ ಚೀಲವನ್ನು ನನಗಾಗಿ ಹೊರಬಹುದು ಆದರೆ ಅಂತಿಮ ನ್ಯಾಯ ತೀರ್ಮಾನದ ದಿನ ನನ್ನ ಹೊರೆಯನ್ನು ಯಾರು ತಾನೇ ಹೊರಬಲ್ಲರು?" ಎಂದು ಹೇಳಿ ತಾನೇ ಆ ಸಾಮಾಗ್ರಿಗಳನ್ನು ಆ ಸ್ತ್ರೀಯ ಸಮೀಪ ಕೊಂಡೊಯ್ದರು. ಆ ಮಹಿಳೆ ಅವರ ದಯಾ ವರ್ತನೆಗಾಗಿ ಅವರನ್ನು ಆಶೀರ್ವಾದ ಮಾಡಿ "ನೀನು ಉಮರನಿಗಿಂತ ಖಲೀಫನಾಗಲು ಯೋಗ್ಯ. ಅವನಿಗೆ ಜನರ ಸಂಕಷ್ಟ ಗೊತ್ತಿಲ್ಲ" ಎಂದು ಉದ್ಗರಿಸಿದಾಗ ಖಲೀಫರು ನಸುನಗುತ್ತಾ "ತಾಯೀ, ಉಮರ್ ಅಷ್ಟೊಂದು ಕೆಟ್ಟವನಲ್ಲ" ಎಂದು ಹೇಳಿದರು.

ಜನರ ಬೌದ್ಧಿಕ ಬೆಳವಣಿಗೆಗಾಗಿ ಏರ್ಪಾಡು ಮಾಡಬೇಕಾದುದು ಇಸ್ಲಾಮಿಕ ರಾಜ್ಯದ ಕರ್ತವ್ಯವೆಂದು ಪವಿತ್ರ ಪೈಗಂಬರರು ತನ್ನ ವಾದದ ಪ್ರಾರಂಭ ಘಟ್ಟದಿಂದಲೇ ಸ್ಪಷ್ಟಗೊಳಿಸಿದ್ದರು. ಅವರು ಇದರ ಕುರಿತು ಎಷ್ಟರ ಮಟ್ಟಿಗೆ ಆಸಕ್ತರಾಗಿದ್ದರೆಂಬುದು ಒಂದು ಘಟನೆಯಿಂದ ವ್ಯಕ್ತವಾಗುತ್ತದೆ. ಬದರ್ ಯುದ್ಧದ ನಂತರ ಸೆರೆ ಸಿಕ್ಕ ಮಕ್ಕಾ ವಾಸಿಗಳಾದ ವಿದ್ಯಾವಂತರಲ್ಲಿ ಪ್ರತಿಯೊಬ್ಬರು ಹತ್ತು ಹತ್ತು ಮುಸ್ಲಿಮ್ ಮಕ್ಕಳಿಗೆ ಓದು ಬರೆಹ ಕಲಿಸಿ ಸೆರೆಮುಕ್ತರಾಗಬಹುದೆಂದು ಅವರು ಘೋಷಿಸಿದ್ದರು. ಪೈಗಂಬರರ ಅನಂತರ ಆಡಳಿತ ವ್ಯವಸ್ಥೆ ವಹಿಸಿದ ಅವರ ಶಿಷ್ಯರು ಈ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದ ಕಾರಣ ಇರಾನ್ ಮತ್ತು ಬೈಝಾಂಟಿಯನ್ ಸಾಮ್ರಾಜ್ಯಗಳ ಅವಹೇಳನಕ್ಕೆ ಪಾತ್ರರಾದ ಅರೇಬಿಯಾದ ಒಂಟೆ ಸವಾರರು ಲೋಕದ ಉಪಾಧ್ಯಾಯರಾಗಿಯೂ ಜ್ಞಾನದೀವಿಗೆಯನ್ನು ಬೆಳಗುವವರಾಗಿಯೂ ಅಲ್ಪ ಕಾಲದಲ್ಲಿಯೇ ಪರಿವರ್ತನೆಗೊಂಡರು.

ಮದೀನಾ ನಗರದ ಪ್ರಧಾನ ಆಡಳಿತಾಧಿಕಾರಿಯಾಗಿ ಪೈಗಂಬರರು ನಿಯುಕ್ತರಾದ ಕೂಡಲೇ ನ್ಯಾಯದಾನ ವ್ಯವಸ್ಥೆ ಬಹಳ ಉನ್ನತ ಮಟ್ಟದಲ್ಲಿ ಏರ್ಪಾಡುಗೊಳಿಸಲಾಯಿತು. ಹಝ್ರತ್ ಉಮರ್ ಒಬ್ಬ ನ್ಯಾಯಾಧೀಶನಾಗಿ ನಿಯುಕ್ತರಾಗಿದ್ದರು. ಪೈಗಂಬರ್ ಸಹ ಈ ಕರ್ತವ್ಯವನ್ನು ಹೆಚ್ಚಾಗಿ ನಿರ್ವಹಿಸುತ್ತಿದ್ದರು. ವಾದ ವಿವಾದಗಳಲ್ಲಿ ನ್ಯಾಯಾಧೀಶರ ತೀರ್ಮಾನವನ್ನು ಸ್ವೀಕರಿಸುವುದು ಧಾರ್ಮಿಕ ಕರ್ತವ್ಯವಾಗಿದೆಯೆಂದೂ

ನ್ಯಾಯಾಲಯದ ಅಂತಿಮ ತೀರ್ಮಾನದ ಕುರಿತು ಯಾವುದೇ ಆಕ್ಷೇಪ ತನ್ನ ಹೃದಯದಲ್ಲಿಯಾಗಲಿ ಸೂಚಿಸಬಾರದೆಂದೂ ಆ ತೀರ್ಮಾನವನ್ನು ಪೂರ್ಣವಾಗಿ ಮನ್ನಿಸಬೇಕೆಂದೂ ಪವಿತ್ರ ಖುರ್‌ಆನ್ ವಿಧಿಸುತ್ತದೆ. (4:66) ನ್ಯಾಯದಾನ ವ್ಯವಸ್ಥೆ ಚೆನ್ನಾಗಿ ಏರ್ಪಾಡುಗೊಳಿಸುವುದರಿಂದ ಯಾವುದೇ ಅನ್ಯಾಯಕ್ಕೆ ಆಸ್ಪದವಾಗುವುದಿಲ್ಲವಾದರೂ ಪೈಗಂಬರರು ಒಂದು ಪ್ರಬಲವಾದ ಎಚ್ಚರಿಕೆ ನೀಡಿರುವರು. ಒಬ್ಬ ಕಕ್ಷಿಗಾರ ತನ್ನ ಪರವಾಗಿ ಒಂದು ಕೇಸಿನ ತೀರ್ಪನ್ನು ಪಡೆದರೂ ಆತನು ನಿಜವಾಗಿ ಆ ರೀತಿ ಹಕ್ಕನ್ನು ಪಡೆಯಲು ಅರ್ಹನಾಗಿಲ್ಲವಾಗಿದ್ದರೆ ತಾನು ಕೇಸಿನ ತೀರ್ಮಾನದ ಮೂಲಕ ಪಡೆದ ಹಕ್ಕು ಬಾಧ್ಯತೆಗಳು ತನ್ನದೆಂದು ತಿಳಿಯಬಾರದೆಂದು ಅವರು ಹೇಳಿರುವರು. ಒಂದು ಕೇಸಿನ ತೀರ್ಮಾನದ ಏಕಮಾತ್ರ ಕಾರಣದಿಂದ ತನಗೆ ನಿಜವಾಗಿ ಹಕ್ಕು ಇಲ್ಲದ ಒಂದು ವಸ್ತುವಿನ ಮೇಲೆ ಹಕ್ಕನ್ನು ಪಡೆಯಲು ಒಬ್ಬನಿಗೆ ಸಾಧ್ಯವಿಲ್ಲ. ಈ ರೀತಿ ಕೇಸಿನ ತೀರ್ಮಾನದಿಂದಾಗಿ ತನಗೆ ಹಕ್ಕಿಲ್ಲದ ಒಂದು ವಸ್ತುವನ್ನು ಒಬ್ಬನು ತನ್ನದನ್ನಾಗಿ ಮಾಡಲು ಯತ್ನಿಸಿದರೆ ಆತನು ಅಗ್ನಿಯನ್ನು ಮನೆಗೆ ಕೊಂಡೊಯ್ಯುವುದಾಗಿ ತಿಳಿಯಬೇಕೆಂದು ಪೈಗಂಬರರು ಹೇಳಿರುವರು.

ನ್ಯಾಯಾಧೀಶರು ತಮ್ಮ ಕರ್ತವ್ಯಗಳನ್ನು ಪರಿಪೂರ್ಣ ನಿಷ್ಪಕ್ಷವಾಗಿಯೂ ನ್ಯಾಯಯುತವಾಗಿಯೂ ನೆರವೇರಿಸಬೇಕು. ನ್ಯಾಯ ತೀರ್ಮಾನವನ್ನು ಲಂಚದ ಮೂಲಕ ಭ್ರಷ್ಟಗೊಳಿಸಬಾರದು. (ಪವಿತ್ರ ಖುರ್‌ಆನ್ 2:189). ಸುಳ್ಳು ಸಾಕ್ಷ್ಯ ನೀಡಬಾರದು (ಪವಿತ್ರ ಖುರ್‌ಆನ್ 25:73). ಪವಿತ್ರ ಖುರ್‌ಆನ್ ಈ ಕೆಳಗಿನ ವಚನದಲ್ಲಿ ಇದರ ಕುರಿತು ನಿಖರವಾಗಿಯೂ ವಿಸ್ತಾರವಾಗಿಯೂ ವಿವರಿಸುತ್ತದೆ:

> ಸತ್ಯ ವಿಶ್ವಾಸಿಗಳೇ, ನೀವು ನ್ಯಾಯಕ್ಕಾಗಿ ಸ್ಥಿರವಾಗಿ ನಿಲ್ಲುವವರಾಗಿರಿ. ಅಲ್ಲಾಹನಿಗಾಗಿ ಸಾಕ್ಷ್ಯ ನುಡಿಯಿರಿ. ಸಾಕ್ಷ್ಯ ನಿಮ್ಮ ವಿರುದ್ಧವಾಗಿದ್ದರೂ, ನಿಮ್ಮ ತಂದೆ ತಾಯಂದಿರ ವಿರುದ್ಧವಾಗಿದ್ದರೂ, ಹತ್ತಿರದ ಸಂಬಂಧಿಕರ ವಿರೋಧವಾಗಿದ್ದರೂ ನುಡಿಯಿರಿ. ನೀವು ಯಾರ ವಿರುದ್ಧ ಸಾಕ್ಷ್ಯ ನುಡಿಯಬೇಕಾಗಿದೆಯೋ ಅವರು ಬಡವರಾಗಿದ್ದರೂ ಧನಿಕರಾಗಿದ್ದರೂ ಸರಿ, ಅಲ್ಲಾಹನು ನಿಮಗಿಂತ ಹೆಚ್ಚು ಅವರ ಹಿತಕಾಂಕ್ಷಿಯಾಗಿದ್ದಾನೆ. ನೀವು ಯಾವುದೇ ನೀಚ ಆಶೆಯಿಂದ ದಾರಿ ತಪ್ಪಿ ಹೋಗಬೇಡಿರಿ. ನೀವು ನ್ಯಾಯಯುತವಾಗಿ ವರ್ತಿಸಿರಿ. ನೀವು ಸತ್ಯವನ್ನು ಮರೆಮಾಚಿದರೆ ಅಥವಾ ಸಾಕ್ಷ್ಯ ತಪ್ಪಿಸಿದರೆ ನೀವು ಏನೆಲ್ಲಾ ಮಾಡುತ್ತಿರುವರೆಂಬುದನ್ನು ಅಲ್ಲಾಹನು ತಿಳಿದಿರುವನೆಂದು ನೆನಪಿಡಿರಿ. (ಪವಿತ್ರ ಖುರ್‌ಆನ್ 4:136)

ಯಾವುದೇ ಜನಾಂಗದ ವಿರುದ್ಧವಿರುವ ವೈರಭಾವನೆ ಒಬ್ಬ ಮುಸ್ಲಿಮನನ್ನೂ ಮುಸ್ಲಿಮ್ ಸಮಾಜವನ್ನೂ ಮುಸ್ಲಿಮ್ ರಾಜ್ಯವನ್ನೂ ಅನ್ಯಾಯಕರವಾಗಿಯೂ ಅನೀತಿಕರವಾಗಿಯೂ ವರ್ತಿಸುವಂತೆ ಮಾಡಬಾರದೆಂದು ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಸೂಚಿಸುತ್ತದೆ:

> ಓ ಸತ್ಯ ವಿಶ್ವಾಸಿಗಳೇ, ನೀವು ನ್ಯಾಯಯುತ ಸಾಕ್ಷ್ಯನೀಡುತ್ತಾ ಅಲ್ಲಾಹನಿಗಾಗಿ ಸ್ಥಿರಚಿತ್ತರಾಗಿರಿ. ಯಾವುದೇ ಜನಾಂಗದ ಮೇಲೆ ನಿಮಗಿರುವ ವೈರವು ನಿಮ್ಮನ್ನು ಅನ್ಯಾಯ ವರ್ತನೆಗೆ ಪ್ರೇರೇಪಿಸದಿರಲಿ. ನೀವುನ್ಯಾಯಯುತವಾಗಿಯೇ ವರ್ತಿಸಿರಿ. ಅದು ಭಕ್ತಿಮಾರ್ಗವಾಗಿದೆ. ನೀವು ಅಲ್ಲಾಹನಿಗೆ ಭಯಪಡಿರಿ. ನೀವು ಮಾಡುವುದನ್ನೆಲ್ಲಾ ಅಲ್ಲಾಹು ಚೆನ್ನಾಗಿ ತಿಳಿದಿರುವನು (5:9)

ಈ ವಿಶಾಲವಾದ ನ್ಯಾಯದಾನ ವಿಧಾನದ ಚೌಕಟ್ಟಿನೊಳಗೆ ಒಂದು ಮುಸ್ಲಿಮ್ ರಾಜ್ಯ ತನ್ನ ಅವಶ್ಯಕತೆಗಾಗಿಯೂ ಜನರ ಆವಶ್ಯಕತೆಗಾಗಿಯೂ ಅಗತ್ಯವಿರುವ ನಿಯಮಗಳನ್ನು ರಚಿಸಲು ಸ್ವತಂತ್ರವಾಗಿದೆ. ಪ್ರತಿಯೊಂದು ವಿಷಯದ ಕುರಿತು ದೈವಿಕ ಆಜ್ಞೆಗಳನ್ನು ಪಡೆಯಲು ಯತ್ನಿಸುವುದರ ಕುರಿತು ಪವಿತ್ರ ಖುರ್‌ಆನ್ ನಿರುತ್ಸಾಹಗೊಳಿಸುತ್ತದೆ. ಅಂತಹ ಆಜ್ಞಾವಿಧಿಗಳು ಮಿತವಾದುದೂ ಪ್ರಯಾಸಕರವೂ ಆಗುವುದೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. (5:102)

ಮೊದಲೇ ವಿವರಿಸಿದಂತೆ ಮುಸ್ಲಿಮ್ ರಾಜ್ಯದ ಪ್ರಜೆಗಳು ರಾಜ್ಯದ ಅಧಿಕಾರಿಗಳಿಗೆ ಪೂರ್ಣ ವಿಧೇಯತೆ ತೋರಿಸುವ ಕರ್ತವ್ಯವನ್ನು ಹೊಂದಿರುತ್ತಾರೆ. ಪವಿತ್ರ ಖುರ್‌ಆನ್ ಹೀಗೆ ಆಜ್ಞಾಪಿಸುತ್ತದೆ:

> ಓ ಸತ್ಯ ವಿಶ್ವಾಸಿಗಳೇ, ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನೂ ನಿಮ್ಮ ಪೈಕಿ ಅಧಿಕಾರ ಹೊಂದಿದವರನ್ನೂ ಅನುಸರಿಸಿರಿ (4:60)

ಒಂದು ಇಸ್ಲಾಮಿಕ ರಾಜ್ಯದ ಅಧಿಕಾರಕ್ಕೊಳಗಾದ ಅಮುಸ್ಲಿಮ್ ಪ್ರಜೆಗಳ ಹಕ್ಕುಗಳೂ, ಕರ್ತವ್ಯಗಳೂ ಆ ಅಮುಸ್ಲಿಮ್ ಪ್ರಜೆಗಳು ಯಾವುದಾದರೂ ಒಪ್ಪಂದದ ಅನುಸಾರವಾಗಿ ಮುಸ್ಲಿಮ್ ರಾಜ್ಯದಲ್ಲಿ ಜೀವಿಸಲು ತೊಡಗಿದ್ದರೆ ಅದಕ್ಕನುಸಾರವಾಗಿ ಇರುವುದು. ಆ ರೀತಿ ಒಪ್ಪಂದ ಇಲ್ಲದಿರುವಾಗ ಧಾರ್ಮಿಕ ಪರಿಧಿಯಲ್ಲಿಲ್ಲದ ಹಕ್ಕು ಬಾಧ್ಯತೆಗಳ ಕುರಿತು ಮುಸ್ಲಿಮ್ ಮತ್ತು ಅಮುಸ್ಲಿಮ್ ಪ್ರಜೆಗಳ ಮಧ್ಯೆ ಯಾವುದೇ ಭೇದ ಭಾವವಿಲ್ಲ. ಇಸ್ಲಾಮಿಕ ರಾಜ್ಯದಲ್ಲಿ ಧಾರ್ಮಿಕ ನಂಬಿಕೆಗಳ ಕುರಿತು ಪೂರ್ಣ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇರುವುದು. ಪವಿತ್ರ ಖುರ್‌ಆನ್ ಇದನ್ನು ಒತ್ತಿ ಹೇಳುತ್ತದೆ.

> ಧರ್ಮದ ಕಾರ್ಯದಲ್ಲಿ ಯಾವುದೇ ಬಲಾತ್ಕಾರವಿಲ್ಲ. ಸನ್ಮಾರ್ಗ ದುರ್ಮಾರ್ಗದಿಂದ ಸುವ್ಯಕ್ತವಾಗಿದೆ. (2:257)

ಪುನಃ–

> ಸತ್ಯವು ನಿನ್ನ ದೇವನಿಂದ ಬಂದುದಾಗಿದೆ. ಇಷ್ಟವಿದ್ದವರು ಸ್ವೀಕರಿಸಲಿ, ಇಷ್ಟವಿದ್ದವರು ನಿರಾಕರಿಸಲಿ (18:30)

ಪುನಃ–

> ಸ್ಪಷ್ಟವಾದ ಸಾಕ್ಷ್ಯಗಳು ನಿನ್ನ ದೇವನಿಂದ ಬಂದಿವೆ. ಅದನ್ನು ನೋಡಿ ಸ್ವೀಕರಿಸಿದರೆ ಅದರ ಪ್ರತಿಫಲ ಅವನಿಗೆಯೇ ದೊರೆಯುವುದು; ಅದನ್ನು ನೋಡಿಯೂ ಕುರುಡನಂತೆ ವರ್ತಿಸಿದರೆ ಅದರ ದುಷ್ಫಲ ಅವನೇ ಅನುಭವಿಸಬೇಕಾಗುವುದು. (6:105)

ಪವಿತ್ರ ಖುರ್‌ಆನ್ ಮುಂದಿರಿಸಿದ ನ್ಯಾಯವಾದಗಳನ್ನೂ ದೃಷ್ಟಾಂತಗಳನ್ನೂ ವಿವರಣೆಗಳನ್ನೂ ತನ್ನ ಜನರು ಗಮನಿಸದೆ ಇದ್ದಾಗ ಪೈಗಂಬರರಿಗೆ ಅತಿಯಾದ ಮನೋವ್ಯಾಕುಲ ಉಂಟಾಯಿತು. ಪ್ರವಾದಿಗಳ ಮನೋವೇದನೆ ಎಷ್ಟು ತೀವ್ರವಾಗಿತ್ತೆಂದರೆ ದೇವನು ಪದೇ ಪದೇ ಅವರನ್ನು ಈ ರೀತಿ ಸಂತೈಸಿದರು:

> ಅವರು ಈ ಮಹತ್ತಾದ ವಚನಗಳನ್ನು ನಂಬುವುದಿಲ್ಲವೆಂಬ ಚಿಂತೆಯಿಂದ ನೀನು ನಿನ್ನ ಜೀವವನ್ನು ಆಪತ್ತಿಗೊಳಪಡಿಸುತ್ತಿರುವೆ. (ಪವಿತ್ರ ಖುರ್‌ಆನ್ 18:7).

> ಅವರು ಸತ್ಯ ವಿಶ್ವಾಸಿಗಳಾಗಲಿಲ್ಲವೇಕೆಂಬ ಚಿಂತೆಯಿಂದ ನಿನ್ನ ಜೀವವನ್ನು ನಾಶಪಡಿಸುವೆಯಾ? (26:4)

> ನಿನ್ನ ಜೀವ ಅವರ ಕುರಿತು ವ್ಯಾಕುಲದಿಂದ ನಾಶವಾಗದಿರಲಿ. ಅವರು ಮಾಡುವುದನ್ನೆಲ್ಲಾ ಅಲ್ಲಾಹು ಅರಿತಿರುವನು. (35:9)

ದೇವನ ಉದ್ದೇಶ ಸಿದ್ಧಿಯಾಗಲು ಸಂಪೂರ್ಣ ವಿಶ್ವಾಸ ಸ್ವಾತಂತ್ರ್ಯ ಅತ್ಯಾವಶ್ಯವೆಂದು ಪವಿತ್ರ ಖುರ್‌ಆನ್ ವಿವರಿಸುತ್ತದೆ. ನಂಬಿಕೆಯ ವಿಷಯದಲ್ಲಿ ಸಹ ಬಲ ಪ್ರಯೋಗಿಸಲು ದೇವನಿಗೆ ಸುಲಭವಿದೆ. ಅವನಿಗೆ ಮನಸ್ಸಾಕ್ಷಿಯ ಮೇಲೆ ಆಧಿಪತ್ಯವಿದೆ. ಆದರೆ ಜನರು ಅವರಿಗಿಷ್ಟವಿರುವುದನ್ನು ತೀರ್ಮಾನಿಸುವ ಸ್ವಾತಂತ್ರ್ಯವನ್ನು ಅವನು ನೀಡಿರುವನು. ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತದೆ:

> ದೇವನು ಇಚ್ಛಿಸುತ್ತಿದ್ದರೆ ಲೋಕದಲ್ಲಿರುವವರೆಲ್ಲಾ ಸತ್ಯ ವಿಶ್ವಾಸಿಗಳಾಗುತ್ತಿದ್ದರು. ಅವರೆಲ್ಲರೂ ಸತ್ಯ ವಿಶ್ವಾಸಿಗಳಾಗಲು ಬಲ ಪ್ರಯೋಗ ನಡೆಸಬೇಕೆಂದು ನೀನು ಇಚ್ಛಿಸುವೆಯಾ? ( 10 : 100 ).

ಇಸ್ಲಾಮ್ ಧರ್ಮದ ಸಂದೇಶವನ್ನು ಭೂಲೋಕದ ಜನರಿಗೆ ಯಾವ ರೀತಿ ತಲುಪಿಸಬೇಕೆಂಬುದರ ಕುರಿತು ಪವಿತ್ರ ಖುರ್‌ಆನ್ ಸ್ಪಷ್ಟವಾದ ಮಾರ್ಗದರ್ಶನ ನೀಡುತ್ತಿದೆ.

> (ಓ ಪೈಗಂಬರ್ ಮುಹಮ್ಮದ್) ಹೇಳು: ಇದು ನನ್ನ ದಾರಿಯಾಗಿದೆ. ನಾನು ನಿನ್ನನ್ನು ದೇವನ ಕಡೆಗೆ ಕರೆಯುತ್ತೇನೆ. ನಾನು ಮತ್ತು ನನ್ನನ್ನು ಅನುಸರಿಸಿದವರು ಸ್ಪಷ್ಟವಾದ ಜ್ಞಾನವನ್ನು ಗಳಿಸಿರುತ್ತೇವೆ. (12:109)

ಪೈಗಂಬರ್ ಮತ್ತು ಅವರ ಶಿಷ್ಯರ ಮತ್ತು ಎಲ್ಲಾ ಕಾಲದ ಮುಸ್ಲಿಮರ ಕರ್ತವ್ಯ ಜನರನ್ನು ಸತ್ಯ ಸ್ವೀಕಾರಕ್ಕಾಗಿ ಆಹ್ವಾನಿಸುವುದಾಗಿದೆ. ಇದನ್ನು ತತ್ವಗಳ ಮೂಲಕವೂ ತತ್ವಗಳನ್ನನುಸರಿಸಿ ಜೀವಿಸುವುದರ ಮೂಲಕವೂ ಮಾಡಬೇಕಾಗಿದೆ. ತತ್ವ ಮತ್ತು ಆಚರಣೆ ಯಾವುದೇ ಬಲಾತ್ಕಾರದ ಶಂಕೆಯೂ ಉಂಟಾಗದಂತೆ ಇರಬೇಕು. ಪವಿತ್ರ ಖುರ್‌ಆನ್ ಇದರ ಕುರಿತು ಈ ರೀತಿ ಹೇಳುತ್ತದೆ:

> (ಓ ಮುಹಮ್ಮದ್ ಪೈಗಂಬರ್) ನೀನು ದೈವ ಪಥದ ಕಡೆಗೆ ಜಾಣ್ಮೆಯಿಂದಲೂ ಉತ್ತಮ ಉಪ

ದೇಶಗಳ ಮೂಲಕವೂ ಜನರಿಗೆ ಕರೆ ನೀಡು. ಅವರ ಜೊತೆ ಭಿನ್ನಾಭಿಪ್ರಾಯಗಳ ಕುರಿತು ಉತ್ತಮವಾಗಿ ವಾದಿಸು. ದೇವನು ದಾರಿ ತಪ್ಪಿದವರ ಕುರಿತು ಮತ್ತು ಸನ್ಮಾರ್ಗ ಗಳಿಸಿದವರ ಕುರಿತು ಚೆನ್ನಾಗಿ ಅರಿತಿರುವನು. (16:126).

ಇಸ್ಲಾಮಿಕ ರಾಜ್ಯದಲ್ಲಿ ಎಲ್ಲಾ ಮೂಲಭೂತ ಹಕ್ಕುಗಳು ಮುಸ್ಲಿಮ್ ಮತ್ತು ಅಮುಸ್ಲಿಮ್ ಪ್ರಜೆಗಳಿಗೆ ಸಮಾನವಾಗಿ ನೀಡಲ್ಪಟ್ಟಿವೆ. ಇಷ್ಟವಿರುವ ಧರ್ಮವನ್ನು ಸ್ವೀಕರಿಸಿ, ಅವುಗಳ ತತ್ವಗಳ ಪ್ರಕಾರ ನಡೆಯುವುದು ಮತ್ತು ಮತಪ್ರಚಾರಗೈಯುವುದು ಈ ಹಕ್ಕುಗಳಲ್ಲಿ ಸೇರಿವೆ.

"ಇಸ್ಲಾಮ್" ಎಂಬ ಧಾರ್ಮಿಕ ನಾಮದ ಅರ್ಥ ಶಾಂತಿ ಮತ್ತು ಶರಣಾಗತಿಯಾಗಿದೆ. ದೇವನ ಇಚ್ಛೆಗೆ ಶರಣಾಗತನಾಗಿ ದೇವನ ನಿಯಮಗಳನ್ನೂ ಮಾರ್ಗದರ್ಶನಗಳನ್ನೂ ಸ್ವೀಕರಿಸಿ ಶಾಂತಿಯನ್ನು ಪಡೆಯುವುದು ಇದರ ಅರ್ಥವಾಗಿದೆ. ಇಸ್ಲಾಮಿಕ ತತ್ವಗಳ ಪ್ರಕಾರ ದೈವಿಕ ನಿಯಮಗಳೆಂದರೆ ಈ ಪ್ರಪಂಚವನ್ನು ನಿಯಂತ್ರಿಸುವ ಎಲ್ಲಾ ನಿಯಮಗಳಾಗಿವೆ.

ದೇವನ ವಿವಿಧ ಗುಣ ನಾಮಗಳ ಪೈಕಿ ಪವಿತ್ರ ಖುರ್‌ಆನ್ ಅವನನ್ನು ಶಾಂತಿಯ ಉಗಮ ಸ್ಥಾನವೆಂದೂ ಸಂರಕ್ಷಣೆ ನೀಡುವವನೆಂದೂ ವರ್ಣಿಸಿದೆ (59:24). ಶಾಂತಿ ಸಮಾಧಾನ ನೆಲೆ ನಿಲ್ಲಿಸುವುದು ಮತ್ತು ಸುರಕ್ಷಿತತೆಯನ್ನು ಕಾಪಾಡುವುದು ಮನುಷ್ಯನ ಸ್ಥಿರವಾದ ಉದ್ದೇಶವಾಗಬೇಕಾಗಿದೆ. ಶಾಂತಿ ಮತ್ತು ಸುವ್ಯವಸ್ಥೆ ಎಲ್ಲಾ ರೀತಿಯ ಲೌಕಿಕ, ನೈತಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಗೆ ಅತ್ಯಾವಶ್ಯಕವಾಗಿವೆ. ಶಾಂತಿಯನ್ನು ಭಂಗಗೊಳಿಸುವ ಎಲ್ಲಾ ಕೃತ್ಯಗಳನ್ನು ಪವಿತ್ರ ಖುರ್‌ಆನ್ ತೀವ್ರವಾಗಿ ಖಂಡಿಸಿದೆ. ಪವಿತ್ರ ಖುರ್‌ಆನ್ ಈ ರೀತಿ ನಿರ್ದೇಶಿಸಿದೆ:

> "ಶಾಂತಿ ನೆಲೆಸಿದ ನಂತರ ಭೂಮಿಯಲ್ಲಿ ಗೊಂದಲವುಂಟುಮಾಡಬೇಡಿರಿ (7:57).
>
> "ಅನೀತಿಕರವಾಗಿ ವರ್ತಿಸಿ ಭೂಮಿಯಲ್ಲಿ ಗೊಂದಲವುಂಟುಮಾಡಬೇಡಿರಿ (29:37).
>
> "ಅವರು ಭೂಮಿಯಲ್ಲಿ ಗೊಂದಲವುಂಟುಮಾಡಲು ಪ್ರಯತ್ನ ಪಡುತ್ತಿರುವರು. ದೇವನು ಗೊಂದಲಗಾರರನ್ನು ಇಷ್ಟಪಡುವುದಿಲ್ಲ" (5:65)
>
> "ಭೂಮಿಯಲ್ಲಿ ಗೊಂದಲವುಂಟುಮಾಡಲು ಯತ್ನಿಸಬೇಡ; ಖಂಡಿತವಾಗಿಯೂ ದೇವನು ಗೊಂದಲಗಾರರನ್ನು ಸ್ನೇಹಿಸುವುದಿಲ್ಲ" (28:78).

ಭೂಲೋಕದ ಜೀವನದ ಕುರಿತು ಕೆಲವು ಜನರ ಮಾತುಗಳು ನಿನಗೆ ಬಹಳ ಇಷ್ಟಕರವಾಗಿ ಕಾಣಬಹುದು. ಅವರು ತಮ್ಮ ನಿಷ್ಕಳಂಕತೆಯ ಕುರಿತು ದೇವನನ್ನು ಸಾಕ್ಷೀಕರಿಸುತ್ತಿರುವರು. ಯಥಾರ್ಥವಾಗಿ ಅವರು ಅತ್ಯಂತ ಜಗಳಗಂಟಿಗಳಾಗಿರುವರು. ಅವರು ಅಧಿಕಾರಿಗಳಾದಾಗ ಗೊಂದಲವನ್ನು ಸೃಷ್ಟಿಸಿ ಕೃಷಿ ನಾಶ ಮಾಡಲಿಕ್ಕಾಗಿಯೂ ಜನರ ವಂಶ ನಾಶಗೊಳಿಸಲಿಕ್ಕಾಗಿಯೂ ಭೂಮಿಯಲ್ಲಿ ಓಡಾಡುವರು. ಅಲ್ಲಾಹು ಗೊಂದಲಗಾರರನ್ನು ಸ್ನೇಹಿಸುವುದಿಲ್ಲ (2:205-206).

ಪೈಗಂಬರರು ತನ್ನ ಆಗಮನೋದ್ದೇಶವನ್ನು ಮಕ್ಕಾ ನಿವಾಸಿಗಳಿಗೆ ವಿವರಿಸಿದಾಗ ಮಕ್ಕಾ ನಿವಾಸಿಗಳು ಅವರನ್ನು ಹಿಂದೆ ಸತ್ಯವಂತರೆಂದೂ ನಿಷ್ಕಳಂಕರೆಂದೂ ವಿಧೇಯ ಸಂಗಾತಿಯೆಂದೂ ಪರಿಗಣಿಸಿದ್ದರೂ ಅವರ ವಾದವನ್ನು ಅಂಗೀಕರಿಸಲಿಲ್ಲ. ಅವರು ಎಡೆಬಿಡದೆ ಮಕ್ಕಾ ನಿವಾಸಿಗಳಿಗೆ ತನ್ನ ವಾದಗಳನ್ನು ವಿವರಿಸುತ್ತಾ ಏಕದೇವನ ಆರಾಧನೆ ಹಾಗೂ ಜೀವಿತದಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ವಿಪ್ಲವದ ಕರೆಯಿತ್ತರೂ, ಆರಂಭ ಕಾಲದಲ್ಲಿ ಕೇವಲ ಅಪಹಾಸ್ಯಕ್ಕೆ ಗುರಿಯಾಗಬೇಕಾಯಿತು. ಪೈಗಂಬರರ ಕರೆಗೆ ಕೆಲವು ಕಡೆಗಳಲ್ಲಿ ಸಹಾನುಭೂತಿಯ ಪ್ರತಿಕ್ರಿಯೆ ಉಂಟಾದಾಗ ಅಪಹಾಸ್ಯ ಕಿರುಕುಳವಾಗಿ ಮಾರ್ಪಟ್ಟಿತು. ಹತ್ತು ವರ್ಷ ಕಾಲದ ದೀರ್ಘ ಅವಧಿಯಲ್ಲಿ ಪೈಗಂಬರರೂ ಮೆಲ್ಲ ಮೆಲ್ಲನೆ ವರ್ಧಿಸುತ್ತಿದ್ದ ಅವರ ಶಿಷ್ಯ ಸಂಘದವರೂ ಬಹಳ ಕ್ರೂರ ನಿರ್ದಯ ಹಿಂಸೆಗೆ ಗುರಿಯಾದರು. ಆ ಹಿಂಸಾಚಾರಗಳನ್ನು ಅವರು ಬಹಳ ಸಹನೆಯಿಂದಲೂ ಘನತೆಯಿಂದಲೂ ಬಹಳ ಕಷ್ಟ ಪರಿಸ್ಥಿತಿಯಲ್ಲಿ ಸಹಿಸಿದರು. ಬೈಗಳಾಗಲೀ ಹಿಂಸಾಚಾರವಾಗಲೀ ಅವರನ್ನು ನಿಯಮನಿಷ್ಠ ಶಿಸ್ತಿನ ಪ್ರಜೆಗಳಿಗೆ ಅಯೋಗ್ಯವಾದ ನಡವಳಿಕೆಗೆ ಪ್ರೇರೇಪಿಸಲಿಲ್ಲ. ವಿಗ್ರಹಾರಾಧನೆಯ ಖಂಡನೆ ಮತ್ತು ಏಕದೈವಾರಾಧನೆಯ ಮಂಡನೆಯ ಹೊರತು ಇನ್ನಾವುದೇ ರೀತಿಯಲ್ಲಿ ಪೈಗಂಬರರಾಗಲಿ ಆ ಕಾಲದಲ್ಲಿ ಮಕ್ಕಾದಲ್ಲಿದ್ದ ಮುಸ್ಲಿಮರ ಕಿರು ಸಂಘದ ಯಾವುದೇ ಸದಸ್ಯನಾಗಲಿ ಯಾವಾಗ

ಲಾದರೂ ಹಿರಿಯರ ಸಭೆಯು (Assembly of Elders) ಅಧಿಕಾರವನ್ನಾಗಲಿ ಮಕ್ಕಾ ನಗರದ ನಾಗರಿಕರ ಹಕ್ಕು ಬಾಧ್ಯತೆ ಮತ್ತು ವರ್ತನೆಗಳನ್ನು ನಿಯಂತ್ರಿಸುವ ನಿಯಮಗಳನ್ನಾಗಲಿ ಎಂದೂ ಕಡೆಗಣಿಸುತ್ತಿರಲಿಲ್ಲ. ಹಿಂಸಾಚಾರಗಳು ಅಸಹನೀಯವಾದಾಗ ಪೈಗಂಬರರು ಮಕ್ಕಾ ನಗರದಲ್ಲಿ ಯಾವುದೇ ರೀತಿಯ ಶಾಂತಿಭಂಗ ಉಂಟು ಮಾಡಲು ಯತ್ನಿಸಲಿಲ್ಲ. ಅವರು ಮಕ್ಕಾ ನಗರವನ್ನು ತ್ಯಜಿಸಲು ಸಾಧ್ಯವಿರುವ ಮುಸ್ಲಿಮರೊಡನೆ ಕೆಂಪು ಸಮುದ್ರವನ್ನು ದಾಟಿ ಅಬಿಸೀನಿಯಾ (ಇಥಿಯೋಪಿಯಾ) ರಾಜ್ಯದಲ್ಲಿ ಆಶ್ರಯ ಪಡೆಯಲು ಸಲಹೆ ನೀಡಿದರು. ಅನಂತರ, ಇತರ ಮುಸ್ಲಿಮರು ಪೈಗಂಬರರ ಸಹಿತ ಮದೀನಕ್ಕೆ ವಲಸೆ ಹೋದರು. ಪೈಗಂಬರರ ಮಕ್ಕಾ ಜೀವನದ ಕಾಲ ಬಲಾತ್ಕಾರಕ್ಕೊಳಗಾಗಿ ಅತ್ಯಂತ ಕಿರುಕುಳಕ್ಕೆ ಗುರಿಗೊಳಿಸಲ್ಪಟ್ಟ ಆದರೆ ಸ್ಥಿರವಾಗಿ ಜನ ಸಂಖ್ಯೆ ಏರುತ್ತಿದ್ದು ಕ್ರಮೇಣ ಶಕ್ತಿ ವರ್ಧಿಸುತ್ತಿದ್ದ ಜನರ ಒಂದು ಗುಂಪು ಕಾನೂನು ಮತ್ತು ವ್ಯವಸ್ಥೆಯ ಪರಿಪಾಲನೆ ಗೈದುದರ ಪ್ರಮುಖ ಉದಾಹರಣೆಯಾಗಿದೆ.

ಅಂತಾರಾಷ್ಟ್ರೀಯ ಸಂಬಂಧದ ವಲಯದಲ್ಲಿ ಧರ್ಮ ಮತ್ತು ಬಹುಧರ್ಮೀಯ ಬಾಂಧವ್ಯ ಒಂದು ಮುಖ್ಯ ಸ್ಥಾನ ಪಡೆದಿದೆ. ದುರದೃಷ್ಟದಿಂದ ತುಲನಾತ್ಮಕವಾಗಿ ಮಾನವರ ಈ ಬಾಂಧವ್ಯದ ಕುರಿತು ಹೆಚ್ಚಿನ ಗಮನ ನೀಡಲ್ಪಡುವುದಿಲ್ಲ. ಧರ್ಮವು ಪ್ರತಿಯೊಬ್ಬ ವ್ಯಕ್ತಿಯ ಖಾಸಗಿ ವಿಷಯವೆಂದೂ ವ್ಯಕ್ತಿಗಳ, ಗುಂಪುಗಳ, ಸಂಘಗಳ ಮತ್ತು ಜನಾಂಗಗಳ ಪರಸ್ಪರ ಸಂಬಂಧವನ್ನು ಪ್ರಭಾವಿಸುವ ರಾಜಕೀಯ, ಸಾಮಾಜಿಕ ಅಥವಾ ಆರ್ಥಿಕ ವಿಷಯಗಳಲ್ಲಿ ಧರ್ಮಕ್ಕೆ ಯಾವುದೇ ಸ್ಥಾನವಿಲ್ಲವೆಂದೂ ಭಾವಿಸಲಾಗುತ್ತಿದೆ. ಈ ಭಾವನೆ ನ್ಯಾಯಯುತವಾದುದಲ್ಲ. ಧರ್ಮವು ಮನುಷ್ಯರ ಪರಸ್ಪರ ಬಾಂಧವ್ಯದಲ್ಲಿ ಪ್ರಧಾನ ಪಾತ್ರ ನಿರ್ವಹಿಸುತ್ತಿದ್ದು ಅದು ಘರ್ಷಣೆ ಮತ್ತು ಜಗಳಕ್ಕೆ ಬದಲಾಗಿ ಕ್ರಮೇಣ ಐಕ್ಯವನ್ನೂ, ಸಾಮರಸ್ಯವನ್ನೂ ವೃದ್ಧಿಗೊಳಿಸುವುದೆಂದೂ ಆಶಿಸಲು ಉತ್ತಮ ತಳಹದಿಯಿದೆ. ಇತರ ಧರ್ಮ ಮತ್ತು ಅವರ ಅನುಯಾಯಿಗಳ ಕುರಿತು ಇಸ್ಲಾಮ್ ಧರ್ಮದ ಘೋಷಣೆಯೇನೆಂದು ತಿಳಿಯುವುದು ಅತ್ಯಗತ್ಯವಾಗಿದೆ.

ದೇವನು ಪ್ರಪಂಚದ ಎಲ್ಲಾ ಜನಾಂಗಗಳಿಗೆ ವಿವಿಧ ಕಾಲಘಟ್ಟಗಳಲ್ಲಿ ತನ್ನ ಸಂದೇಶವನ್ನು ಕಳುಹಿಸಿದ್ದಾನೆಂದೂ ದೈವಿಕ ಮಾರ್ಗದರ್ಶನ ದೊರೆಯದ ಮನುಷ್ಯ ಸಮುದಾಯ ಯಾವುದೂ ಇಲ್ಲವೆಂದೂ ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ. (35:25, 26) ಹಳೆಯ ಒಡಂಬಡಿಕೆಯ ಹಲವು ಪ್ರವಾದಿಗಳ ಹೆಸರು ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿಸಲಾಗಿದ್ದು ಯೇಸು ಕ್ರಿಸ್ತರನ್ನು ಇತರ ಪ್ರವಾದಿಗಳಂತೆಯೇ ಮುಸ್ಲಿಮರು ಆದರಿಸುತ್ತಾರೆ (2:88). ಎಲ್ಲಾ ಪ್ರವಾದಿಗಳೂ ಸತ್ಯವಂತರೆಂದೂ ಎಲ್ಲಾ ಪ್ರವಾದಿಗಳಿಗೆ ದೊರಕಿದ ದೈವಿಕ ಸಂದೇಶಗಳು ಸತ್ಯವೆಂದೂ ನಂಬುವುದು ಅತ್ಯಾವಶ್ಯಕವೆಂದು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತದೆ. ಮೂಸಾಪ್ರವಾದಿಗಳ ಗ್ರಂಥ ಮತ್ತು ಈಸಾ ಪ್ರವಾದಿಗೆ (ಯೇಸುಕ್ರಿಸ್ತ) ಅವತೀರ್ಣವಾದ ದೈವಿಕ ವಾಣಿಯನ್ನು ಮಾರ್ಗದರ್ಶಕವೆಂದೂ ಪ್ರಕಾಶವೆಂದೂ ಪವಿತ್ರ ಖುರ್‌ಆನ್ ವಿವರಿಸಿದೆ (5:45,47).

ಇಸ್ಲಾಮ್, ವಿವಿಧ ಧರ್ಮದ ಅನುಯಾಯಿಗಳು ಪರಸ್ಪರ ಸಾಮರಸ್ಯದಿಂದ ಇರುವ ಮತ್ತು ಪರಸ್ಪರ ಗೌರವಿಸುವ ತಳಹದಿಯನ್ನು ನಿರ್ಮಿಸುತ್ತದೆ. ಅದು ಸಹಕಾರ ಮತ್ತು ಸ್ನೇಹದ ಕೈಯನ್ನು ಉತ್ತಮ ನಡತೆಯನ್ನಾಧರಿಸಿ ಅವರಿಗೆ ನೀಡುತ್ತದೆ. ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತದೆ:

> ಖಂಡಿತವಾಗಿಯೂ ಸತ್ಯ ವಿಶ್ವಾಸಿಗಳೂ, ಯಹೂದಿಗಳೂ, ಸಾಬಿಮತದವರೂ, ಕ್ರೈಸ್ತರೂ, ಇವರ ಪೈಕಿ ಯಾರು ದೇವನನ್ನೂ ಅಂತಿಮ ತೀರ್ಮಾನದ ದಿನವನ್ನೂ ಯಥಾರ್ಥವಾಗಿ ನಂಬಿ ಉತ್ತಮವಾಗಿ ನಡೆಯುವರೋ ಅವರಿಗೆ ಯಾವುದೇ ಭಯವಾಗಲೀ ಚಿಂತೆಯಾಗಲೀ ಇರಲಾರದು (5:70)

ಎಲ್ಲಾ ಮತ ಧರ್ಮದವರನ್ನು ಅವರೆಲ್ಲಾ ಸಮಾನವಾಗಿ ನಂಬುವ ವಿಷಯದ ತಳಹದಿಯ ಮೇಲೆ ಐಕ್ಯದಿಂದ ವರ್ತಿಸಲು ಇಸ್ಲಾಮ್ ಧರ್ಮ ಕರೆ ನೀಡುತ್ತದೆ. ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತಿದೆ:

> (ಓ ಪೈಗಂಬರ್) ಹೇಳು: ಓ ಗ್ರಂಥ ನೀಡಲ್ಪಟ್ಟವರೇ ನಿಮ್ಮ ಮತ್ತು ನಮ್ಮ ನಡುವೆ ಸಮಾನವಾಗಿರುವ ವಿಷಯದಲ್ಲಿ ಒಮ್ಮತರಾಗೋಣ. ನಾವು ಏಕ ದೇವನಾದ ಅಲ್ಲಾಹನ ಹೊರತು

> ಬೇರೆ ಯಾರನ್ನೂ ಪೂಜಿಸದಿರೋಣ, ಅವನಿಗೆ ಯಾರನ್ನೂ ಸಾಟಿಯಾಗಿ ಗ್ರಹಿಸದಿರೋಣ. ನಮ್ಮ ಪೈಕಿ ಕೆಲವರು ದೇವನನ್ನು ಬಿಟ್ಟು ಇತರರನ್ನು ದೇವರನ್ನಾಗಿ ಸ್ವೀಕರಿಸದಿರಲಿ. (3:65)

ಶಾಂತಿಯನ್ನು ಭಂಗಗೊಳಿಸಿ ಅವ್ಯವಸ್ಥೆಗೆ ಕಾರಣವಾಗುವಂತಹ ಸಂಗತಿಗಳ ಕುರಿತು ಇಸ್ಲಾಮ್ ಧರ್ಮ ಗಮನ ಸೆಳೆಯುತ್ತದೆಯಲ್ಲದೆ ಆ ಸಂಗತಿಗಳ ಕುರಿತು ಅಸಂತೃಪ್ತಿಯನ್ನು ವ್ಯಕ್ತಗೊಳಿಸಿದೆ. ಇವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ವಿವರಿಸಬಹುದು.

ರಾಜ್ಯದ ಆಂತರಿಕ ವ್ಯವಸ್ಥೆಯಲ್ಲಿ ಒಂದು ಗುಂಪು ಇನ್ನೊಂದು ಗುಂಪಿಗಿಂತ ಮೇಲಿನ ಸ್ಥಾನದಲ್ಲಿರುವುದು ಅಥವಾ ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ಒಂದು ಜನಾಂಗ ಇನ್ನೊಂದು ಜನಾಂಗದ ಮೇಲೆ ಆಧಿಪತ್ಯ ನಡೆಸಲು ಯತ್ನಿಸುವುದು ಶಾಂತಿ ಭಂಗಕ್ಕೆ ಕಾರಣವಾದ ಸಂಚೆಯುತ ಶಕ್ತಿಯನ್ನು ಹೊಂದಿದ್ದು, ಇಸ್ಲಾಮ್ ಅದನ್ನು ಖಂಡಿಸುತ್ತದೆ. ಮಾನವ ರಾಶಿಯನ್ನು ವಿವಿಧ ಗುಂಪುಗಳಾಗಿ ವಿಭಾಗಿಸಿ ಕೆಲವು ಗುಂಪುಗಳ ಮೇಲೆ ಇತರ ಗುಂಪುಗಳು ಮೇಲಧಿಕಾರವನ್ನು ಸ್ಥಾಪಿಸುವುದನ್ನು ದೇವನು ಇಷ್ಟಪಡುವುದಿಲ್ಲ. ಈ ರೀತಿಯ ಯಾವುದೇ ಪ್ರಯತ್ನ ನಡೆದಲ್ಲಿ ದೇವನು ಅಧಿಕಾರಹೀನರನ್ನೂ ಪೀಡಿತರನ್ನೂ ಮೇಲೆತ್ತಲು ಪ್ರಯತ್ನಿಸುತ್ತಾನೆ. ಇದಕ್ಕೆ ಉದಾಹರಣೆಯಾಗಿ ಪವಿತ್ರ ಖುರ್‌ಆನ್ ಈಜಿಪ್ಟಿನ ಫರಾವೋ ದೊರೆಯನ್ನೂ ಆತನು ಇಸ್ರಾಯೇಲ್ ಸಂತತಿಗಳೊಡನೆ ವರ್ತಿಸಿದ ರೀತಿಯನ್ನೂ ವಿವರಿಸುತ್ತದೆ:

> ಫರಾವೋ ಭೂಮಿಯಲ್ಲಿ ದುರಹಂಕಾರದಿಂದ ವರ್ತಿಸಿ ಜನರನ್ನು ವಿಭಿನ್ನ ಗುಂಪುಗಳನ್ನಾಗಿ ಮಾಡಿದ್ದನು. ಅವರ ಪೈಕಿ ಒಂದು ವಿಭಾಗದ ಗಂಡು ಮಕ್ಕಳನ್ನು ಕೊಂದು ಹೆಮ್ಮಕ್ಕಳನ್ನು ಜೀವಿಸಲು ಬಿಡುತ್ತಿದ್ದನು. ಖಂಡಿತವಾಗಿಯೂ ಅವನು ಗೊಂದಲಗಾರರ ಪೈಕಿ ಸೇರಿದವನಾಗಿದ್ದನು. ಭೂಮಿಯಲ್ಲಿ ನೀಚವಾದ ಅವಸ್ಥೆಯಲ್ಲಿದ್ದವರನ್ನು ಉದ್ಧರಿಸಲು ಮತ್ತು ಅವರನ್ನು ನಾಯಕರನ್ನಾಗಿಯೂ ನಮ್ಮ ಅನುಗ್ರಹಗಳ ವಾರೀಸುದಾರರನ್ನಾಗಿಯೂ ಭೂಮಿಯಲ್ಲಿ ಆಶ್ರಯಧಾಮ ಪಡೆದವರನ್ನಾಗಿಯೂ ಮಾಡಲು ನಾವು ಇಚ್ಛಿಸಿದೆವು (28:5–7).

ಫರೋವನ ಮತ್ತು ಆತನ ದರಬಾರಿನವರ ಅಂತ್ಯ ಅನಂತರದ ತಲೆಮಾರುಗಳಿಗೆ ಭಯಾನಕವಾದ ಪಾಠವಾಗಿತ್ತು (10:91–93).

ಒಂದು ಜನಾಂಗ ಅಥವಾ ಒಂದು ರಾಜ್ಯವನ್ನು ಇನ್ನೊಂದು ಜನಾಂಗ ಅಥವಾ ರಾಜ್ಯ ಶೋಷಣೆ ಮಾಡುವುದರ ಫಲವಾಗಿ ಶೋಷಕರು ಮೇಲಧಿಕಾರವನ್ನು ಪಡೆದು ಅದರಿಂದ ಶಾಂತಿಗೆ ಅಪಾಯ ಉಂಟಾಗುತ್ತದೆ. ಪವಿತ್ರ ಖುರ್‌ಆನ್ ಈ ರೀತಿಯ ಶೋಷಣೆಯನ್ನು ವಿರೋಧಿಸುತ್ತದೆಯಲ್ಲದೆ ಇತರ ಜನಾಂಗಗಳನ್ನೂ ಅವರ ಆರ್ಥಿಕ ಸಂಪನ್ಮೂಲಗಳನ್ನೂ ಶೋಷಿಸಿ ರೂಪಿಸುವ ಅರ್ಥ ವ್ಯವಸ್ಥೆ ಗುಣಪ್ರದವಾಗಲಿಕ್ಕಿಲ್ಲವೆಂದೂ ಅದು ದೀರ್ಘ ಕಾಲ ಬಾಳದೆಂದೂ ನಿರೂಪಿಸುತ್ತದೆ. ಒಂದು ಜನಾಂಗದ ಸ್ವಂತ ಆರ್ಥಿಕ ಸಂಪನ್ಮೂಲಗಳ ಸದುಪಯೋಗದಿಂದ ಸಾಧಿಸಬಹುದಾದ ಆರ್ಥಿಕ ಪ್ರಗತಿ ಗುಣಕರವೂ ದೀರ್ಘಕಾಲ ನೆಲೆ ನಿಲ್ಲುವುದೂ ಆಗುವುದೆಂದೂ ದೇವನು ಪ್ರತಿಯೊಂದು ಜನಾಂಗಕ್ಕೆ ನೀಡಿದ ಸಂಪನ್ಮೂಲಗಳನ್ನು ಇತರರೊಂದಿಗೆ ನ್ಯಾಯಯುತವಾಗಿ ಹಂಚಿ ಅನುಭವಿಸಬೇಕೆಂದೂ ಆ ಗ್ರಂಥ ವ್ಯಕ್ತಗೊಳಿಸಿದೆ. ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತಿದೆ:

> ಅವರ ಪೈಕಿ ಕೆಲವರಿಗೆ ನೀಡಲಾಗಿರುವ ಲೌಕಿಕ ಸುಖ ಸಂಪತ್ತುಗಳನ್ನು ನೀನು ಕಣ್ಣುಗಳನ್ನು ತೆರೆದು ದಿಟ್ಟಿಸಿ ನೋಡಬೇಡ. ನಾವು ಅವರಿಗೆ ನೀಡಿದುದು ಅವರನ್ನು ಪರೀಕ್ಷಿಸಲಿಕ್ಕಾಗಿಯಾಗಿದೆ. ನಾವು ನಿನಗೆ ನೀಡಿರುವುದು ಉತ್ತಮವೂ ದೀರ್ಘಕಾಲ ಬಾಳಿಕೆಯಾಗುವುದೂ ಆಗಿದೆ (20:132).

ಒಂದು ಶಕ್ತಿಶಾಲಿ ರಾಜ್ಯ ಬೇರೆ ಬಲಹೀನ ರಾಜ್ಯಗಳನ್ನೂ ಜನಾಂಗಗಳನ್ನೂ ಶೋಷಿಸದಿದ್ದರೂ ಅವುಗಳ ಮೇಲೆ ಸ್ವಾಧೀನತೆ ಗಳಿಸಲೆತ್ನಿಸದಿದ್ದರೂ ಅದು ಇತರರ ಕುರಿತು ದುರಹಂಕಾರ ಮತ್ತು ಅವಮರ್ಯಾದೆಯಿಂದ ವರ್ತಿಸಿದರೆ ಅದು ಘರ್ಷಣೆ ಮತ್ತು ದ್ವೇಷಕ್ಕೆ ಹೇತುವಾಗಿ ಉತ್ತಮ ಬಾಂಧವ್ಯಕ್ಕೆ ಭಂಗವುಂಟಾಗಿ ಶಾಂತಿ ಸ್ಥಾಪನೆಗೆ ತಡೆಯಾಗುವುದು. ಪವಿತ್ರ ಖುರ್‌ಆನ್ ಈ ರೀತಿಯ ಸ್ವಭಾವ ಗುಣಗಳ ಕುರಿತು ಎಚ್ಚರಿಕೆ ನೀಡುತ್ತದೆ. ಒಂದು ಜನಾಂಗದ ಶಕ್ತಿ ಸಾಮರ್ಥ್ಯಗಳು ಆ ಜನಾಂಗದ ಶ್ರೇಷ್ಠತೆ ಅಥವಾ ನಿಕೃಷ್ಟತೆಯನ್ನು ಸೂಚಿಸುವುದಿಲ್ಲವೆಂದು ಪವಿತ್ರ ಖುರ್‌ಆನ್ ವಿವರಿಸುತ್ತದೆ,

ಜನಾಂಗಗಳ ಅಭಿವೃದ್ಧಿ ಮತ್ತು ಅಧ:ಪತನಗಳ ಪರಿಣಾಮವಾಗಿ ಈಗ ಬಲಹೀನವಾಗಿರುವುದು ನಾಳೆ ಬಲಶಾಲಿಯಾಗಬಲ್ಲದೆಂದೂ ಹಿಂದೆ ರೋಷವನ್ನುಂಟು ಮಾಡಿದ ಮತ್ತು ಉತ್ತಮ ಬಾಂಧವ್ಯವನ್ನು ಹಾನಿಗೊಳಿಸಿದ ನೆನಪುಗಳು ಮರುಕಳಿಸಿ ಒಳ್ಳೆಯ ಬಾಂಧವ್ಯ ಸ್ಥಾಪನೆಗೆ ತಡೆಯಾಗಬಹುದೆಂದೂ ಅದು ಹೇಳುತ್ತದೆ.

ಅಂತಾರಾಷ್ಟ್ರೀಯ ಘರ್ಷಣೆ ಉಂಟಾಗುವ ಇನ್ನೊಂದು ಕಾರಣ. ಪ್ರಕಟಿತ ಉದ್ದೇಶ ಮತ್ತು ಧೋರಣೆಗಳಿಗೂ ಯಥಾರ್ಥ ವರ್ತನೆಗೂ ಇರುವ ವ್ಯತ್ಯಾಸವಾಗಿದ್ದು ಇದರಿಂದ ಘರ್ಷಣೆ ಮತ್ತು ಅವಿಶ್ವಾಸ ತಲೆದೋರುತ್ತದೆ. ಒಂದು ರಾಜ್ಯದ ಪ್ರಕಟಿತ ಧೋರಣೆ, ಉದ್ದೇಶ ಮತ್ತು ವಾಗ್ದಾನಗಳಿಗೆ ವಿರುದ್ಧವಾಗಿ ಆ ರಾಜ್ಯ ವರ್ತಿಸಿದರೆ ಆ ರಾಜ್ಯದ ಉದ್ದೇಶ ಲಕ್ಷ್ಯಗಳ ಕುರಿತು ಸಂಶಯವುಂಟಾಗುವುದು ಸ್ವಾಭಾವಿಕವಾಗಿದೆ. ಈ ರೀತಿಯ ನಡತೆ ಅಂತಾರಾಷ್ಟ್ರೀಯ ಬಾಂಧವ್ಯವನ್ನು ಅಪಾಯಕ್ಕೊಳಪಡಿಸಬಹುದು. ಪವಿತ್ರ ಖುರ್‌ಆನ್ ಪ್ರಕಟಿತ ಉದ್ದೇಶ ಲಕ್ಷ್ಯಗಳಿಗೂ ವರ್ತನೆಗೂ ಮಧ್ಯೆ ಸಾಮರಸ್ಯದ ಕುರಿತು ಒತ್ತಾಯಿಸುತ್ತದೆ. ಆ ಪವಿತ್ರ ಗ್ರಂಥ ಈ ರೀತಿ ಹೇಳುತ್ತಿದೆ:

> ಓ ಸತ್ಯ ವಿಶ್ವಾಸಿಗಳೇ, ನೀವು ಸ್ವತ: ಮಾಡದುದರ ಕುರಿತು ನೀವೇಕೆ ಉಪದೇಶಿಸುತ್ತಿರುವಿರಿ. ನೀವು ಸ್ವತ: ಮಾಡದುದರ ಕುರಿತು ಉಪದೇಶಿಸುವುದು ಅಲ್ಲಾಹನ ದೃಷ್ಟಿಯಲ್ಲಿ ಬಹಳ ಅಹಿತಕರವಾಗಿದೆ (61:3-4).

ಇತರ ಜನರ ಉದ್ದೇಶ ಲಕ್ಷ್ಯಗಳ ಬಗ್ಗೆ ಅನಾವಶ್ಯಕ ಸಂಶಯಗಳಲ್ಲಿ ಮುಳುಗುವುದರ ಕುರಿತು ಮತ್ತು ಭಿನ್ನಾಭಿಪ್ರಾಯ ವ್ಯಕ್ತಗೊಳಿಸಲು ಯಾವುದಾದರೂ ಹೇತು ಕಂಡು ಹಿಡಿಯುವುದರ ಕುರಿತು ಪವಿತ್ರ ಖುರ್‌ಆನ್ ಎಚ್ಚರಿಸುತ್ತದೆ.

> ಓ ಸತ್ಯ ವಿಶ್ವಾಸಿಗಳೇ. ನೀವು ಹೆಚ್ಚಿನ ಸಂಶಯಗಳನ್ನು ತ್ಯಜಿಸಿರಿ. ನಿಶ್ಚಯವಾಗಿಯೂ ಕೆಲವು ಬಗೆಯ ಸಂಶಯಗಳು ಪಾಪಕರವಾಗಿವೆ. (49:13).

ಕಿಂವದಂತಿಗಳನ್ನು ನಂಬಿ ಪ್ರಚಾರಗೊಳಿಸುವುದರಿಂದ ಅಂತಾರಾಷ್ಟ್ರೀಯ ಬಾಂಧವ್ಯದಲ್ಲಿ ಭಯಾನಕ ಪ್ರತಿಕ್ರಿಯೆಗಳು ಉಂಟಾಗುವುವೆಂದು ಅನುಭವದಿಂದ ವ್ಯಕ್ತವಾಗುತ್ತದೆ. ಈ ವದಂತಿಗಳು ಉದ್ದೇಶಪೂರ್ವಕವಾಗಿ ದುಷ್ಟ ಶಕ್ತಿಗಳಿಂದ ಪ್ರಚಾರಗೊಳಿಸಲ್ಪಟ್ಟವುಗಳಾಗಿರಬಹುದು ಅಥವಾ ಅತ್ಯಂತ ಹೆಚ್ಚು ಊಹಾಪೋಹ ಮಾಡುವ ವ್ಯಕ್ತಿಗಳಿಂದ ಪ್ರಚಾರಗೊಳಿಸಲ್ಪಟ್ಟವುಗಳಾಗಿರಬಹುದು ಆದರೆ ಅವುಗಳಿಂದುಂಟಾಗುವ ಹಾನಿ ಬಹಳ ಹೆಚ್ಚಾಗಿದೆ. ಮುಸ್ಲಿಮರು ಈ ಸಂಗತಿಗಳ ಕುರಿತು ಅತ್ಯಂತ ಜಾಗರೂಕತೆ ವಹಿಸುವಂತೆ ಪವಿತ್ರ ಖುರ್‌ಆನ್ ಎಚ್ಚರಿಸುತ್ತದೆ. ಅವಿಶ್ವಸನೀಯವಾದ ಮೂಲಗಳಿಂದ ಹೊರಡುವ ಸಮಾಚಾರಗಳನ್ನು ತೀವ್ರ ಪರಿಶೋಧನೆಗೆ ಗುರಿ ಮಾಡಬೇಕೆಂದೂ ಈ ವಿಷಯದ ಕುರಿತು ಶ್ರದ್ಧಾಹೀನತೆ ಅಂತಾರಾಷ್ಟ್ರೀಯ ಸೆಣಸಾಟಕ್ಕೆ ಮತ್ತು ಭಯಂಕರ ಪರಿಣಾಮಕ್ಕೆ ಕಾರಣವಾಗುವುದೆಂದೂ ಅದು ಉಪದೇಶಿಸುತ್ತದೆ:

> ಓ ಸತ್ಯ ವಿಶ್ವಾಸಿಗಳೇ, ನಿಮ್ಮ ಬಳಿಗೆ ಒಬ್ಬ ಅವಿಶ್ವಸನೀಯ ವ್ಯಕ್ತಿ ಯಾವುದಾದರೂ ಸಮಾಚಾರ ತಂದರೆ ಅದರ ಯಥಾರ್ಥತೆಯನ್ನು ಪರೀಕ್ಷಿಸಿರಿ. ಹೀಗೆ ಮಾಡದಿದ್ದರೆ ನೀವು ಅಜ್ಞಾನದಿಂದ ಒಂದು ಜನಾಂಗವನ್ನು ಆಕ್ರಮಿಸಿ ಆನಂತರ ನೀವು ಹಾಗೆ ಮಾಡಿದುದಕ್ಕೆ ಪಶ್ಚಾತ್ತಾಪಗೊಳ್ಳಬೇಕಾದೀತು. (49:7)

ಎಲ್ಲಾ ರೀತಿಯ ಸುದ್ದಿಗಳನ್ನು ಬಿತ್ತರಿಸುವುದು ಮತ್ತು ಜನರ ಮನಸ್ಸನ್ನು ಅಸ್ವಸ್ಥಗೊಳಿಸುವ ಮತ್ತು ಸಾರ್ವಜನಿಕರನ್ನು ಕ್ಷೋಭೆಗೊಳಿಸುವ ಸಮಾಚಾರಗಳನ್ನು ಪ್ರಕಟಿಸುವುದನ್ನು ಪವಿತ್ರ ಖುರ್‌ಆನ್ ವಿರೋಧಿಸುತ್ತದೆ:

> ಅವರ ಬಳಿ ಶಾಂತಿ ಅಥವಾ ಭಯದ ಯಾವುದಾದರೂ ವಾರ್ತೆ ಬಂದರೆ ಅದನ್ನು ಅವರು ಪ್ರಚಾರ ಗೊಳಿಸುತ್ತಾರೆ. ಅವರು ಅದನ್ನು ಪೈಗಂಬರರಿಗೆ ಅಥವಾ ಅವರ ಅಧಿಕಾರಿಗಳಿಗೆ ಈ ಸಂಗತಿ ತಲುಪಿಸುತ್ತಿದ್ದರೆ ಅವರು ಅದರ ಯಥಾರ್ಥತೆಯನ್ನು ಪರಿಶೋಧಿಸುತ್ತಿದ್ದರು. ದೇವನು ನಿಮ್ಮನ್ನು ಅನುಗ್ರಹಿಸಿ ನಿಮಗೆ ದಯೆ ದೋರದಿರುತ್ತಿದ್ದರೆ ನಿಮ್ಮ ಪೈಕಿ ಹೆಚ್ಚಿನ ಸಂಖ್ಯೆಯ ಜನರು ದಾರಿ ತಪ್ಪಿ ಹೋಗುತ್ತಿದ್ದರು. (4:84).

ಈ ವಚನ ಅನಧಿಕೃತ ವರದಿಗಳನ್ನೂ ಸುಳ್ಳು ಸುದ್ದಿಗಳನ್ನೂ ವಿರೋಧಿಸುವುದು ಮಾತ್ರವಲ್ಲ; ಅದು ಸಾರ್ವಜನಿಕ ಭದ್ರತೆ ಮತ್ತು ಸಾರ್ವಜನಿಕ ಅಭಿಪ್ರಾಯ ವನ್ನು ಕಲುಷಿತಗೊಳಿಸುವ ಸುದ್ದಿಗಳನ್ನು ಯೋಗ್ಯ ಅಧಿ ಕಾರಿಗಳ ಪರಿಗಣನೆಗೆ ಸಲ್ಲಿಸಿ ಅವುಗಳ ಪ್ರಸಿದ್ಧೀಕರಣದ ಯೋಗ್ಯಾಯೋಗ್ಯತೆಯನ್ನು ಸಾರ್ವಜನಿಕ ಹಿತದೃಷ್ಟಿ ಯಿಂದ ಅವರು ನಿರ್ಣಯಿಸಬೇಕೆಂದು ಸಹ ಹೇಳುತ್ತದೆ.

ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಪಾಲಿಸಬೇ ಕೆಂದು ಪವಿತ್ರ ಖುರ್‌ಆನ್ ಒತ್ತಾಯಿಸುತ್ತದೆ (5:2; 17:35). ಒಬ್ಬ ಮುಸ್ಲಿಮನು ಒಂದು ಕಾರ್ಯವನ್ನು ಮಾಡುವುದು ಮತ್ತು ಮಾಡಲು ಒಪ್ಪುವುದು ದೇವ ನಾಮ ಉಚ್ಚರಿಸಿಯಾಗಿರುವ ಕಾರಣ ಈ ಕರ್ತವ್ಯಗಳು ಪಾವಿತ್ರ್ಯವನ್ನು ಪಡೆಯುತ್ತವೆ. ಆ ಕಾರಣದಿಂದಲೇ ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತದೆ:

> ನೀವು ಅಲ್ಲಾಹ್‌ನೊಡನೆ ಒಪ್ಪಂದ ಮಾಡಿ ದಾಗ ಅದನ್ನು ಪೂರ್ಣಗೊಳಿಸಿರಿ. ನೀವು ಅಲ್ಲಾ ಹನ ಆಣೆಯಿಟ್ಟು ಅವನನ್ನು ನಿಮ್ಮ ಜಾಮೀನು ದಾರನನ್ನಾಗಿ ಮಾಡಿದ ವಾಗ್ದಾನಗಳನ್ನು ಪಾಲಿ ಸಿರಿ. ನೀವು ಮಾಡುವುದನ್ನೆಲ್ಲಾ ಅಲ್ಲಾಹು ತಿಳಿದಿರುವವನು (16:92).

ಒಪ್ಪಂದಗಳನ್ನು ಪಾಲಿಸುವುದರ ಕುರಿತು ಭಿನ್ನಾ ಭಿಪ್ರಾಯಗಳೂ ತಕರಾರುಗಳೂ ಉಂಟಾಗುವ ಒಂದು ಮುಖ್ಯ ಕಾರಣ ಹೆಚ್ಚಿನ ಸಂದರ್ಭಗಳಲ್ಲಿ ಒಪ್ಪಂದಗಳಿಗೆ ಸಂಬಂಧಿತ ಪಕ್ಷಗಳು ಬಳಸುವ ಭಾಷೆಯಾಗಿದೆ. ದ್ವಂದಾರ್ಥ ಸೂಚಕ ಭಾಷೆ ಯಾವುದೇ ಭಿನ್ನಾಭಿಪ್ರಾ ಯಗಳನ್ನು ಹೋಗಲಾಡಿಸಿ ಸ್ನೇಹಾಚಾರವನ್ನು ಬೆಳಸು ವುದರ ಬದಲಾಗಿ ಸಮಸ್ಯೆಗಳಿಗೂ ವಾಗ್ವಾದಗಳಿಗೂ ಕಾರಣವಾಗುತ್ತದೆ. ಅಂತಹ ಭಾಷೆ ಕೊನೆಗೆ ಒಬ್ಬರಿನ್ನೊ ಬ್ಬರ ನಿಷ್ಕಾಪಟ್ಯತೆಯನ್ನೂ ಉದ್ದೇಶ ಶುದ್ಧಿಯನ್ನೂ ಸಂಶಯಿಸುವಂತೆ ಮಾಡುತ್ತದೆ. ಈ ಕಾರಣದಿಂದ ಪವಿತ್ರ ಖುರ್‌ಆನ್ ಒಪ್ಪಂದಗಳಲ್ಲಿ ಸರಳ ಮತ್ತು ಸುಲಭವಾಗಿ ಅರ್ಥಗ್ರಾಹ್ಯವಾಗಬಲ್ಲ ಭಾಷೆಯನ್ನು ಬಳ ಸಲು ಉಪದೇಶಿಸುತ್ತದೆ. ಈ ರೀತಿ ವರ್ತಿಸಿದರೆ ದೇವನು ಆ ಪಕ್ಷಗಳ ಕಾರ್ಯಕ್ರಮಗಳನ್ನು ಅನುಗ್ರಹಿ ಸುವನೆಂದೂ ಅವರ ತಪ್ಪುಗಳ ದುಷ್ಪರಿಣಾಮದಿಂದ ರಕ್ಷಿಸುವನೆಂದೂ ಆ ಗ್ರಂಥ ಉಪದೇಶಿಸುತ್ತಿದೆ:

> ಓ ಸತ್ಯ ವಿಶ್ವಾಸಿಗಳೇ ಅಲ್ಲಾಹನನ್ನು ಭಯ ಪಡಿರಿ ಮತ್ತು ಸರಳವಾದ ಮಾತನ್ನಾಡಿರಿ. ಅವನು ನಿಮ್ಮ ಕಾರ್ಯಗಳನ್ನು ಅನುಗ್ರಹಿಸಿ ನಿಮ್ಮ ತಪ್ಪುಗಳನ್ನು ಮರೆಮಾಚುವನು. ಅಲ್ಲಾಹ ನನ್ನೂ ಅಲ್ಲಾಹನ ದೂತನನ್ನೂ ಅನುಸರಿಸುವ ವರು ಖಂಡಿತವಾಗಿಯೂ ಮಹತ್ತಾದ ವಿಜಯ ಗಳಿಸುವರು. (33:71-72).

ಪರಸ್ಪರ ವಿರುದ್ಧ ವ್ಯಾಖ್ಯಾನಗಳನ್ನು ನೀಡ ಬಹುದಾದ ಭಾಷೆಯನ್ನು ಬಳಸಿ ಭಿನ್ನಾಭಿಪ್ರಾಯಗ ಳಿಗೂ ತಂಟೆ ತಕರಾರುಗಳಿಗೂ ಎಡೆಗೊಡುವವರ ವಿರುದ್ಧ ಸ್ಪಷ್ಟವಾದ ನಿರ್ದೇಶನ ಈ ಪವಿತ್ರ ಖುರ್‌ಆನ್ ವಚನ ನೀಡುತ್ತದೆ.

ಅಂತಾರಾಷ್ಟ್ರೀಯ ವಲಯದಲ್ಲಿ ಇಸ್ಲಾಮಿನ ಉದ್ದೇಶ ಸುಶಕ್ತ ರಾಜ್ಯಗಳ ಒಂದು ಒಕ್ಕೂಟವಾಗಿದೆ. ಈ ರಾಜ್ಯಗಳು ಶಾಂತಿ, ಮತ ಸ್ವಾತಂತ್ರ್ಯ ಮತ್ತು ಜನ ಕಲ್ಯಾಣಕ್ಕಾಗಿ ಕೆಲಸ ಮಾಡಬೇಕಾಗಿವೆ. ಎಲ್ಲಾ ಅಂತಾ ರಾಷ್ಟ್ರೀಯ ಒಪ್ಪಂದಗಳು ಈ ಉದ್ದೇಶಗಳನ್ನು ಕಾರ್ಯ ರೂಪಕ್ಕೆ ತರಲಿಕ್ಕಾಗಿರಬೇಕು. ಒಂದು ಪಕ್ಷವನ್ನು ಬಲ ಹೀನಗೊಳಿಸಲಿಕ್ಕಾಗಿ ಅಥವಾ ಬಲಹೀನತೆಯ ಪ್ರಯೋ ಜನ ಪಡೆಯಲಿಕ್ಕಾಗಿಯೇ ಒಂದು ಒಪ್ಪಂದ ಮಾಡಿಕೊ ಳ್ಳಬಾರದು. ಅಂತಃಛಿದ್ರಕಾರಿ ವರ್ತನೆಗಳೂ. ಒಪ್ಪಂದದ ನೆಪದಿಂದ ಶೋಷಣೆ ನಡೆಸುವುದೂ ಪವಿತ್ರ ಖುರ್‌ಆನ್ ಖಂಡಿಸಿದೆ:

> ನೂಲನ್ನು ನೂತನಂತರ ತುಂಡರಿಸುವ ಸ್ತ್ರೀ ಯಂತೆ ನೀವು ಆಗಬೇಡಿರಿ. ಒಂದು ಜನಾಂಗವು ಇನ್ನೊಂದು ಜನಾಂಗಕ್ಕಿಂತ ಹೆಚ್ಚು ಶಕ್ತಿಶಾಲಿಯಾ ಗುವುದೆಂಬ ಭಯದಿಂದ ನಿಮ್ಮ ಒಪ್ಪಂದಗಳನ್ನು ಮೋಸಗೊಳಿಸುವ ಸಾಧನವನ್ನಾಗಿ ಮಾಡಬೇ ಡಿರಿ... ನಿಮ್ಮ ಒಪ್ಪಂದಗಳನ್ನು ಮೋಸದಿಂದ ಲಾಭಗಳಿಸಲು ಪ್ರಯೋಗಿಸ ಬೇಡಿರಿ. ಹಾಗೆ ಮಾಡಿದರೆ ನಿಮ್ಮ ಸ್ಥಿರವಾಗಿ ನೆಲೆ ನಿಂತ ಪಾದ ಗಳು ಜಾರಿ ನೀವು ದುರವಸ್ಥೆಯನ್ನು ಪಡೆಯು ವಿರಿ. (16:93,95)

ಅಂತಾರಾಷ್ಟ್ರೀಯ ಒಪ್ಪಂದಗಳು ಜನಾಂಗಗಳನ್ನು ಪರಸ್ಪರ ಅಭಿವೃದ್ಧಿಗಾಗಿ ಒಟ್ಟಿಗೆ ಸೇರಿಸಿ ಅವರನ್ನು ಬಲ ಶಾಲಿಗಳಾಗಿ ಮಾಡಬೇಕು. ಈ ಒಪ್ಪಂದಗಳನ್ನು ಮೋಸಕ್ಕೆ ಸಾಧನಗಳನ್ನಾಗಿ ಬಳಸಿದರೆ ಅವು ಜನಾಂಗ

ಗಳನ್ನು ವಿಭಜಿಸಿ ಅಸ್ತವ್ಯಸ್ತಗೊಳಿಸುವುದಲ್ಲದೆ ಆ ಒಪ್ಪಂದಗಳಿಗಾಗಿ ವಿನಿಯೋಗಿಸಿದ ಶ್ರಮವು ವ್ಯರ್ಥವಾಗಿ ನಷ್ಟದಲ್ಲಿ ಪರ್ಯವಸಾನವಾಗುವುದು.

ಒಪ್ಪಂದದ ಪರಿಣಾಮವಾಗಿ ಒಪ್ಪಿದ ಕರ್ತವ್ಯಗಳನ್ನು ಅಂತಿಮವಾಗಿ ದೊರೆಯುವ ಲಾಭದ ಉದ್ದೇಶದಿಂದ ಕಡೆಗಣಿಸಬಾರದೆಂದೂ ತಿರಸ್ಕರಿಸಬಾರದೆಂದೂ ಪವಿತ್ರ ಖುರ್ ಆನ್ ಎಚ್ಚರಿಸುತ್ತದೆ (16:96). ಒಪ್ಪಂದದ ಪ್ರಕಾರ ವಚನ ಪಾಲಿಸುವುದು ನೈತಿಕ ಮತ್ತು ಆಧ್ಯಾತ್ಮಿಕ ಕರ್ತವ್ಯವೆಂದೂ ಅದರಿಂದ ಸ್ಥಿರವಾದ ಲಾಭವು ದೊರೆಯುವುದೆಂದೂ ಒಪ್ಪಂದ ಉಲ್ಲಂಘನೆಯ ಮೂಲಕ ದೊರಕುವ ಲಾಭ ತಾತ್ಕಾಲಿಕವಾಗಿರುವುದೆಂದೂ ಅದರಿಂದ ದೋಷ ಉಂಟಾಗುವುದೆಂದೂ ಈ ವಚನ ತಿಳಿಸುತ್ತದೆ. ಇದನ್ನು ಇನ್ನೊಂದು ಎಚ್ಚರಿಕೆಯ ಮೂಲಕ ಸಹ ವ್ಯಕ್ತಗೊಳಿಸಲಾಗಿದೆ:

> ನಿಮ್ಮ ಬಳಿಯಿರುವುದು ಕೊನೆಗೊಳ್ಳುವುದು; ಅಲ್ಲಾಹನ ಬಳಿಯಿರುವುದು ಬಾಕಿಯಾಗುವುದು. ಸಹನೆಯಿಂದ ವರ್ತಿಸುವವರಿಗೆ ನಾವು ಅವರ ಸತ್ಕರ್ಮಗಳಿಗನುಸಾರವಾಗಿ ಬಹುಮಾನ ನೀಡುವೆವು (16:97).

ಕೆಲವು ಸಂದರ್ಭಗಳಲ್ಲಿ ಒಂದು ಪಕ್ಷದ ಅಯೋಗ್ಯ ವರ್ತನೆಯಿಂದಾಗಿ ಇನ್ನೊಂದು ಪಕ್ಷಕ್ಕೆ ಒಪ್ಪಂದದ ಪ್ರಕಾರ ನಡೆಯುವುದು ಕಷ್ಟಕರ ಅಥವಾ ಅಸಾಧ್ಯವಾಗಿ ಪರಿಣಮಿಸಬಹುದು. ಇನ್ನೊಂದು ಪಕ್ಷ ಒಪ್ಪಂದದ ರದ್ದತಿಗೆ ಉದ್ಯುಕ್ತವಾಗಿದೆಯೆಂದು ಸ್ಪಷ್ಟಗೊಂಡರೆ ಮುಸ್ಲಿಮ್ ರಾಜ್ಯ ಆ ಒಪ್ಪಂದವನ್ನು ರದ್ದುಗೊಳಿಸಬಹುದು. ಆ ರೀತಿಯ ರದ್ದುಗೊಳಿಸುವಿಕೆ ಇನ್ನೊಂದು ಪಕ್ಷಕ್ಕೆ ಮೊದಲೇ ನೋಟೀಸು ನೀಡಿದ ನಂತರ ಆ ರೀತಿಯ ರದ್ದತಿಯಿಂದ ಯಾವುದೇ ದೋಷ ಇನ್ನೊಂದು ಪಕ್ಷಕ್ಕೆ ತಟ್ಟದ ರೀತಿಯಲ್ಲಿ ಮಾಡಬೇಕಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ಒಪ್ಪಂದ ಯಥಾರ್ಥವಾಗಿ ಭಂಗಗೊಳಿಸಲ್ಪಟ್ಟಿಲ್ಲವಾದರೆ, ಒಂದು ಪಕ್ಷ ಇನ್ನೊಂದು ಪಕ್ಷದ ವಿರುದ್ಧ ಸೈನಿಕ ಕಾರ್ಯಾಚರಣೆ ಕೈಗೊಳ್ಳಲು ಅನುಮತಿಸಲ್ಪಟ್ಟಿಲ್ಲ. ಇನ್ನೊಂದು ಪಕ್ಷ ಒಪ್ಪಂದವನ್ನು ಪಾಲಿಸುವುದು ಸಂಶಯಕರವೆಂದು ತೋರಿದರೂ ಸಹ ಆ ಪಕ್ಷಕ್ಕೆ ಮೊದಲೇ ನೋಟೀಸು ನೀಡಿ ಒಂದು ನಿಶ್ಚಿತ ದಿನಾಂಕದ ನಂತರ ಕರಾರು ಉದ್ದೇಶಿತ ಒಪ್ಪಂದ ಭಂಗದ ಕಾರಣದಿಂದಾಗಿ ಅಥವಾ ಒಪ್ಪಂದ ಭಂಗವಾಗುವ ಭಯ ತಲೆದೋರಿರುವ ಕಾರಣದಿಂದಾಗಿ ರದ್ದುಗೊಳಿಸಲ್ಪಡುವುದೆಂದು ತಿಳುವಳಿಕೆ ನೀಡಬೇಕಾಗಿದೆ. ಈ ರೀತಿ ಮುಂದಾಗಿ ತಿಳಿಸುವುದರಿಂದ ಯಾವುದಾದರೂ ತಪ್ಪು ಭಾವನೆ ಉಂಟಾಗಿದ್ದರೆ ಅವರ ನಿವಾರಣೆ ಸಾಧ್ಯವಾಗುವುದು, ಅಥವಾ ಒಪ್ಪಂದಕ್ಕೆ ಜೀವದಾನ ನೀಡಬಹುದು, ಅಥವಾ ಒಂದು ಹೊಸ ಒಪ್ಪಂದವನ್ನೇ ಮಾಡಲು ಸಾಧ್ಯವಾಗುವುದು. ಒಟ್ಟಾರೆ ಹೇಳುವುದಾದರೆ ಈ ರೀತಿ ಮುಂಚಿತವಾಗಿ ಒಂದು ಒಪ್ಪಂದದ ರದ್ದತಿಯ ಕುರಿತು ತಿಳಿಸುವುದರಿಂದ ಇನ್ನೊಂದು ಪಕ್ಷ ಆಕಸ್ಮಿಕವಾಗಿ ಆಕ್ರಮಣಕ್ಕೆ ಗುರಿಯಾಗುವುದು ತಪ್ಪುವುದಲ್ಲದೆ ಒಪ್ಪಂದ ರದ್ದುಗೊಂಡರೆ ಬೇಕಾದ ಇನ್ನಿತರ ಏರ್ಪಾಡುಗಳನ್ನು ಮಾಡುವುದು ಸಹ ಶಕ್ಯವಾಗುವುದು. (ಪವಿತ್ರ ಖುರ್ ಆನ್ 8:59 ನೋಡಿರಿ).

ಮುಸ್ಲಿಮರು ಶಾಂತ ರೀತಿಯಲ್ಲಿ ಸಮಸ್ಯೆಗಳನ್ನೂ ವಿಚಾರಗಳನ್ನೂ ಪರಿಹರಿಸಬೇಕಾದುದು ಮುಸ್ಲಿಮರ ಕರ್ತವ್ಯವೆಂದು ಪವಿತ್ರ ಖುರ್‌ಆನ್ ವಿಧಿಸಿದೆ (49:11). ಎರಡು ಮುಸ್ಲಿಮ್ ರಾಜ್ಯಗಳಿಗೆ ತಮ್ಮ ವಿವಾದಗಳನ್ನು ಸ್ನೇಹ ಪರವಾದ ಸಂಧಾನಗಳ ಮೂಲಕ ಪರಿಹರಿಸಲು ಸಾಧ್ಯವಾಗದೆ ಅವರ ಭಿನ್ನಾಭಿಪ್ರಾಯಗಳು ಅವರ ಮಧ್ಯೆ ಶಾಂತಿಭಂಗವಾಗುವ ಸಾಧ್ಯತೆಯನ್ನುಂಟುಮಾಡಿದರೆ ಆಗ ಇತರ ಮುಸ್ಲಿಮ್ ರಾಜ್ಯಗಳು ನ್ಯಾಯಯುತವಾದ ಒಂದು ಪರಿಹಾರವನ್ನು ಕಂಡು ಹಿಡಿಯಲು ಪ್ರಯತ್ನಿಸಬೇಕಾದುದು ಅವರ ಕರ್ತವ್ಯವಾಗುವುದು. ಒಂದು ರಾಜ್ಯವು ನಿಷ್ಪಕ್ಷ ರಾಜ್ಯಗಳ ಸಂಧಾನ ಯತ್ನಗಳ ಉಪಯೋಗ ಪಡೆಯಲು ಇಷ್ಟಪಡದಿದ್ದರೆ, ಅವರ ಸಂಧಾನ ಸಲಹೆಗಳನ್ನು ಪುರಸ್ಕರಿಸಲು ತಯಾರಾಗದಿದ್ದರೆ ನಿಷ್ಪಕ್ಷ ರಾಜ್ಯಗಳು ಒಟ್ಟಿಗೆ ಸೇರಿ ಈ ಅಸಹಕಾರಿ ರಾಜ್ಯವು ಅವರ ಸಲಹೆಗಳನ್ನು ಒಪ್ಪಲು ನಿರ್ಬಂಧಿಸಬೇಕಾಗಿದೆ. ಈ ಉದ್ದೇಶಕ್ಕಾಗಿ ಅಗತ್ಯವಿದ್ದರೆ ಶಕ್ತಿಪ್ರಯೋಗ ಸಹ ಮಾಡಬಹುದು. ಒಂದು ವಿವಾದದ ತೀರ್ಮಾನ ಕೈಗೊಳ್ಳುವಾಗ ಆ ವಿವಾದಕ್ಕೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ಸಂಧಾನ ನಡೆಸುವ ರಾಜ್ಯಗಳು ತೀರ್ಮಾನಿಸಬೇಕಲ್ಲದೆ ಈ ವಿವಾದ ತೀರ್ಮಾನಿಸುವಾಗ ಇತರ ಸಂಗತಿಗಳನ್ನು ವಿಚಾರಿಸು

ವುದು ಅನಗತ್ಯ. ಒಂದು ವಿವಾದಕ್ಕೆ ಸಂಬಂಧಿಸಿದ ಎರಡು ಪಕ್ಷಗಳು ಯಾವುದಾದರೂ ಸಂಧಾನ ಸೂತ್ರವನ್ನೂ ಒಪ್ಪಿದರೆ ತಡಮಾಡದೆ ಆ ಸಂಧಾನ ಸೂತ್ರವನ್ನೂ ಪಾಲಿಸಬೇಕಾಗಿದೆ. ಸಂಧಾನ ಮಾಡುವ ರಾಜ್ಯಗಳು ಯಾವುದೇ ಅನ್ಯ ವಿಷಯಗಳನ್ನು ಮೇಲೆತ್ತಬಾರದು. ಉದಾಹರಣೆಗಾಗಿ ಸಂಧಾನ ಮಾಡುವ ರಾಜ್ಯಗಳಿಗೆ ಅವರ ಶ್ರಮಕ್ಕಾಗಿ ಪರಿಹಾರ ಅಥವಾ ಅವರ ಪ್ರಯತ್ನಕ್ಕೆ ತಗುಲಿದ ಖರ್ಚು ಮೊದಲಾದ ಪ್ರಶ್ನೆಗಳನ್ನು ಎತ್ತಬಾರದು. ಅಲ್ಲದೆ ಸಂಧಾನ ನಡೆಸುವ ರಾಜ್ಯಗಳು ತಮ್ಮ ಸ್ವಂತ ಲಾಭವನ್ನೂ ರಾಜಿ ಸೂತ್ರದಿಂದ ಪಡೆಯಲೆತ್ನಿಸಬಾರದು. ಸಂಧಾನ ನಡೆಸುವ ರಾಜ್ಯಗಳು ಮುಂದಿರಿಸುವ ರಾಜಿ ಸೂತ್ರವನ್ನು ಅಲ್ಲಾಹನ ಆಜ್ಞೆಯೆಂದೂ ಅದನ್ನು ಒಪ್ಪಲು ನಿರಾಕರಿಸುವುದು ದೈವ ದ್ರೋಹವೆಂದೂ ಪವಿತ್ರ ಖುರ್‌ಆನ್ ವಿವರಿಸಿದೆ (49:10).

ಪವಿತ್ರ ಖುರ್‌ಆನ್ ಒಂದು ಸಾಮಾನ್ಯ ನೀತಿಯನ್ನು ಈ ರೀತಿ ವಿವರಿಸಿದೆ:

> ಕೆಟ್ಟದ್ದಕ್ಕೆ ಪ್ರತಿಫಲ ಅದಕ್ಕನುಗುಣವಾದ ಶಿಕ್ಷೆಯಾಗಿದೆ. ಆದರೆ ಒಬ್ಬ ಕ್ಷಮಿಸಿ ಅದರ ಫಲವಾಗಿ ಸುಧಾರಣೆಯನ್ನು ಪ್ರತೀಕ್ಷಿಸಿದರೆ ಆತನಿಗೆ ಅಲ್ಲಾಹನು ಬಹುಮಾನ ನೀಡುವನು. ಖಂಡಿತವಾಗಿಯೂ ಆತನು ದುರ್ಜನರನ್ನು ಇಷ್ಟಪಡುವುದಿಲ್ಲ. (42:41)

ಪವಿತ್ರ ಖುರ್‌ಆನ್ ಕೆಲವು ಅಪರಾಧಗಳನ್ನು ಮಾತ್ರ ವಿವರಿಸಿದೆ. ಇತರ ಅಪರಾಧಗಳ ವಿವರಣೆ ನೀಡಿ ಶಿಕ್ಷಾ ವಿಧಾನಗಳನ್ನು ಮುಸ್ಲಿಮ್‌ರಾಜ್ಯ ರೂಪಿಸಬೇಕಾಗಿದೆ. ಪವಿತ್ರ ಖುರ್‌ಆನ್ ವಿವರಿಸಿದ ಅಪರಾಧಗಳಲ್ಲಿ ಕೊಲೆ ಒಂದಾಗಿದೆ. ಅದರ ಕುರಿತು ಪವಿತ್ರ ಖುರ್‌ಆನ್ ಈ ರೀತಿ ವಿವರಿಸಿದೆ:

> ಓ ಸತ್ಯ ವಿಶ್ವಾಸಿಗಳೇ ಕೊಲೆಯಾದವರ ಬಗ್ಗೆ ಸಮಾನ ಪ್ರತಿದಂಡನೆ ಮಾಡುವುದು ನಿಮಗೆ ವಿಧಿಸಲಾಗಿದೆ — ಸ್ವತಂತ್ರ ಪುರುಷನಿಗೆ ಸ್ವತಂತ್ರ ಪುರುಷ, ದಾಸನಿಗೆ ದಾಸ, ಸ್ತ್ರೀಗೆ ಸ್ತ್ರೀ. ತಪ್ಪಿತಸ್ಥನಿಗೆ ಕೊಲೆಯಾದವನ ವಾರೀಸುದಾರರು ಪರಿಹಾರ ಧನದ ಬದಲಾಗಿ ಕ್ಷಮಾಪಣೆ ನೀಡುವುದಾದರೆ ಆ ಪರಿಹಾರಧನವನ್ನು ಯೋಗ್ಯವಾದ ರೀತಿಯಲ್ಲಿ ಪಡೆದು ಹಕ್ಕುದಾರರಿಗೆ ನೀಡಬೇಕಾಗಿದೆ. ಇದು ಅಲ್ಲಾಹನಿಂದ ನೀಡಲ್ಪಡುವ ಒಂದು ಔದಾರ್ಯವಾಗಿದ್ದು ಅದೊಂದು ಕೃಪೆಯಾಗಿದೆ. ಅನಂತರ ಯಾರಾದರೂ ಮೇರೆ ಮೀರಿ ವರ್ತಿಸಿದರೆ ಆತನಿಗೆ ವೇದನಾಜನಕ ಶಿಕ್ಷೆ ದೊರಕುವುದು. ಓ ಬುದ್ಧಿವಂತರೇ, ನಿಮಗೆ ಪ್ರತಿದಾಯಕ ನಿಯಮದಲ್ಲಿ ಜೀವನವಿದೆ. ಇದರಿಂದ ನೀವು ರಕ್ಷೆಯನ್ನು ಗಳಿಸಬಲ್ಲಿರಿ. (2:179-180)

ಪವಿತ್ರ ಖುರ್‌ಆನ್ ವಿವರಿಸಿದ ಇತರ ಅಪರಾಧಗಳು ವ್ಯಭಿಚಾರ (24:3), ನಿರಪರಾಧಿ ಸ್ತ್ರೀಯರ ಮೇಲೆ ದೋಷಾರೋಪಣೆ (24:5) ಮತ್ತು ಕಳವು (5:39). ವ್ಯಭಿಚಾರಕ್ಕೆ ಒಂದು ನೂರು ಛಡಿಯೇಟುಗಳು ಮತ್ತು ಸುಳ್ಳು ದೋಷಾರೋಪಕ್ಕೆ ಎಂಭತ್ತು ಛಡಿಯೇಟುಗಳು ಶಿಕ್ಷೆಯಾಗಿದೆ. ಪವಿತ್ರ ಖುರ್‌ಆನ್ ಈ ಶಿಕ್ಷೆಗಳನ್ನು ವಿಧಿಸುವ ಮೊದಲು ಪರವಾದಿಗಳೇಯರಾದ ಪೈಗಂಬರರು ಮೂಸಾಪ್ರವಾದಿಯ ನಿಯಮಗಳನ್ನು ಅನುಸರಿಸಿ ವ್ಯಭಿಚಾರಕ್ಕೆ ಕಲ್ಲು ಹೊಡೆದು ಕೊಲ್ಲುವ ಶಿಕ್ಷೆಯನ್ನು ವಿಧಿಸುತ್ತಿದ್ದರು. ಅನಂತರ ಪವಿತ್ರ ಖುರ್‌ಆನಿನ ಪಾಠಗಳಿಗನುಸಾರವಾಗಿ ವ್ಯಭಿಚಾರಕ್ಕೆ ಒಂದು ನೂರು ಛಡಿಯೇಟಿನ ಶಿಕ್ಷೆ ಜಾರಿಗೊಳಿಸಿದರು.

ಕಳ್ಳತನ ಮತ್ತು ದರೋಡೆಗೆ ಅಪರಾಧಿಯ ಕೈಗಳನ್ನು ಕಡಿಯುವ ಶಿಕ್ಷೆ ಪವಿತ್ರ ಖುರ್‌ಆನ್ ವಿಧಿಸಿದೆ. ಆದರೆ ಈ ಶಿಕ್ಷೆ ಬಹಳ ಕಠಿಣವಾದ ಅಪರಾಧಕ್ಕೆ ಮಾತ್ರವಾಗಿದ್ದು ಶಿಕ್ಷೆಯನ್ನು ಕಮ್ಮಿ ಮಾಡಲು ಯಾವುದೇ ನಿರ್ವಾಹವಿಲ್ಲದ ಸಂದರ್ಭಗಳಲ್ಲಿ ವಿಧಿಸಲಾಗುವುದು. ಪವಿತ್ರ ಖುರ್‌ಆನ್ ಉಪಯೋಗಿಸಿದ ಶಬ್ದಗಳ ಪ್ರಧಾನ ಅರ್ಥ ಕೈಕಡಿಯುವುದಾದರೂ ಈ ಪದಕ್ಕೆ ಅರಬಿ ಭಾಷಾ ಶಾಸ್ತ್ರದ ಪ್ರಕಾರ ಇನ್ನೊಂದು ಅರ್ಥವಿದ್ದು ಅದರ ಉದ್ದೇಶ ಅಪರಾಧಿಯ ಚಟುವಟಿಕೆಗಳನ್ನು ನಿಯಂತ್ರಿಸುವುದು ಅಥವಾ ಸೆರೆಮನೆವಾಸ ವಿಧಿಸುವುದಾಗಿದೆಯೆಂದು ಸಹ ಒಂದು ಅಭಿಪ್ರಾಯ ವ್ಯಕ್ತಗೊಳಿಸಲಾಗಿದೆ.

ಈ ಕೆಲವು ಶಿಕ್ಷೆಗಳು ಕಠಿಣವೆಂದು ತೋರಬಹುದು, ಆದರೆ ಇವುಗಳನ್ನು ಬುದ್ಧಿಪೂರ್ವಕವಾಗಿ ಜಾರಿಗೆ ತಂದರೆ ಗುಣಕಾರಿಯಾಗುವುದೆಂದು ಅನುಭವವು ಸ್ಪಷ್ಟಗೊಳಿಸಿದೆ.

ನಮ್ಮ ಕೊನೆಯ ಮಾತು: ಎಲ್ಲಾ ಸ್ತುತಿಗಳು ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಗೆ. ●

ಭಾಷಾಂತರ: ಎಂ. ಉಬೈದುಲ್ಲಾ

# ಪ್ರವಾದಿತ್ವದ ಬಗ್ಗೆ ಅಲ್ಲಾಹನ ಕರಾರು ಮತ್ತು ಮೌದೂದಿ ವ್ಯಾಖ್ಯಾನ

'ಸನ್ಮಾರ್ಗ' ಪತ್ರಿಕೆಯ ಜುಲೈ 11ರ ಸಂಚಿಕೆಯಲ್ಲಿ ಪ್ರಕಟವಾದ 'ಕುರ್‌ಆನ್ ವ್ಯಾಖ್ಯಾನ'ವು ಅತಿ ಪ್ರಧಾನವಾದೊಂದು ವಿಚಾರವನ್ನು ಬಯಲಿಗೆಳೆದಿದೆ. 'ಸನ್ಮಾರ್ಗ'ದಲ್ಲಿ ಪ್ರಕಟವಾಗುತ್ತಿರುವ ಖುರ್‌ಆನ್ ವ್ಯಾಖ್ಯಾನದ ವ್ಯಾಖ್ಯಾನಕರ್ತ ಯಾರು ಎಂಬುದನ್ನು ಅದರಲ್ಲಿ ಸ್ಪಷ್ಟಪಡಿಸಿಲ್ಲವಾದರೂ ಅದು ಜನಾಬ್ ಅಬುಲ್ ಆಲಾ ಮೌದೂದಿಯವರ ವ್ಯಾಖ್ಯಾನವಾಗಿರಬಹುದೆಂದು ಊಹಿಸಿಕೊಳ್ಳಬಹುದು. ವ್ಯಾಖ್ಯಾನಕಾರ ಇಲ್ಲದೆ ವ್ಯಾಖ್ಯಾನ ಸಹ ಇರಲಾರದಷ್ಟೆ!

'ಸನ್ಮಾರ್ಗ'ದಲ್ಲಿ ಪ್ರಕಟವಾದ ಪವಿತ್ರ ಖುರ್‌ಆನಿನ 'ಆಲ ಇಮ್ರಾನ್' ಅಧ್ಯಾಯ 81ನೇ ವಚನದ ಭಾಷಾಂತರ ಹೀಗಿದೆ:

**ಅಲ್ಲಾಹನು ಪ್ರವಾದಿಗಳೊಡನೆ, 'ಇಂದು ನಾವು ನಿಮಗೆ ಗ್ರಂಥ ಮತ್ತು ಸದ್ವಿವೇಕ ಪ್ರಧಾನ ಮಾಡಿರುತ್ತೇವೆ; ನಾಳೆ ಇನ್ನೊಬ್ಬ ಸಂದೇಶವಾಹಕನು ನಿಮ್ಮಲ್ಲಿ ಮೊದಲಿಂದಲೇ ಇರುವ ಇದೇ ಶಿಕ್ಷಣದ ದೃಢೀಕರಣ ಮಾಡುತ್ತ, ನಿಮ್ಮ ಬಳಿಗೆ ಬಂದರೆ ನೀವು ಅವನ ಮೇಲೆ ವಿಶ್ವಾಸ ತಂದು ಅವನಿಗೆ ಸಹಾಯ ಮಾಡಬೇಕಾಗುವುದು' ಎಂಬ ಕರಾರು ಪಡೆದುದನ್ನು ಸ್ಮರಿಸಿರಿ.**

ಅಲ್ಲಾಹು ಪ್ರವಾದಿಗಳಿಂದ ಮಹತ್ವಪೂರ್ಣವಾದೊಂದು ಕರಾರನ್ನು ಪಡೆದಿರುವನೆಂದೂ ಆ ಪ್ರವಾದಿಗಳನ್ನು ಸ್ವೀಕರಿಸಿದ ಅವರ ಅನುಯಾಯಿಗಳೆಡೆಯಲ್ಲಿ ಕಾಲಾಂತರದಲ್ಲಿ ಉಂಟಾಗಬಹುದಾಗ ಲೋಪದೋಷಗಳನ್ನು ತಿದ್ದಿಕೊಡಲು ಅವರೆಡೆಯಿಂದಲೇ ಇನ್ನೊಬ್ಬ ಪ್ರವಾದಿಯನ್ನು ಅಲ್ಲಾಹು ನಿಯೋಗಿಸುವನೆಂದೂ ಅಂತಹ ಸಂದೇಶವಾಹಕರಲ್ಲಿ ಸಹ ವಿಶ್ವಾಸ ಹೊಂದಿ ಅವರಿಗೆ ಸಹಾಯ ಮಾಡಬೇಕೆಂಬುದೇ ಆ ಕರಾರೆಂದೂ ಮೇಲಿನ ಖುರ್‌ಆನ್ ವಚನದಲ್ಲಿ ವಿವರಿಸಲಾಗಿದೆ.

ಕಾಲ ಕ್ರಮೇಣ ಮುಸ್ಲಿಮರೆಡೆಯಲ್ಲಿ ಉದ್ಭವಿಸಬಹುದಾದ ಅನಾಚಾರ ಮತ್ತು ಅಧರ್ಮಗಳ ಕುರಿತು ಹಾಗೂ ಮುಸ್ಲಿಮರಿಗೆ ಸಂಭವಿಸಬಹುದಾದ ಅಧಃಪತನದ ಕುರಿತು ಹ. ಮುಹಮ್ಮದ್ ಪೈಗಂಬರರು ಸ್ಪಷ್ಟವಾದ ಭವಿಷ್ಯವಾಣಿಗಳನ್ನು ನುಡಿದಿರುವರು. ಇಂದಿನ ಮುಸ್ಲಿಮರು ಇಸ್ಲಾಂ ಧರ್ಮ ತತ್ವಗಳಿಂದ ಬಹುದೂರ ಸರಿದಿರುವರೆಂದು ಅವರ ಇಂದಿನ ಶೋಚನೀಯ ಅವಸ್ಥೆಯೇ ಸ್ಪಷ್ಟ ಹೇಳುತ್ತದೆ. ಹೀಗಿರುವ ಪರಿಸ್ಥಿತಿಯಲ್ಲಿ "ನಾಳೆ ಇನ್ನೊಬ್ಬ ಸಂದೇಶವಾಹಕನು ನಿಮ್ಮಲ್ಲಿ ಮೊದಲಿಂದಲೇ ಇರುವ ಇದೇ ಶಿಕ್ಷಣದ ದೃಢೀಕರಣ ಮಾಡುತ್ತಾ ನಿಮ್ಮ ಬಳಿಗೆ ಬಂದರೆ ನೀವು ಅವನ ಮೇಲೆ ವಿಶ್ವಾಸ ತಂದು ಅವನಿಗೆ ಸಹಾಯ ಮಾಡಬೇಕಾಗುವುದು" ಎಂಬುದಾಗಿ ಅಲ್ಲಾಹು ಪ್ರವಾದಿವರ್ಯರಿಂದ ಕರಾರು ಪಡೆದಿರುವುದನ್ನು ಮುಸ್ಲಿಮರು ಸ್ಮರಿಸಬೇಕಾಗಿದೆ. ಮುಸ್ಲಿಮರನ್ನು ಅಧ:ಪತನದಿಂದ ಮೇಲೆತ್ತುವ ಒಬ್ಬ ಸಂದೇಶವಾಹಕನ ಕುರಿತು ಮೇಲಿನ ಖುರ್‌ಆನ್ ವಾಕ್ಯದಲ್ಲಿ ಸ್ಪಷ್ಟವಾದ ಭವಿಷ್ಯವಾಣಿಯು ಅಡಕವಾಗಿದೆ. ಮಾತ್ರವಲ್ಲ. ತನ್ನ ಸಮುದಾಯವನ್ನು ಉದ್ಧರಿಸಲು ಒಬ್ಬ ಸಂದೇಶವಾಹಕನನ್ನು ಅಲ್ಲಾಹು ನಿಯೋಗಿಸುವನೆಂದು ಹ. ಮುಹಮ್ಮದ್ ಪೈಗಂಬರ್(ಸ) ಭವಿಷ್ಯ ನುಡಿದಿರುವ ಅನೇಕ ಹದೀಸ್‌ಗಳು ಸಹ ಇವೆ. ನಿಯೋಗಿಸಲ್ಪಡುವ ಆ ಮಹಾತ್ಮರನ್ನು "ಮಸೀಹ್" ಎಂದೂ "ಇಬ್ನು ಮರಿಯಂ" ಎಂದೂ "ಮಹದಿ" ಎಂದೂ ಹಲವಾರು ಗುಣನಾಮಗಳಿಂದ ಪೈಗಂಬರರು ಸ್ಮರಿಸಿರುವರು. ಹೀಗಿರುವಾಗ. ಇಸ್ಲಾಂ ಧರ್ಮದಲ್ಲಿ ಬಂದು ಸೇರಿರುವ ದುರಾಚಾರಗಳನ್ನೂ ಮೂಢ ವಿಶ್ವಾಸಗಳನ್ನೂ ಹೋಗಲಾಡಿಸಿ. ಅವರನ್ನು ಯಥಾರ್ಥ ಇಸ್ಲಾಂ ಧರ್ಮ ತತ್ವಗಳ ಕಡೆ ಆಹ್ವಾನಿಸುವ ಒಬ್ಬ ಸಂದೇಶ ವಾಹಕನ ಅವತಾರವು ಈ ಕಾಲದಲ್ಲಿ ಅನಿವಾರ್ಯವಾಗಿರುತ್ತದೆ. ಅಲ್ಲಾಹು ತನ್ನ ವಾಗ್ದಾನ ಪ್ರಕಾರ ಆ ಸಂದೇಶವಾಹಕನನ್ನು ಸರಿಯಾದ ಸಮಯದಲ್ಲೇ (ಹಿಜರಿ 14ನೇ ಶತ

ಮಾನದ ಆದಿಯಲ್ಲೇ) ನಿಯೋಗಿಸಿರುವನು. ಅವರ ಹೆಸರು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಎಂದಾಗಿದೆ. ಇಸ್ಲಾಂ ಧರ್ಮವನ್ನು ಉದ್ಧರಿಸಲಿಕ್ಕಾಗಿ ಅಲ್ಲಾಹು ತನ್ನನ್ನು 'ಇಮಾಂ ಮಹದಿ'ಯಾಗಿ ನಿಯೋಸಿರುವನೆಂದು ಆ ಪುಣ್ಯಾತ್ಮರು ಘೋಷಿಸಿದರು. ಅವರು ಪವಿತ್ರ ಖುರ್‌ಆನಿನ ದಿವ್ಯ ಸಂದೇಶವನ್ನು ಪ್ರಬೋಧಿಸಲಿಕ್ಕೂ ಇಸ್ಲಾಂ ಧರ್ಮವನ್ನು ಪುನರುಜ್ಜೀವನಗೊಳಿಸಲಿಕ್ಕೂ ನಿಯೋಗಿಸಲ್ಪಟ್ಟಿರುವರು. ಅಲ್ಲದೆ, ಇಸ್ಲಾಂ ಧರ್ಮದಿಂದ ಭಿನ್ನವಾದ ಯಾವುದೇ ನೂತನ ಧರ್ಮವನ್ನು ಅವರು ಪ್ರಬೋಧಿಸಲಿಲ್ಲ. "ನಾಳೆ ಇನ್ನೊಬ್ಬ ಸಂದೇಶವಾಹಕನು ನಿಮ್ಮಲ್ಲಿ ಮೊದಲಿಂದಲೇ ಇರುವ ಇದೇ ಶಿಕ್ಷಣದ ದೃಢೀಕರಣ ಮಾಡುತ್ತಾ ನಿಮ್ಮ ಬಳಿಗೆ ಬಂದರೆ, ನೀವು ಅವನ ಮೇಲೆ ವಿಶ್ವಾಸ ತಂದು ಅವನಿಗೆ ಸಹಾಯ ಮಾಡಬೇಕಾಗುವುದು" ಎಂಬ ಕರಾರನ್ನು ಅಲ್ಲಾಹು ಹಝ್ರತ್ ಮುಹಮ್ಮದ್ ಪೈಗಂಬರರಿಂದಲೂ ಪಡೆದಿರುವ ಕಾರಣ, ಇಂದು ಆಗತರಾಗಿರುವ ಈ ದಿವ್ಯ ಸಂದೇಶವಾಹಕನಲ್ಲಿ ವಿಶ್ವಾಸ ತಂದು ಅವರು ಸ್ಥಾಪಿಸಿದ ಜಮಾತಿನಲ್ಲಿ ಸೇರಿಕೊಂಡು ಅಲ್ಲಾಹನ ಮಾರ್ಗದಲ್ಲಿ ಅವರಿಗೆ ಸಹಾಯ ಮಾಡಬೇಕಾದುದು ಹಝ್ರತ್ ಮುಹಮ್ಮದ್ ಪೈಗಂಬರರ ಮೇಲೆ ವಿಶ್ವಾಸವಿರುವ ಪ್ರತಿಯೊಬ್ಬ ಮುಸ್ಲಿಮನ ಧಾರ್ಮಿಕ ಕರ್ತವ್ಯವಾಗಿರುತ್ತದೆ. ಇಸ್ಲಾಂ ಧರ್ಮದ ಪುನರುತ್ಥಾನಾರ್ಥ ಒಬ್ಬ ಪ್ರವಾದಿಯು ಬರುವರೆಂಬ ಭವಿಷ್ಯವಾಣಿಯು ಪವಿತ್ರ ಖುರ್‌ಆನಿನಲ್ಲಿ ಇಷ್ಟೊಂದು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿರುವಾಗ, ಮುಹಮ್ಮದ್ ( ಸ ) 'ಅಂತ್ಯ ಪ್ರವಾದಿ'ಯಾಗಿರುವರೆಂದೂ ಅವರ ನಂತರ ಯಾರೂ ಸಹ ಪ್ರವಾದಿಯಾಗಿ ನಿಯೋಗಿಸಲ್ಪಡಲಾರರೆಂದೂ ಹೇಳುತ್ತಾ ಪ್ರವಾದಿವರ್ಯರು ಅಲ್ಲಾಹನೊಡನೆ ಮಾಡಿರುವ ಕರಾರನ್ನು ತಳ್ಳಿ ಹಾಕುವುದು ನಿಜವಾಗಿಯೂ ವಚನ ಭಂಗ ಮಾಡಿದ್ದಂತೆಯೇ. ಮೌದೂದಿಗಳು ಮೇಲಿನ ವಚನವನ್ನು ಖುರ್‌ಆನಿನಲ್ಲಿ ಓದುತ್ತಿದ್ದೂ ಆದರ ಭಾಷಾಂತರವನ್ನು ತಮ್ಮ ಪತ್ರಿಕೆಯಲ್ಲಿ (ಪ್ರಮಾದ ವಶಾತ್) ಪ್ರಕಟಿಸುತ್ತಿದ್ದೂ ಸಹ ದೇವನಿಂದ ನಿಯುಕ್ತರಾದ ಈ ಸಂದೇಶವಾಹಕನನ್ನು ಎದುರಿಸುವುದರಲ್ಲಿ ಪೈಪೋಟಿ ನಡೆಸುತ್ತಾರೆ! ಅಹ್ಮದಿಯಾ ಸಂಘಟನೆಯನ್ನು ವಿರೋಧಿಸುವ ಸಂಭ್ರಮದಲ್ಲಿ ಪವಿತ್ರ ಖುರ್‌ಆನಿನ ಆಜ್ಞೆಗಳನ್ನೂ ಪೈಗಂಬರರ ಭವಿಷ್ಯವಾಣಿಗಳನ್ನೂ ಇವರು ಸುಲಭದಲ್ಲೇ ಅಲ್ಲಗಳೆಯುತ್ತಿರುವುದು ಅತ್ಯಂತ ದುರದೃಷ್ಟಕರ. ಏನೊಂದು ವಿಪರ್ಯಾಸ!

'ಸನ್ಮಾರ್ಗ' ಪತ್ರಿಕೆಯಲ್ಲಿ ಮೇಲಿನ ಖುರ್‌ಆನ್ ವಾಕ್ಯವನ್ನು ವ್ಯಾಖ್ಯಾನಿಸುತ್ತಾ ಈ ರೀತಿ ಬರೆಯಲಾಗಿದೆ:

"ಇದರ ಅರ್ಥವೇನೆಂದರೆ ಪ್ರತಿಯೊಬ್ಬ ಪ್ರವಾದಿಯಿಂದಲೂ ಈ ಬಗ್ಗೆ ಪ್ರಮಾಣ ವಚನ ಪಡೆದುಕೊಳ್ಳಲಾಗುತ್ತಿತ್ತು. ಪ್ರವಾದಿಯಿಂದ ಪಡೆದ ಪ್ರಮಾಣ ವಚನಕ್ಕೆ ಅವರ ಅನುಯಾಯಿಗಳೂ ಬಾಧ್ಯರಾಗುವುದು ಸಹಜ. ಇಲ್ಲಿ ನೀಡಿರುವ ಆದೇಶವೆಂದರೆ– ನೀವು ಬಾಧ್ಯತೆ ಹೊಂದಿರುವ ಅದೇ ಧರ್ಮದ ಆಹ್ವಾನ ಮತ್ತು ಸಂಸ್ಥಾಪನೆಗಳಿಗಾಗಿ ನಮ್ಮ ಕಡೆಯಿಂದ ಕಳುಹಿಸಲ್ಪಡುವ ಪ್ರವಾದಿಗೆ ನೀವು ಸಹಕಾರ ನೀಡಬೇಕಾಗುವುದು. ಅವರೊಂದಿಗೆ ಪಕ್ಷಪಾತವೆಸಗಬಾರದು. ನಿಮ್ಮನ್ನು ನೀವೇ ಧರ್ಮದ ಏಕಾಧಿಕಾರಿಗಳೆಂದು ಭಾವಿಸಿಕೊಳ್ಳಬಾರದು. ಸತ್ಯವನ್ನು ವಿರೋಧಿಸಬಾರದು. ನಮ್ಮ ಕಡೆಯಿಂದ ಎಲ್ಲೇ ಆಗಲಿ ಯಾರೇ ಆಗಲಿ ಸತ್ಯ ಧ್ವಜವನ್ನೇರಿಸಲಿಕ್ಕಾಗಿ ಎಬ್ಬಿಸಲ್ಪಟ್ಟರೆ ಆ ಧ್ವಜದ ಕೆಳಗೆ ನೀವೂ ಒಟ್ಟು ಸೇರಬೇಕು."

ಈ ವ್ಯಾಖ್ಯಾನಕ್ಕೆ ಇನ್ನೊಂದು ವ್ಯಾಖ್ಯಾನದ ಅಗತ್ಯವಿದೆಯೆಂದು ತೋರುವುದಿಲ್ಲ. ಮುಸ್ಲಿಮರು "ಬಾಧ್ಯತೆ ಹೊಂದಿರುವ ಅದೇ ಧರ್ಮದ ಆಹ್ವಾನ ಮತ್ತು ಸಂಸ್ಥಾಪನೆಗಳಿಗಾಗಿ" ಮುಸ್ಲಿಮರೆಡೆಯಿಂದಲೇ ಒಬ್ಬ ಪ್ರವಾದಿಯು ನಿಯೋಗಿಸಲ್ಪಡುವರೆಂಬುದನ್ನು ಇಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಕಣ್ಣಿರುವವರು ಕಂಡುಕೊಳ್ಳಲಿ!

ಆದರೆ, ವ್ಯಾಖ್ಯಾನವನ್ನು ಮುಂದುವರಿಸುತ್ತಾ 'ಸನ್ಮಾರ್ಗ'ದಲ್ಲಿ ಈ ರೀತಿ ಬರೆಯಲಾಗಿದೆ: "ಆದರೆ ಖುರ್‌ಆನಿನಲ್ಲಾಗಲಿ ಹದೀಸ್‌ನಲ್ಲಾಗಲಿ ಎಲ್ಲೂ ಹ. ಮುಹಮ್ಮದ್ (ಸ) ರೊಡನೆ ಇಂಥಾ ಕರಾರನ್ನು ಪಡೆದುದಾಗಲಿ ಅವರು ತನ್ನ ಉಮ್ಮತ್‌ಗೆ (ಸಮುದಾಯಕ್ಕೆ) ಮುಂಬರುವ ಪ್ರವಾದಿಯ ಸಮಾಚಾರ ತಿಳಿಸಿ ಅವರ ಮೇಲೆ ವಿಶ್ವಾಸ ತರಬೇಕೆಂದು ಆದೇಶ ಕೊಟ್ಟಿರುವುದಾಗಲಿ ಇಲ್ಲ."

ಇದನ್ನು ಓದುವಾಗ ನಗಬೇಕೋ ಅಳಬೇಕೋ ಎಂದು ತಿಳಿಯುವುದಿಲ್ಲ. ನಾನು ಮೊದಲೇ ಹೇಳಿರು

ವಂತೆ ಪ್ರಸ್ತುತ ವ್ಯಾಖ್ಯಾನವು ಅಲ್‌ಅಲಿಮುಲ್ ಅಲ್ಲಾಮಃ ಮುಲ್ಲಾ ಅಬುಲ್‌ಆಲಾ ಮೌದೂದಿ ಸಾಹೇಬರಿಂದ ವಿರಚಿತ ಎಂದು ಊಹಿಸುತ್ತೇನೆ. ಸುಪ್ರಸಿದ್ಧ ಮತ ಪಂಡಿತನೆಂದು ಮೌದೂದಿಗಳು ಹೊಗಳಿ ಅಟ್ಟಕ್ಕೇರಿಸುವ, ಪವಿತ್ರ ಖುರ್‌ಆನನ್ನು ವ್ಯಾಖ್ಯಾನಿಸುವ ಸಾಹಸಕ್ಕಿಳಿದ ಜನಾಬ್ ಮೌದೂದಿ ಸಾಹೇಬರು ಈ ರೀತಿ ಬರೆದರೆಂದು ಕಾಣುವಾಗ ನಿಜವಾಗಿಯೂ ಅವರೊಡನೆ ಅನುಕಂಪ ತೋರುತ್ತದೆ. ಎಲ್ಲಿಯಾದರೂ ಕಾದಿಯಾನಿಗಳು ಈ ಖುರ್‌ಆನ್ ವಚನವನ್ನು ತಮ್ಮ ವಿಶ್ವಾಸಕ್ಕೆ ನಿದರ್ಶನವಾಗಿ ತೋರಿಸಿ ಬಿಡುವರೇ ಎಂಬ ಭಯವು ವ್ಯಾಖ್ಯಾನಕಾರನನ್ನು ಬಾಧಿಸಿರಬೇಕು. ಹ. ಮುಹಮ್ಮದ್ (ಸ)ರೊಡನೆ ಈ ರೀತಿ ಕರಾರನ್ನು ಪಡೆಯಲಿಲ್ಲ ಎಂದು ಅವರು ನಿಸ್ಸಂಕೋಚವಾಗಿ ಬರೆದಿದ್ದಾರೆ. ಪ. ಖುರ್‌ಆನನ್ನು ವ್ಯಾಖ್ಯಾನಿಸ ಹೊರಟ ಇವರು ಖುರ್‌ಆನಿನ ಕುರಿತು ಇಷ್ಟೊಂದು ಅಜ್ಞಾನಿಗಳೆಂದು ಹೇಳಲು ನಿರ್ವಾಹವಿಲ್ಲ. ಯಥಾರ್ಥವನ್ನು ತಿಳಿದೂ ಬಹುಜನರನ್ನು ಮೋಸಗೊಳಿಸುವ ಉದ್ದೇಶದಿಂದ ಅವರು ಈ ರೀತಿ ಆತ್ಮವಂಚನೆ ನಡೆಸಿರಬಹುದೆಂದೇ ತಿಳಿಯಬೇಕು. ಮೌದೂದಿಗಳು ಪವಿತ್ರ ಖುರ್‌ಆನಿನಲ್ಲಿ ಸೂರಃ ಅಹ್‌ಝಾಬ್ ಅಧ್ಯಾಯದ ಎಂಟನೆಯ ವಚನವನ್ನೊಮ್ಮೆ ನೋಡಲಿ ಎಂದು ಅವರನ್ನು ಆಹ್ವಾನಿಸುತ್ತೇನೆ. ಅದು ಈ ರೀತಿಯಿದೆ:

ವ ಇದ್ ಅಖದ್‌ನಾ ಮಿನನ್ನಬಿಯ್ಯೀನ
ಮೀಸಾಖಹುಂ ವಮಿನ್‌ಕ ವಮಿನ್ ನೂಹಿನ್
ವಇಬ್ರಾಹೀಮ ವಮೂಸಾ ವಈಸಬ್ನಿಮರ್
ಯಮ ವಅಖದ್‌ನಾ ಮಿನ್‌ಹುಂ ಮೀಸಾಖನ್
ಗಲೀಲ

ನಾವು ಪ್ರವಾದಿಗಳೊಡನೆ ಕರಾರು ಪಡೆದಿರುವುದನ್ನು ಸ್ಮರಿಸಿರಿ; ನಿನ್ನಿಂದಲೂ ನೂಹ್, ಇಬ್ರಾಹೀಂ, ಮೂಸಾ, ಈಸಬ್ನುಮರಿಯಂ ಎಂಬ ಪ್ರವಾದಿಗಳಿಂದಲೂ ನಾವು ದೃಢವಾದ ಪ್ರತಿಜ್ಞೆಯನ್ನು ಪಡೆದೆವು (33:8)

ಈ ವಾಕ್ಯದಲ್ಲಿ ಪ್ರವಾದಿಗಳೆಲ್ಲರಿಂದಲೂ ಕರಾರು ಪಡೆದಿರುವುದನ್ನು ಸಾಮಾನ್ಯವಾಗಿ ಹೇಳಿದ ನಂತರ ಐದು ಪ್ರವಾದಿಗಳಿಂದ ಕರಾರು ಪಡೆದಿರುವ ಕುರಿತು ಪ್ರತ್ಯೇಕವಾಗಿ ಎತ್ತಿಹೇಳಲಾಗಿದೆ. ಹಝ್ರತ್ ಮುಹಮ್ಮದ್ ಮುಸ್ತಫಾ (ಸ)ರಿಂದ ಕರಾರು ಪಡೆದುದನ್ನು ಇಲ್ಲಿ ಮೊತ್ತ ಮೊದಲಾಗಿ ಹೇಳಿದೆ. ಆದುದರಿಂದ ಹ. ಮುಹಮ್ಮದ್ (ಸ) ರವರ ಅನುಯಾಯಿಗಳಲ್ಲೂ ಪ್ರವಾದಿಗಳುಂಟಾಗುವರೆಂದೂ ಅವರಲ್ಲಿ ನಂಬಿಕೆಯಿಡಬೇಕಾದುದು ಆ ಪ್ರವಾದಿವರ್ಯರ ಅನುಯಾಯಿಗಳ ಧರ್ಮವೆಂದೂ ಸ್ಪಷ್ಟವಾಗುತ್ತದೆ. ಹೀಗಿರುವಾಗ 'ಕುರ್‌ಆನಿನಲ್ಲಾಗಲಿ ಹದೀಸ್‌ನಲ್ಲಾಗಲಿ ಎಲ್ಲೂ ಹಝ್ರತ್ ಮುಹಮ್ಮದ್ (ಸ) ರೊಡನೆ ಇಂಥಾ ಕರಾರನ್ನು ಪಡೆದುದಾಗಲಿ ಇಲ್ಲ' ಎಂದು ಜನಾಬ್ ಮೌದೂದಿಯವರು ಕೊಚ್ಚಿಕೊಂಡಿರುವುದು, ಒಂದೋ ಖುರ್‌ಆನಿನಲ್ಲಿ ಅವರಿಗಿರುವ ಅಜ್ಞತೆಯ ಕಾರಣದಿಂದಾಗಿರಬಹುದು; ಅಲ್ಲವಾದರೆ, ಸಾಮಾನ್ಯ ಮುಸ್ಲಿಮರನ್ನು ವಂಚಿಸಲು ಉದ್ದೇಶಪೂರ್ವಕ ನಡೆಸಿದ ಒಂದು ಆಕ್ರಮಣಕಾರಿ ಹೆಜ್ಜೆಯಾಗಿರಬಹುದು ಎಂದೇ ತಿಳಿಯಬೇಕು.

—M. P. I.


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪುಟ: **60** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
10-23/1008, Ansari Road, Bunder, Mangalore-575001.

# ಖುಮೇನಿಯ ಕೃತ್ಯಗಳು ಇಸ್ಲಾಮಿಕವಲ್ಲ

ಅಹ್ಮದಿಯಾ ಸಂಘಟನೆಯ ಸರ್ವೋನ್ನತ್ತ ನಾಯಕ (ಖಲೀಫ)ರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ ಅವರು ನಡೆಸಿದ ಪತ್ರಿಕಾ ಸಮ್ಮೇಳನದ ಕುರಿತು ಲಂಡನ್ ನಗರದಿಂದ ಪ್ರಕಟವಾಗುತ್ತಿರುವ ಉರ್ದು ದಿನಪತ್ರಿಕೆ 'ಜಂಗ್' ತನ್ನ 15-8-80ರ ಸಂಚಿಕೆಯಲ್ಲಿ ಈ ಕೆಳಗಿನ ವರದಿಯನ್ನು ಪ್ರಕಟಿಸಿದೆ:

"ಪಾಕಿಸ್ತಾನದಲ್ಲಿ ಅಹ್ಮದಿಯರನ್ನು ಅಮುಸ್ಲಿಮರೆಂದು ಘೋಷಿಸಿರುವ ಸಂವಿಧಾನ ತಿದ್ದುಪಡಿ ತಾತ್ಕಾಲಿಕವಾಗಿದೆ."

"ಅಹ್ಮದಿಯರನ್ನು ಕೇವಲ ಸಂವಿಧಾನ ಮತ್ತು ಕಾನೂನಿನ ಉದ್ದೇಶಗಳಿಗಾಗಿ ಅಮುಸ್ಲಿಮರೆಂದು ಘೋಷಿಸಲಾಗಿದೆ." — ಅಹ್ಮದಿಯಾ ಸಂಘಟನೆಯ ನೇತಾರರ ಘೋಷಣೆ.

ಲಂಡನ್ ಅಗಸ್ಟ್ 14 (ಜಂಗ್ ಪತ್ರಿಕೆಯ ವರದಿಗಾರ ಬರೆದುದು) –ಅಹ್ಮದಿಯಾ ಜಮಾಅತಿನ ಖಲೀಫ ಮಿರ್ಝಾ ನಾಸಿರ್ ಅಹ್ಮದ್ ಈ ರೀತಿ ಹೇಳಿದರು: "ಅಹ್ಮದಿಯರನ್ನು ಪಾಕಿಸ್ತಾನದಲ್ಲಿ ಅಮುಸ್ಲಿಮರೆಂದು ಸಂವಿಧಾನ ಮತ್ತು ಕಾನೂನಿನ ಉದ್ದೇಶಗಳಿಗಾಗಿ ಸಂವಿಧಾನದ ತಿದ್ದುಪಡಿಯ ಮೂಲಕ ಘೋಷಿಸಲಾಗಿದೆ. ಅಹ್ಮದಿಯರನ್ನು ಇಸ್ಲಾಮಿನ ತತ್ವೋಪದೇಶಗಳ ದೃಷ್ಟಿಯಲ್ಲಿ ಅಮುಸ್ಲಿಮರೆಂದು ಘೋಷಿಸಲಾಗಿಲ್ಲ." ಖಲೀಫ ಮಿರ್ಝಾ ನಾಸಿರ್ ಅಹ್ಮದ್ ಅವರು ಯೂರೋಪು ಮತ್ತು ಬ್ರಿಟನಿನಲ್ಲಿ ಸಂಚಾರವನ್ನು ಮುಗಿಸಿ ಆಫ್ರಿಕ ಮತ್ತು ಅಮೇರಿಕಕ್ಕೆ "ಜಿಹಾದ್"ಗಾಗಿ ಹೊರಡಲಿದ್ದು ಈ ದಿನ ಮಧ್ಯಾಹ್ನ ಲಂಡನಿನಲ್ಲಿ ಒಂದು ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತಾಡುತ್ತಿದ್ದರು. ಅವರೊಡನೆ ಅಹ್ಮದಿಯರನ್ನು ಅಮುಸ್ಲಿಮರೆಂದು ಸಂವಿಧಾನ ತಿದ್ದುಪಡಿಯ ಮೂಲಕ ಘೋಷಿಸಿದುದರ ಕುರಿತು ಪ್ರಶ್ನಿಸಿದಾಗ ಈ ರೀತಿ ಹೇಳಿದರು: "ಅಲ್ಲಾಹು ಈ ತಿದ್ದುಪಡಿಯನ್ನು ರದ್ದುಗೊಳಿಸಿರುವನು." ಖಲೀಫ ಸಾಹೇಬರೊಡನೆ ಇದರ ಕುರಿತು ವಿಶದೀಕರಿಸಲು ಕೇಳಿಕೊಂಡಾಗ ಅವರು ಈ ರೀತಿ ಹೇಳಿದರು: "ಭುಟ್ಟೋ ಬಹಳ ಚಾಣಾಕ್ಷ ವ್ಯಕ್ತಿಯಾಗಿದ್ದರು. ಆತ ಅಹ್ಮದಿಯರನ್ನು ಸಂವಿಧಾನದ ತಿದ್ದುಪಡಿಯ ಮೂಲಕ ಸಂವಿಧಾನ ಮತ್ತು ಕಾನೂನಿಗಾಗಿ ಮಾತ್ರ ಅಮುಸ್ಲಿಮರೆಂದು ಘೋಷಿಸಿದ್ದರು. ಇಸ್ಲಾಮಿ ತತ್ವೋಪದೇಶಗಳಿಗಾಗಿ ಅಮುಸ್ಲಿಮ್ ಎಂದು ಅಹ್ಮದಿಯರನ್ನು ಘೋಷಿಸಲಾಗಿಲ್ಲ." ಈ ಸಂವಿಧಾನ ತಿದ್ದುಪಡಿಯನ್ನು ರದ್ದುಗೊಳಿಸಲಿಕ್ಕಾಗಿ ನಿಮ್ಮ ಜಮಾಅತ್ ಯಾವುದಾದರೂ ಪ್ರಯತ್ನ ಮಾಡುತ್ತಿದೆಯೋ ಎಂದು ಕೇಳಿದಾಗ ಅವರು ಈ ರೀತಿ ಉತ್ತರಿಸಿದರು: "ನನ್ನ ಅಭಿಪ್ರಾಯದಲ್ಲಿ ಸಂವಿಧಾನದ ತಿದ್ದುಪಡಿ ನಿಷ್ಕ್ರಿಯೆಗೊಳ್ಳಲಿದೆ. ಈ ತಿದ್ದುಪಡಿ ರದ್ದುಗೊಳಿಸಲ್ಪಡುವುದೆಂದೂ ಜನರು ಆ ತಿದ್ದುಪಡಿಯನ್ನು ಮರೆತುಬಿಡುವರೆಂದೂ ನಾನು ಗ್ರಹಿಸಿದ್ದೇನೆ." ಪಾಕಿಸ್ತಾನದಲ್ಲಿ ಝಕಾತ್ ಸಂಬಂಧಿಸಿ ಅಹ್ಮದಿಯರ ಧೋರಣೆಯೇನೆಂದು ಪ್ರಶ್ನಿಸಿದಾಗ ಮಿರ್ಝಾ ನಾಸಿರ್ ಅಹ್ಮದ್ ಈ ರೀತಿ ಹೇಳಿದರು: "ಅಹ್ಮದಿಯರನ್ನು ಅಮುಸ್ಲಿಮರೆಂದು ಕರೆಯುವ ಒಂದು ಸರಕಾರಕ್ಕೆ ಅವರಿಂದ ಝಕಾತ್ ಪಡೆಯಲು ಯಾವುದೇ ಅಧಿಕಾರವಿಲ್ಲ. ಅಹ್ಮದಿಯರು ಝಕಾತ್ ಅವರ ಜಮಾಅತ್‌ಗೆ ಕೊಡುವರು."

## ಇಸ್ರಾಯೆಲ್ ಮತ್ತು ಬೈತುಲ್ ಮುಖದ್ದಸ್ (ಜೆರುಸಲೇಮ್)

ಖಲೀಫ ಮಿರ್ಝಾ ನಾಸಿರ್ ಅಹ್ಮದ್ ಅವರೊಡನೆ ಈ ರೀತಿ ಪ್ರಶ್ನಿಸಲಾಯಿತು: "ಇಸ್ರಾಯೆಲ್ ರಾಜ್ಯದ ಸ್ಥಾಪನೆ ಸರಿಯೆಂದು ನೀವು ಭಾವಿಸುತ್ತೀರೊ?" ಅದಕ್ಕೆ ಉತ್ತರವಾಗಿ ಮಿರ್ಝಾ ನಾಸಿರ್ ಅಹ್ಮದ್ ಈ

ರೀತಿ ಹೇಳಿದರು: "ಯಾವುದೇ ಆಕ್ರಮಣ ಸರಿಯೆಂದು ನಾನು ಗ್ರಹಿಸುವುದಿಲ್ಲ." ಅವರೊಡನೆ ಬೈತುಲ್‌ಮುಖದ್ದಸ್ (ಜೆರುಸಲೇಂ) ವಿಮೋಚನೆಗಾಗಿ ಸೌದಿಅರೇಬಿಯಾದ ರಾಜಕುಮಾರ ಫಹದ್‌ರವರು "ಜಿಹಾದ್"ಗೆ ಆಹ್ವಾನವಿತ್ತುದಕ್ಕೆ ನೀವು ಸಹಕಾರ ನೀಡುವಿರೋ? ಎಂದು ಪ್ರಶ್ನಿಸಿದಾಗ ಅಹ್ಮದಿಯಾ ಜಮಾಅತಿನ ಮುಖಂಡರು ಈ ರೀತಿ ಉತ್ತರಿಸಿದರು: "ಬೈತುಲ್‌ಮುಖದ್ದಸ್‌ಗಿಂತ ಗಂಭೀರವಾದ ಇತರ ಅನೇಕ ಸಮಸ್ಯೆಗಳಿವೆ. ಈಗಿನ ಅತ್ಯಂತ ದೊಡ್ಡ ಸಮಸ್ಯೆ ಮುಸ್ಲಿಮರು ಯಥಾರ್ಥ ಮುಸ್ಲಿಮರಾಗುವುದಾಗಿದೆ. ಮುಸಲ್ಮಾನರು ಯಥಾರ್ಥ ಮುಸ್ಲಿಮರಾಗಿ ಅಲ್ಲಾಹನ ಆಜ್ಞೆಯ ಪ್ರಕಾರ ಅಲ್ಲಾಹನ ಪಾಶವನ್ನು ಬಿಗಿಯಾಗಿ ಹಿಡಿದು ಐಕ್ಯದಿಂದಿದ್ದರೆ "ಬೈತುಲ್‌ಮುಖದ್ದಸ್" ಸಮಸ್ಯೆಯೇ ಬಾಕಿಯಾಗಲಾರದು.

### ಖುಮೇನಿ ಮತ್ತು ಇಸ್ಲಾಮ್

ಇರಾನಿನಲ್ಲಿ ಇಸ್ಲಾಮೀ ಕ್ರಾಂತಿಯ ಕುರಿತು ಒಂದು ಪ್ರಶ್ನೆಗೆ ಉತ್ತರಿಸುತ್ತಾ ಅಹ್ಮದಿಯಾ ಜಮಾಅತಿನ ಮುಖಂಡರು ಈ ರೀತಿ ಉತ್ತರಿಸಿದರು: ಆಯತುಲ್ಲಾ ಖುಮೇನಿಯ ವರ್ತನೆಗಳಿಗಾಗಿ ಇಸ್ಲಾಮಿನ ಮೇಲೆ ದೋಷಾರೋಪಣೆ ಮಾಡುವುದು ಸರಿಯಲ್ಲ. ಆಯತುಲ್ಲಾ ಖುಮೇನಿ ಇರಾನಿನ ಶಿಯಾಗಳ ಮುಖಂಡರಾಗಿದ್ದಾರೆ. ಅವರು ಕೇವಲ ಇರಾನಿನ ಶಿಯಾಗಳ ನಾಯಕರಾಗಿದ್ದಾರೆ; ಇರಾನಿನ ಹೊರಗೆ ಶಿಯಾಗಳಿದ್ದಾರೆ; ಆದರೆ ಆಯತುಲ್ಲಾ ಖುಮೇನಿ ಅವರ ನಾಯಕರಾಗಿಲ್ಲ. ಆಯತುಲ್ಲಾ ಖುಮೇನಿ ಒಬ್ಬ ರಾಜಕೀಯ ನೇತಾರರೂ ಆಗಿದ್ದಾರೆ. ಯಾವ ರೀತಿ ಪ್ರತಿಯೊಬ್ಬ ರಾಜಕೀಯ ಮುಂದಾಳುವಿಗೆ ಹಿಂಬಾಲಕರಿದ್ದಾರೆಯೋ ಅದೇ ರೀತಿ ಅವರಿಗೂ ಹಿಂಬಾಲಕರಿದ್ದಾರೆ. ಈಜಿಪ್ಟಿನ ರಾಷ್ಟ್ರಪತಿ ಸಾದಾತ್‌ಗೆ ಯಾವ ರೀತಿ ತನ್ನದೇ ರಾಜಕೀಯ ವೇದಿಕೆ ಇದೆಯೋ ಅದೇ ರೀತಿ ಆಯತುಲ್ಲಾ ಖುಮೇನಿಗೂ ರಾಜಕೀಯ ವೇದಿಕೆಯಿದೆ" ಅವರೊಡನೆ ಇರಾನಿನಲ್ಲಿ ಬಂಧನದಲ್ಲಿರುವ ಅಮೇರಿಕದ ಒತ್ತೆಯಾಳುಗಳ ಕುರಿತು ಅವರನ್ನು ಬಂಧನದಲ್ಲಿಡುವುದು ಇಸ್ಲಾಮಿನ ತತ್ವೋಪದೇಶಗಳಿಗನುಗುಣವಾಗಿದೆಯೋ? ಎಂದು ಪ್ರಶ್ನಿಸಿದಾಗ ಅಹ್ಮದಿಯಾ ಜಮಾಅತಿನ ಮುಖಂಡ ಖಲೀಫ ಮಿರ್ಝಾ ನಾಸಿರ್ ಅಹ್ಮದ್, "ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಒಬ್ಬ ವೈರಿಯ ರಾಯಭಾರಿಯನ್ನು ಸಂರಕ್ಷಣೆ ಮಾಡಬೇಕಾದುದು ಮುಸಲ್ಮಾನರ ಕರ್ತವ್ಯವಾಗಿದೆ" ಎಂದು ಹೇಳಿದರು. ಕಲ್ಲೆಸೆದು ಕೊಲ್ಲುವುದು ಮತ್ತು ಚಾಟಯೇಟಿನ ಶಿಕ್ಷೆಯ ಕುರಿತು ಖಲೀಫ ಮಿರ್ಝಾ ನಾಸಿರ್ ಅಹ್ಮದ್ ಉತ್ತರಿಸುತ್ತಾ "ಪವಿತ್ರ ಖುರ್‌ಆನ್ ಕಲ್ಲೆಸೆದು ಕೊಲ್ಲುವ ಶಿಕ್ಷೆ ವಿಧಿಸಿಲ್ಲ. ಆದರೆ ವ್ಯಭಿಚಾರಕ್ಕೆ ಚಾಟಿಯೇಟಿನ ಶಿಕ್ಷೆಯಿದೆ. ಆದರೆ ಅದನ್ನು ವಿಧಿಸಲು ತಪ್ಪಿತಸ್ಥರ ವಿರುದ್ಧ ನಾಲ್ಕು ದೃಕ್‌ಸಾಕ್ಷಿಗಳ ಇರುವಿಕೆ ನಿರ್ಬಂಧಕರವಾಗಿದೆ." ಎಂದು ಹೇಳಿದರು. ಪ್ರಪಂಚದ ಮುಸಲ್ಮಾನರ ಬಹುದೊಡ್ಡ ವಿಭಾಗ ಅಹ್ಮದಿಯರನ್ನು ಮುಸ್ಲಿಮರೆಂದು ತಿಳಿಯುವುದಿಲ್ಲವಲ್ಲ? ಎಂದು ಪ್ರಶ್ನಿಸಿದಾಗ ಖಲೀಫ ಮಿರ್ಝಾ ನಾಸಿರ್ ಅಹ್ಮದ್ ಈ ರೀತಿ ಹೇಳಿದರು: "ಒಂದು ಕಾಲದಲ್ಲಿ ಕೆಥೊಲಿಕರು ಪ್ರೊಟೆಸ್ಟೆಂಟರನ್ನು ಕ್ರೈಸ್ತ ಧರ್ಮಕ್ಕೆ ಸೇರಿದವರೆಂದು ಭಾವಿಸುತ್ತಿರಲಿಲ್ಲ." ಅವರು ಮುಂದುವರಿಯುತ್ತಾ ಈ ರೀತಿ ಹೇಳಿದರು: "ನನ್ನನ್ನು ಜನರು ಕಾಫಿರ್ (ಅವಿಶ್ವಾಸಿ) ಎಂದು ಘೋಷಿಸುತ್ತಿದ್ದರೂ ನನ್ನನ್ನು ಅನುಸರಿಸುವವರ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ. ನಾನು ಇಸ್ಲಾಮಿನ ಕುರಿತು ಹೇಳುವ ಮಾತುಗಳೆಲ್ಲಾ ಖುರ್‌ಆನ್‌ನ್ನು ಆಧಾರವಾಗಿಟ್ಟು ಕೊಂಡಾಗಿದೆ. ಖುರ್‌ಆನ್ ಯಾವುದೇ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿಯನ್ನು ಅಮುಸ್ಲಿಮೆಂದು ಘೋಷಿಸುವ ಅಧಿಕಾರವನ್ನು ಕೊಟ್ಟಿಲ್ಲ." ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ಅವರು ಈ ರೀತಿ ಹೇಳಿದರು: "ಈಗ ಪ್ರಪಂಚದಲ್ಲಿ ಒಂದೂವರೆ ಕೋಟಿ ಅಹ್ಮದಿಯರಿದ್ದಾರೆ." ಯುರೋಪಿನ ಕುರಿತು ಖಲೀಫ ಮಿರ್ಝಾ ನಾಸಿರ್ ಅಹ್ಮದ್ ಈ ರೀತಿ ಹೇಳಿದರು: "ಯುರೋಪಿನಲ್ಲಿ ವಿನಾಶಕಾರಿ ಆಯುಧಗಳ ಭಂಡಾರಗಳು ಮಾತ್ರವಲ್ಲ ಸಮಸ್ಯೆಗಳ ಭಂಡಾರಗಳೂ ಶೇಖರಣೆಯಾಗುತ್ತವೆ. 'ನಮ್ಮಿಂದ ಈ ಸಮಸ್ಯೆಗಳ ಪರಿಹಾರ ಸಾಧ್ಯವಿಲ್ಲ' ಎಂದು ಯುರೋಪ್ಯನ್ ರಾಷ್ಟ್ರಗಳು ಹೇಳುವ ಕಾಲವನ್ನು ನಾನು ಪ್ರತೀಕ್ಷಿಸುತ್ತಿದ್ದೇನೆ. ಆಗ ನಾನು ಹೇಳುವೆನು: ಈ ಸಮಸ್ಯೆಗಳ ಏಕಮಾತ್ರ ಪರಿಹಾರ ಮಾರ್ಗ ಇಸ್ಲಾಮ್ ಎಂದು"

ಪತ್ರಿಕಾ ಸಮ್ಮೇಳನದಲ್ಲಿ ಹಂಚಲಾದ ಪ್ರಕಟನೆಯಲ್ಲಿ ಈಗ 40 ರಾಷ್ಟ್ರಗಳಲ್ಲಿ 135 ಅಹ್ಮದಿಯಾ

# ★ ಸಂಪಾದಕರಿಗೆ ಪತ್ರ ★

ಮಾನ್ಯ ಸಂಪಾದಕರಿಗೆ,

ಯುಗರಶ್ಮಿಯಲ್ಲಿಯ – ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ, ಆರನೆಯ ವಯಸ್ಸು, ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು, ದೈವ ಒಂದು ಅನರ್ಘ್ಯ ನಿಧಿ; ಧರ್ಮ ಇಂದು, ಖುರ್‌ಆನ್ ಮತ್ತು ಪ್ರಪಂಚ, ವೃತಾನುಷ್ಠಾನ ಏಕೆ? ಇಸ್ಲಾಂ ಮತ ತತ್ತ್ವಜ್ಞಾನ – ಮುಂತಾದ ಲೇಖನಗಳು ತುಂಬಾ ಹಿಡಿಸಿವೆ. ಪತ್ರಿಕೆ ಕದಡಿದ ಜನಮನವನ್ನು ದೇವನತ್ತ ಕೊಂಡೊಯ್ಯುವಲ್ಲಿ ಹಿರಿದಾದ ಪಾತ್ರ ವಹಿಸುತ್ತಿದೆ ಎನಿಸುತ್ತದೆ. ಉರ್ದು ಬಾರದ ಅನೇಕರಿಗೆ ಕನ್ನಡದ ಮೂಲಕ ಇಸ್ಲಾಂ ಧರ್ಮ ತತ್ವ ತಿಳಿಸಿಕೊಡುತ್ತಿರುವುದು ಆನಂದದ ಸಂಗತಿ ಹಾಗೂ ಸಾಹಸ ಪೂರ್ಣ ಪ್ರಯತ್ನ.

ಮುಹಮ್ಮದ್ ಪೈಗಂಬರರ ಮತ್ತು ಬಸವಣ್ಣನವರ ತತ್ವಗಳಿಗೆ ಬಹಳಷ್ಟು ಸಾಮ್ಯವಿದೆ. ಕನ್ನಡ ಅಭ್ಯಾಸಿಗಳಿಗೆ ಇದೊಂದು ದಿವ್ಯ ಕೊಡುಗೆ. ಅನೇಕ ಜಿಜ್ಞಾಸುಗಳು ಯುಗರಶ್ಮಿಯ ಉಪಯೋಗ ಪಡೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.

—ಎಂ. ಬಂಡೆಪ್ಪ

ಭಾಲ್ಕಿ.

ಕಾರ್ಯದರ್ಶಿ, "ಶಾಂತಿ ಕಿರಣ" ಧಾರ್ಮಿಕ ಮಾಸಪತ್ರಿಕೆ.

-+++++-

ಮಾನ್ಯರೇ,

ತಮ್ಮ ಪತ್ರಿಕೆಯಾದ ಯುಗರಶ್ಮಿ ಜುಲೈ ಸಂಚಿಕೆಯಲ್ಲಿ ಪ್ರಕಟವಾದ "ದೈವ ಒಂದು ಅನರ್ಘ್ಯ ನಿಧಿ" ಎಂಬ ಹಜ್ರತ್ ಅಹ್ಮದ್ ನೀಡಿರುವ ಒಂದೊಂದು ವಾಕ್ಯಗಳು ತುಂಬಾ ಕೌತುಕಕಾರಿಯಾಗಿದೆ. ಚೆನ್ನಾಗಿ ಹೇಳಿ ವಿವರಿಸಿದ್ದಾರೆ. ಮತ್ತು "ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ" ಎಂಬ ಖುತ್ಬಾ ಪ್ರವಚನದ ಸಂಕ್ಷಿಪ್ತ ವರದಿಯು ವಿಚಾರಯುತವಾಗಿದೆ. ಇಂಥ ವರದಿಯನ್ನು ಸಂಗ್ರಹಿಸಿದ ಎಂ. ಯು. ರಶೀದ್ ಅವರಿಗೆ ಧನ್ಯವಾದಗಳು. ಇದರಂಥ ತತ್ವ ಲೇಖನಗಳು ಮುಂದೆಯೂ ಪ್ರಕಟವಾಗಿ "ಯುಗರಶ್ಮಿ" ಚಿರಕಾಲ ಬಾಳಲೆಂದು ಹಾರೈಸುತ್ತೇನೆ.

ಇಂಡಿ.

—ಆರ್. ಎಸ್ ಸಿಂದಗಿ

---

## — ನಿಧನ ವಾರ್ತೆ —

ಜನಾಬ್ ಯು. ಕೆ. ಅಬ್ದುಶ್ಶಾಫಿ ಸಾಹೇಬರು ತಾ. 14–9–1980ರಂದು ವಣಗೂರಲ್ಲಿ (ಸಕಲೇಶಪುರ ತಾಲೂಕು) ತಮ್ಮ 65ನೇ ವಯಸ್ಸಿನಲ್ಲಿ ಅಲ್ಪ ಕಾಲದ ಅಸ್ವಸ್ಥತೆಯ ನಂತರ ನಿಧನ ಹೊಂದಿದರು. (ಇನ್ನಾ ಲಿಲ್ಲಾಹಿವ ಇನ್ನಾ ಇಲೈಹಿ ರಾಜಿವೂನ್). ಅವರ ಹುಟ್ಟೂರು ಮಂಜೇಶ್ವರವಾಗಿದ್ದು 1948ನೇ ಇಸವಿಯಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರು ವ್ಯಾಪಾರಕ್ಕಾಗಿ ಸಕಲೇಶಪುರಕ್ಕೆ ಹೋಗುತ್ತಾ ಇದ್ದು ಹಲವು ವರ್ಷಗಳಿಂದ ವಣಗೂರಲ್ಲೇ ಕುಟುಂಬ ಸಮೇತ ವಾಸಿಸುತ್ತಿದ್ದರು. ವಣಗೂರಿನ ಸುತ್ತಮುತ್ತಲೂ ಅಹ್ಮದಿಯಾ ಸಂದೇಶ ತಲುಪಿಸಲು ಸದಾ ಉತ್ಸುಕರಾಗಿರುತ್ತಿದ್ದ ಶಾಫಿ ಸಾಹೇಬರಿಗೆ ವಣಗೂರಲ್ಲಿ ಒಂದು ಜಮಾಅತ್ ಸ್ಥಾಪನೆಯಾದುದನ್ನು ಕಾಣುವ ಸೌಭಾಗ್ಯ ದೊರೆಯಿತು. ಶಾಫಿ ಸಾಹೇಬರು 5 ಗಂಡು ಮಕ್ಕಳನ್ನೂ 5 ಹೆಣ್ಣು ಮಕ್ಕಳನ್ನೂ ತನ್ನ ಸ್ಮಾರಕವಾಗಿ ಬಿಟ್ಟು ಹೋಗಿರುವರು. ಅಲ್ಲಾಹು ಶಾಫಿ ಸಾಹೇಬರಿಗೆ ಮಗ್‌ಫಿರತನ್ನೂ ಅವರ ಕುಟುಂಬದವರಿಗೂ ಬಂಧುಮಿತ್ರರಿಗೂ ಸಹನೆಯನ್ನೂ ದಯಪಾಲಿಸಲಿ.

---

(25ನೇ ಪುಟದಿಂದ)

ಪ್ರಚರಣಾ ಕೇಂದ್ರಗಳಿವೆಯೆಂದೂ ಅಹ್ಮದಿಯರು ಸಂಪಾದನೆಯ $\frac{1}{16}$ ಅಂಶ ಕೇಂದ್ರ ಆಡಳಿತ ಮಂಡಳಿಗೆ ನೀಡುತ್ತಾರೆಂದೂವಿದೇಶೀಯ ವಿಭಾಗ ಪ್ರತಿವರ್ಷ $22\frac{1}{2}$ ಲಕ್ಷ ಪೌಂಡ್ ಹಣವನ್ನು 600 ಮಸೀದಿಗಳು, ಆಸ್ಪತ್ರೆಗಳು, ಮತ್ತು ಶಾಲೆಗಳಿಗಾಗಿ ವ್ಯಯಿಸುತ್ತದೆಯೆಂದೂ ಈ ಸಂಘಟನೆ ಅನೇಕ ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಕಾಶಗೊಳಿಸುತ್ತದೆಯೆಂದೂ ವಿವರಿಸಲಾಗಿದೆ. ●

# ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

## ಅಹ್ಮದಿಯಾ ಖಲೀಫರ ವಿದೇಶ ಸಂಚಾರ

ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಈಗ ವಿದೇಶ ಪರ್ಯಟನೆಯಲ್ಲಿದ್ದಾರೆ. ಇಸ್ಲಾಂ ಧರ್ಮದ ಪ್ರಚಾರ, ವಿವಿಧ ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರಗಳ ಪ್ರಕಾಶನ, ಅಹ್ಮದಿಯಾ ಸಂಘಟನೆ ವಿದೇಶಗಳಲ್ಲಿ ನಡೆಸುತ್ತಿರುವ ಇಸ್ಲಾಮಿಕ ಚಟುವಟಿಕೆಗಳ ಮೇಲ್ನೋಟ ಇತ್ಯಾದಿ ಹಝ್ರತ್ ಸಾಹೇಬರ ಯಾತ್ರೆಯ ಉದ್ದೇಶವಾಗಿದೆ. ಕಳೆದ ಜೂನ್ ತಿಂಗಳ 26ರಂದು ಬೆಳಿಗ್ಗೆ ಅವರು ರಬ್ವಾದಿಂದ ಹೊರಟು ಲಾಹೋರ್ ಮಾರ್ಗವಾಗಿ ಅಪರಾಹ್ನ ಕರಾಚಿ ತಲಪಿದರು. ಎರಡು ದಿನ ಕರಾಚಿಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲುಗೊಂಡು ತಾ. 29ರಂದು ಫ್ರಾಂಕ್‌ಫರ್ಟ್ ತಲಪಿದರು.

ಪಶ್ಚಿಮ ಜರ್ಮನಿಯ ಕಾರ್ಯಕ್ರಮಗಳ ನಂತರ ಕೋಪೆನ್‌ಹೇಗನ್ (ಡೆನ್ಮಾರ್ಕ್), ಗೋಟೆನ್‌ಬರ್ಗ್ (ಸ್ವೀಡನ್), ಜೂರಿಚ್ ಎಂಬೀ ಸ್ಥಳಗಳಲ್ಲಿರುವ ಘಟಕಗಳ ಸಂದರ್ಶನ ಕಾರ್ಯಕ್ರಮ ಮುಗಿಸಿ ಜುಲೈ 31ರಂದು ಒಸ್ಲೋ (ನಾರ್ವೆ)ಕ್ಕೆ ಹೊರಟರು. ಅಲ್ಲಿ ಆಗಸ್ಟ್ ಒಂದರಂದು ಅಲ್ಲಿನ ಪ್ರಥಮ ಮಸೀದಿಯನ್ನು ಉದ್ಘಾಟನೆ ಮಾಡಿದರು. ಪಶ್ಚಿಮ ಆಫ್ರಿಕವನ್ನು ಸಂದರ್ಶಿಸಿದ ಖಲೀಫರು ಘಾನಾದ ಆಕ್ರಾದಲ್ಲಿ ಆಗಸ್ಟ್ 24ರಂದು ಒಂದು ಮಸೀದಿಯನ್ನೂ ಪ್ರಚಾರ ಕೇಂದ್ರವನ್ನೂ ಉದ್ಘಾಟಿಸಿದರು.

ಈ ದೇಶಗಳಲ್ಲದೆ ಹಾಲೆಂಡ್, ಇಂಗ್ಲೆಂಡ್, ಫ್ರಾನ್ಸ್, ಸ್ಪೈನ್ ಎಂಬೀ ಯುರೋಪ್ಯನ್ ರಾಜ್ಯಗಳಲ್ಲಿಯೂ ಅಮೇರಿಕ, ಕೆನಡಾ ಎಂಬೀ ರಾಜ್ಯಗಳಲ್ಲಿಯೂ ಇರುವ ಘಟಕಗಳ ಸಂದರ್ಶನ ಖಲೀಫರ ಕಾರ್ಯಕ್ರಮದಲ್ಲಿದೆ.

## ನಾರ್ವೇ ದೇಶದ ಪ್ರಥಮ ಮಸೀದಿ ಓಸ್ಲೋ ನಗರದಲ್ಲಿ

ಅಹ್ಮದಿಯಾ ಜಮಾಅತಿನ ಸರ್ವೋನ್ನತ ನಾಯಕ ಹಝ್‌ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್– ಖಲೀಫತುಲ್ ಮಸೀಹ್ III– ಜರ್ಮನಿ, ಸ್ವಿಜರ್ಲೆಂಡ್ ದೇಶಗಳ ಧರ್ಮ ಪ್ರಚಾರ ಸಂಚಾರವನ್ನು ಮುಂದುವರಿಸುತ್ತಾ 31–7–80ರಂದು ಓಸ್ಲೋ ನಗರವನ್ನು ತಲುಪಿದರು. ಓಸ್ಲೋ ನಗರ ನಾರ್ವೆಯ ರಾಜಧಾನಿಯಾಗಿದೆ. ಇಲ್ಲಿ ಅಹ್ಮದಿಯಾ ಜಮಾಅತ್ ಒಂದು ಮತ ಪ್ರಚಾರ ಕೇಂದ್ರವನ್ನೂ ಒಂದು ಮಸೀದಿಯನ್ನೂ ನಿರ್ಮಿಸಿದೆ. ಇವುಗಳ ಉದ್ಘಾಟನೆಯ ಮೊದಲು ಒಂದು ಪತ್ರಿಕಾ ಸಮ್ಮೇಳನ ನಡೆಯಿತು. ಮಸೀದಿಯ ಉದ್ಘಾಟನೆ ಹಝ್‌ರತ್ ಖಲೀಫತುಲ್ ಮಸೀಹರು ಶುಕ್ರವಾರದ ಖುತ್‌ಬಾ ಮತ್ತು ಪ್ರಾರ್ಥನೆಯೊಂದಿಗೆ ನೆರವೇರಿಸಿದರು. ಉದ್ಘಾಟನೆಯ ಸಮಾರಂಭಕ್ಕೆ ಅನೇಕ ಅಮುಸ್ಲಿಮ್ ಗಣ್ಯರೂ ಆಗಮಿಸಿದ್ದರು. ಫ್ರಾನ್ಸ್, ಚೈನಾ, ಆಸ್ಟ್ರೀಯಾ, ತುರ್ಕಿ ಮತ್ತು ಬಂಗ್ಲಾ ದೇಶಗಳ ರಾಯಭಾರಿಗಳು ಸಹ ಈ ಸಮಾರಂಭದಲ್ಲಿ ಹಾಜರಿದ್ದರು. ಈ ಮಸೀದಿಯ ಉದ್ಘಾಟನೆಯ ಸುದ್ದಿಯನ್ನು ರೇಡಿಯೋ ಬಿತ್ತರಿಸಿತಲ್ಲದೆ ಟಿ. ವಿ.ಯಲ್ಲಿ ಉದ್ಘಾಟನೆಯನ್ನು ತೋರಿಸಲಾಯಿತು.

## ಪೋಪ್‌ರಿಗೆ ಖುರ್‌ಆನ್ ಪಾರಿತೋಷಕ

ಪ್ಯಾರಿಸ್–ನೊಬೆಲ್ ಪ್ರಶಸ್ತಿ ವಿಜೇತ ಅಹ್ಮದಿ ಭೌತ ವಿಜ್ಞಾನಿ ಡಾ। ಅಬ್ದುಸ್ಸಲಾಮ್‌ರವರು ಪೋಪ್ ಜಾನ್ ಪಾಲ್ II ಅವರಿಗೆ ಒಂದು ಸಂದರ್ಶನದಲ್ಲಿ ಖುರ್‌ಆನಿನ ಇಂಗ್ಲಿಷ್ ಭಾಷಾಂತರವನ್ನು ಪಾರಿತೋಷಕವಾಗಿ ನೀಡಿರುವರು. ಈ ಭೇಟಿ ಜೂನ್ 2ರಂದು ಪ್ಯಾರಿಸಿನಲ್ಲಿ ನಡೆಯಿತು. ಡಾ। ಅಬ್ದುಸ್ಸಲಾಮರನ್ನು ಲಂಡನಿನಿಂದ ಅಲ್ಲಿಗೆ ಆಹ್ವಾನಿಸಲಾಗಿತ್ತು. ಪೋಪರು ಈ ಕಾಣಿಕೆಯನ್ನು ಗೌರವದಿಂದ ಸ್ವೀಕರಿಸಿದರು. ಈ ದೃಶ್ಯವನ್ನು ಸ್ಥಳೀಯ ಟೆಲಿವಿಷನ್‌ನಲ್ಲಿ ತೋರಿಸಲಾಗಿತ್ತು. ಪೋಪರಿಗಿತ್ತ ಖುರ್‌ಆನಿನ ಇಂಗ್ಲಿಷ್ ಆವೃತ್ತಿಯ ಭಾಷಾಂತರಕರ್ತ ಸರ್ ಮುಹಮ್ಮದ್ ಝಫರುಲ್ಲಾ ಖಾನ್ ಆಗಿದ್ದಾರೆ.

## ಧಾರ್ಮಿಕ ಮಾತುಕತೆ ನಡೆಸಲು ಪೋಪ್‌ರಿಗೆ ಆಹ್ವಾನ

ಅಕ್ರಾ (ಘಾನಾ)ದ ಅಹ್ಮದಿಯಾ ಮುಸ್ಲಿಂ ಮಿಷನಿನ ಮಿಷನರಿ ಹಾಗೂ ಅಮೀರ್ ಮೌಲವಿ ಅಬ್ದುಲ್ ವಹಾಬ್ ಆದಂ ಅವರು ಪೋಪ್ ಪಾಲ್ ಜಾನ್‌ರವರನ್ನು ಮೇ 8ರಂದು ಘಾನಾದಲ್ಲಿ (ಪಶ್ಚಿಮ ಆಫ್ರಿಕ) ಭೇಟಿಯಾದರು. ಮೌಲವಿ ಆದಂರವರು ಖುರ್‌ಆನಿನ ಇಂಗ್ಲಿಷ್ ತರ್ಜುಮೆಯುನ್ನು ಮತ್ತು ಅಹ್ಮದಿಯಾ ಸಾಹಿತ್ಯಗಳನ್ನು ಪೋಪ್‌ರಿಗೆ ಕೊಡುಗೆಯಿತ್ತರು, ಮೌಲವಿ ಆದಮರು ಪೋಪರ ಭೇಟಿಗಾಗಿ ಆಮಂತ್ರಿಸಲ್ಪಟ್ಟ ಈರ್ವ ಮುಸ್ಲಿಂ ಧುರೀಣರ ಪೈಕಿ ಒಬ್ಬರಾಗಿದ್ದರು.

ಮೌಲವಿ ಆದಮರು ಪೋಪರಿಗೆ ನೀಡಿದ ಒಂದು ಬಿನ್ನಹ ಪತ್ರದಲ್ಲಿ, ಯೇಸುಕ್ರಿಸ್ತರ ಶಿಲುಬೆಯ ಮೇಲಿನ ಮರಣದ ಕುರಿತು ಮುಸ್ಲಿಂ – ಕ್ರೈಸ್ತರೊಳಗೆ ಒಂದು ಮಾತುಕತೆ ನಡೆಸಲು ಆಹ್ವಾನಿಸಿದ್ದಾರೆ. ಇಂತಹ ಒಂದು ಮಾತುಕತೆ ಬ್ರಿಟಿಷ್ ಕೌನ್ಸಿಲ್ ಓಫ್ ಚರ್ಚಸ್ ಮತ್ತು ಇತರ ಕ್ರೈಸ್ತವ ಸಭೆಗಳೊಂದಿಗೆ ನಡೆಸುವ ಸನ್ನದ್ಧತೆಯುನ್ನು ಅಹ್ಮದಿಯಾ ಸಂಘಟನೆ ಲಂಡನಿನಲ್ಲಿ 1968 ಮೇ ತಿಂಗಳಲ್ಲಿ ನಡೆಸಿದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ವ್ಯಕ್ತಗೊಳಿಸಿತ್ತೆಂದು ಸಹ ಮೌಲವಿ ಆದಮರು ನೆನಪಿಸಿದರು.

## ಡಾ। ಅಬ್ದುಸ್ಸಲಾಮರಿಗೆ ಗೌರವಾದರಗಳು

ನೊಬೆಲ್ ಪ್ರಶಸ್ತಿ ವಿಜೇತ ಅಹ್ಮದಿ ಭೌತ ವಿಜ್ಞಾನಿ ಪ್ರೊಫೆಸರ್ ಡಾ। ಅಬ್ದುಸ್ಸಲಾಮರಿಗೆ ವೆನೆಜುವೆಲಾದ ಉನ್ನತ ಸಿವಿಲ್ ಪ್ರಶಸ್ತಿಯುನ್ನು ಅಧ್ಯಕ್ಷ ಲೂಯಿಸ್ ಹೆರ್ರೆರ ಕ್ಯಾಂಪಿನ್ಸ್ ನೀಡಿರುವರು. ಪ್ರಶಸ್ತಿಯ ಹೆಸರು "Order of the Andres Bello" ಎಂದಾಗಿದೆ.

ಜನವರಿಯಲ್ಲಿ ನಡೆಸಿದ ತೃತೀಯ ವಿಕಾಸಶೀಲ ರಾಷ್ಟ್ರಗಳ ಪರ್ಯಟನೆಯಲ್ಲಿ ಅವರು ಲ್ಯಾಟಿನ್ ಅಮೇರಿಕದ ಬ್ರೆಜಿಲ್, ಕೊಲೊಂಬಿಯಾ ಮತ್ತು ವೆನೆಜುವೆಲಾಕ್ಕೆ ಭೇಟಿಯಿತ್ತರು. ಆ ಸಂದರ್ಭದಲ್ಲಿ ಅನೇಕ ವಿಶ್ವವಿದ್ಯಾಲಯಗಳು ಅವರ ಗೌರವಾರ್ಥ ಡಾಕ್ಟರೇಟ್ ಪದವಿಗಳನ್ನು ನೀಡಿದವು. ಕುರ್ಝ್‌ಕೊ ಯುನಿವರ್ಸಿಟಿ, ಲಿಮಾದ ನ್ಯಾಶನಲ್ ಯುನಿವರ್ಸಿಟಿ ಓಫ್ ಇಂಜಿನಿಯರಿಂಗ್, ಪೆರುವಿನ ಸಾನ್ ಮಾರ್ಕೋಸ್ ಯುನಿವರ್ಸಿಟಿ ಮೊದಲಾದವು ಅವುಗಳಲ್ಲಿ ಸೇರುತ್ತವೆ. ಯುನಿವರ್ಸಿಟಿ ಓಫ್ ಸೈಮನ್ ಬೊಲಿವರ್ ಕರಕಾಸ್ ಅವರನ್ನು ಗೌರವ ಪ್ರೊಫೆಸರನ್ನಾಗಿ ಮಾಡಿ ಒಂದು ಡಾಕ್ಟರೇಟ್ ಪದವಿಯನ್ನು ನೀಡಿತು.

ಬ್ರೆಜಿಲ್‌ನಲ್ಲಿ ಉಪಾಧ್ಯಕ್ಷ ಔರೆಲಿಯನೊ ಚಾವ್ಸ್ ಮತ್ತು ಕೊಲೊಂಬಿಯಾದಲ್ಲಿ ಅಧ್ಯಕ್ಷ ಜೂಲಿಯೋ ಸೀಸರ್ ಟರ್ಬೆ ಅಯಲಾರವರು ಡಾ। ಸಲಾಮರನ್ನು ಸ್ವಾಗತಿಸಿದರು.

ಸಂದರ್ಶಿಸಿದ ದೇಶಗಳಲ್ಲೆಲ್ಲಾ ವೈಜ್ಞಾನಿಕ ಪ್ರಗತಿಗಾಗಿ ಸೂಕ್ತ ಸಲಹೆಗಳನ್ನು ಡಾ। ಅಬ್ದುಸ್ಸಲಾಂ ನೀಡಿದರು.

## ಡಾ। ಅಬ್ದುಸ್ಸಲಾಂಗೆ ಬಿರ್ಲಾ ಪ್ರಶಸ್ತಿ

ಅಹ್ಮದಾಬಾದ್, ಸೆ. 7: ಭಾರತದ ಭೌತಶಾಸ್ತ್ರ ಸಂಘ ನಾಬೆಲ್ ಪ್ರಶಸ್ತಿ ವಿಜೇತ ಪ್ರೊ। ಅಬ್ದುಸ್ಸಲಾಂ ಅವರಿಗೆ ಅದರ ಮೊದಲ ಪ್ರಶಸ್ತಿ ಗೌರವ ನೀಡಲು ನಿರ್ಧರಿಸಿದೆ. ಪಾಕಿಸ್ತಾನಿ ಸಂಜಾತ ಶ್ರೀ ಸಲಾಂ ಇದೀಗ ಇಂಗ್ಲೆಂಡ್‌ನಲ್ಲಿ ನೆಲೆಸಿದ್ದು, ಅವರಿಗೆ ಶ್ರೀ ಆರ್. ಡಿ. ಬಿರ್ಲಾ ಸ್ಮಾರಕದ ಈ ಪ್ರಶಸ್ತಿ ಸಲ್ಲುತ್ತದೆ- (ನವಭಾರತ: 9-9-1980).

**ಡಾ। ಅಬ್ದುಸ್ಸಲಾಮರು ಡಿಸೆಂಬರ್ ತಿಂಗಳಲ್ಲಿ ಭಾರತಕ್ಕೆ ಭೇಟಿ ನೀಡುವರೆಂದು ತಿಳಿದು ಬಂದಿದೆ.**

—ಸಂಪಾದಕ.

## ಬ್ರಾಡ್‌ಫೋರ್ಡ್‌ನಲ್ಲಿ ಪೈಗಂಬರರ ದಿನಾಚರಣೆ

ಲಾಂಕಶೈರ್ ಮತ್ತು ಯೋರ್ಕ್‌ಶೈರ್ ಅಹ್ಮದಿಯಾ ಘಟಕಗಳ ಆಶ್ರಯದಲ್ಲಿ ಮಾರ್ಚ್ ತಾ. 30ರಂದು ಬ್ರಾಡ್ ಫೋರ್ಡ್‌ನ ವೈ. ಎಂ. ಸಿ. ಎ. ಹಾಲ್‌ನಲ್ಲಿ ಪೈಗಂಬರರ ದಿನವನ್ನು ಆಚರಿಸಲಾಯಿತು. ಶೆಫೀಲ್ಡ್, ಲೀಡ್ಸ್, ಲಿವರ್‌ಪೂಲ್, ಬ್ಲೇಕ್‌ಬರ್ನ್, ಪ್ರೆಸ್ಟನ್ ಎಂಬೀ ಸ್ಥಳಗಳ ಅಹ್ಮದಿಯರು ಸಭೆಯಲ್ಲಿ ಭಾಗವಹಿಸಿದ್ದರು. ಯೋರ್ಕ್‌ಶೈರ್‌ನ ಮಿಶನರಿ ಮೌಲಾನ ಅನಿಸುರ್ರಹ್ಮಾನ್‌ರವರು ಸಭೆಯ ಅಧ್ಯಕ್ಷತೆ ವಹಿಸಿದರು.

**ಪುಸ್ತಕ ವಿಭಾಗ**

# ಇಸ್ಲಾಂ ಮತ ತತ್ತ್ವಜ್ಞಾನ

## (9)

ಗ್ರಂಥಕರ್ತ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

## ಮರಣಾನಂತರ ಜೀವಿತ

ಮರಣದ ನಂತರ ಮನುಷ್ಯನ ಅವಸ್ಥೆಯೇನೆಂಬುದು ಎರಡನೇ ಪ್ರಶ್ನೆಯಾಗಿದೆ. ಮರಣಾನಂತರದ ಸ್ಥಿತಿ ನವ್ಯವಾದ ಒಂದು ಅವಸ್ಥೆಯೇನೂ ಅಲ್ಲ; ಅದು ಯಥಾರ್ಥದಲ್ಲಿ ಐಹಿಕ ಜೀವಿತದ ನಮ್ಮ ಆತ್ಮಸ್ಥಿತಿಯ ಸಂಪೂರ್ಣವೂ ಸ್ಪಷ್ಟವೂ ಆದ ಒಂದು ಪ್ರತಿಫಲನವಾಗಿದೆ. ಇಹಲೋಕದಲ್ಲಿ ಮನುಷ್ಯನ ಮತ ವಿಶ್ವಾಸಗಳ ಮತ್ತು ಕರ್ಮಗಳ ಶುಭಾಶುಭ ಸ್ಥಿತಿಗಳು ಅವನಲ್ಲಿ ಗುಪ್ತವಾಗಿದ್ದುಕೊಂಡು ಅವುಗಳ ಗುಣಕರವಾದ ಅಥವಾ ದೋಷಕರವಾದ ಪ್ರಭಾವ ಅವನಲ್ಲಿ ರಹಸ್ಯವಾಗಿ ಪ್ರವರ್ತಿಸಲು ತೊಡಗುತ್ತದೆ. ಪರಲೋಕದಲ್ಲಿ ಅವೆಲ್ಲಾ ಸ್ಪಷ್ಟವಾಗಿ ಗೋಚರಿಸುತ್ತವೆ. ಇದಕ್ಕೆ ದೃಷ್ಟಾಂತವನ್ನು ನಮಗೆ ಸ್ವಪ್ನಾವಸ್ಥೆಯಲ್ಲಿ ಕಾಣಬಹುದಾಗಿದೆ. ಮನುಷ್ಯನ ದೇಹದಲ್ಲಿ ಯಾವ ರೀತಿಯ ವಿಕಾರ ಬಲಗೊಳ್ಳುತ್ತದೆಯೋ, ಅದಕ್ಕನುಗುಣವಾದ ಶಾರೀರಿಕ ಸ್ಥಿತಿ ಅವನಿಗೆ ಕನಸಿನಲ್ಲಿ ಗೋಚರಿಸುತ್ತದೆ. ಕಠಿಣವಾದ ಜ್ವರ ಪೀಡಿಸಲಿರುವುದಾದರೆ ಅಗ್ನಿ ಅಥವಾ ಅಗ್ನಿಜ್ವಾಲೆ ಕಾಣಿಸುತ್ತದೆ. ಕಫಜ್ವರ ಅಥವಾ ನೆಗಡಿ ಬಾಧಿಸುವಾಗ ತಾನು ನೀರಿನಿಂದಾವೃತನಾಗಿ ಕಾಣುತ್ತಾನೆ. ಸಂಕ್ಷಿಪ್ತವಾಗಿ ಯಾವ ರೀತಿಯ ರೋಗದ ಮಾರ್ಪಾಟು ದೇಹಸ್ಥಿತಿಯಲ್ಲಿ ಉಂಟಾಗುತ್ತದೋ ಅದಕ್ಕನುಸಾರವಾದ ಸ್ಥಿತಿ ಉಪಮಾರೂಪದಲ್ಲಿ ಸ್ವಪ್ನದಲ್ಲಿ ಕಾಣಿಸುತ್ತದೆ. ಹೀಗೆ ಆಂತರಿಕ ಸ್ಥಿತಿಯನ್ನು ಪ್ರತ್ಯಕ್ಷದಲ್ಲಿ ತೋರಿಸುವ ಈ ಸ್ವಪ್ನಾವಸ್ಥೆಯ ಕುರಿತು ಚಿಂತಿಸುವುದಾದರೆ, ಹೆಚ್ಚು ಕಮ್ಮಿ ಇದೇ ಬಗೆಯ ಒಂದು ಸ್ಥಿತಿಯು ಪಾರತ್ರಿಕ ಜೀವಿತದಲ್ಲಿ ಪ್ರಕಟವಾಗುವುದೆಂದು ತಿಳಿದುಕೊಳ್ಳಲು ಪ್ರಯಾಸವಿಲ್ಲ. ಸ್ವಪ್ನ ನಮ್ಮಲ್ಲಿ ವಿಶಿಷ್ಟ ರೀತಿಯ ಒಂದು ಬದಲಾವಣೆಯನ್ನುಂಟುಮಾಡಿ ಆಂತರಿಕವಾದ ಆತ್ಮಸ್ಥಿತಿಗಳನ್ನು ಭೌತಿಕ ರೂಪದಲ್ಲಿ ತೋರಿಸಿಕೊಡುತ್ತದೆ. ಅದೇ ಪ್ರಕಾರ ಐಹಿಕ ಜೀವಿತದ ನಮ್ಮ ಆತ್ಮ ಸ್ಥಿತಿ ಪರಲೋಕದಲ್ಲಿ ದೃಗ್ಗೋಚರವಾಗುತ್ತದೆ. ಎಂದರೆ ನಮ್ಮ ಕರ್ಮಗಳೂ ಕರ್ಮಫಲಗಳೂ ಅಲ್ಲಿ ಸಾಕಾರ ಪ್ರತ್ಯಕ್ಷಗೊಳ್ಳುವುವು. ಹೀಗೆ, ಈ ಲೋಕದಲ್ಲಿ ಪರೋಕ್ಷವಾಗಿದ್ದ ನಮ್ಮ ಆತ್ಮ ಸಂಪಾದನೆಗಳೆಲ್ಲಾ ಪರಲೋಕದಲ್ಲಿ ನಮಗೆ ಪ್ರತ್ಯಕ್ಷವಾಗುವುವು. ಸ್ವಪ್ನದಲ್ಲಿ ಕಾಣಿಸುವ ವಿವಿಧ ರೀತಿಯ ದೃಶ್ಯಗಳು ಕೇವಲ ಭಾವನಾರೂಪದಲ್ಲಾಗದೆ, ಸಾಕ್ಷಾತ್ ವಸ್ತುತವೆಂಬಂತೆ ತಿಳಿದುಕೊಳ್ಳುವ ಪ್ರಕಾರ ಪರಲೋಕದಲ್ಲಿಯೂ ಆಗುವುದು. ಮಾತ್ರವಲ್ಲ, ಆತ್ಮ ಭಾವಗಳ ಸಾಕಾರವಾದ ಈ ಆವಿಷ್ಕರಣ ಮೂಲಕ ಸರ್ವಶಕ್ತನಾದ ದೇವನು ತನ್ನ ಶಕ್ತಿ ಮಹಾತ್ಮೆಯನ್ನು ನವೀನ ರೀತಿಯಲ್ಲಿ ಬಹಿರಂಗಪಡಿಸುವನು. ಇದನ್ನು ಉಪಮಾಲೋಕವೆಂದಲ್ಲ, ದೇವನ ಅಪಾರ ಶಕ್ತಿಯ ನೂತನವಾದ ಒಂದು ಸೃಷ್ಟಿ ಪ್ರಪಂಚವೆಂದು ಹೇಳುವುದು ಯಥಾರ್ಥವೂ ವಾಸ್ತವಿಕವೂ ಆಗಿದೆ.

ಪರಲೋಕದ ಈ ಅನುಭವಗಳ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಫಲಾ ತಅ್‌ಲಮು ನಫ್‌ಸುನ್ ಮಾ ಉಖ್‌ಫಿಯ ಲಹುಂ ಮಿನ್ ಕುರ್ರತಿ ಅಅ್‌ಯುನಿನ್" (32:37).

ಸಚ್ಚರಿತರಾದ ಭಕ್ತಜನರಿಗೋಸ್ಕರ ಗೋಪ್ಯವಾಗಿರಿಸಿದ ಅನುಗ್ರಹಗಳು ಯಾವ್ಯಾವೆಂದು ಯಾವುದೇ ಆತ್ಮವೂ ತಿಳಿದಿರುವುದಿಲ್ಲ.

ಈ ದೈವವಾಕ್ಯ ನಮಗೆ ತಿಳಿಸಿಕೊಡುವುದೇನೆಂದರೆ ಭಕ್ತ ಜನರಿಗೆ ಪರಲೋಕದಲ್ಲಿ ಲಭ್ಯವಾಗುವ ದಿವ್ಯಾನುಗ್ರಹಗಳು ಯಾರಿಗೂ ಪರಿಚಿತವಲ್ಲ, ಅವು ರಹಸ್ಯವಾಗಿವೆ; ಹಾಗೆ ಈ ಲೋಕದ ಭೌತಿಕ ವೈಭವಗಳೊಂದಿಗೆ ಸಾಮ್ಯತೆಯಿಲ್ಲದವೂ ಆಗಿವೆ. ಆದರೆ ಈ ಲೋಕದ ಅನುಗ್ರಹಕರವಾದ ಭೋಗ ವಸ್ತುಗಳಾದರೋ ನಮಗೆ ಅಜ್ಞಾತವಲ್ಲವಷ್ಟೆ. ದಾಳಿಂಬೆ, ದ್ರಾಕ್ಷೆ, ಹಾಲು ಮೊದಲಾದ ಭೌತಿಕ ವೈಭವಗಳನ್ನು ನಾವು ಹಲವು ಸಲ ರುಚಿಸಿರುತ್ತೇವೆ. ಆದ್ದರಿಂದ ಅವು ಗುಪ್ತವಾಗಿರಿಸಿದ ಸ್ವರ್ಗೀಯ ಅನುಗ್ರಹಗಳಲ್ಲಿ ಒಳಗೊಳ್ಳಲಾರವೆಂಬುದು ಸ್ಪಷ್ಟ. ಅವುಗಳಿಗೆ ಸ್ವರ್ಗೀಯ ವೈಭವಗಳೊಂದಿಗೆ ನಾಮಧೇಯಗಳಲ್ಲಿ ವಿನಾ ಬೇರೆ ಯಾವ ಸಾದೃಶ್ಯವೂ ಇಲ್ಲ. ಹಾಗಿರುವಾಗ, ಸ್ವರ್ಗವು ಭೌತಿಕಾನುಗ್ರಹಗಳ ಭಂಡಾರವೆಂದು ತಿಳಿದುಕೊಂಡಿರುವವರು ಯಾರೂ ಪವಿತ್ರ ಖುರ್‌ಆನನ್ನು ಲವಲೇಶವಾದರೂ ಅರಿತುಕೊಂಡಿಲ್ಲವೆಂದು ಹೇಳಬಹುದು.

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯದ ವ್ಯಾಖ್ಯಾನವಾಗಿ ಮುಹಮ್ಮದ್ ಪೈಗಂಬರ್ (ಸ.) ಹೇಳಿರುವುದೇನೆಂದರೆ, ಸ್ವರ್ಗ ಮತ್ತು ಅದರ ಅನುಗ್ರಹಗಳನ್ನು ಯಾವುದೇ ಕಿವಿ ಕೇಳಿಲ್ಲ, ಯಾವುದೇ ಕಣ್ಣು ಕಂಡಿಲ್ಲ, ಯಾವುದೇ ಹೃದಯ ಸ್ಪರ್ಶಿಸಲಿಲ್ಲ. ಭೌತಿಕಾನುಗ್ರಹಗಳಾದರೋ ದೃಷ್ಟಿಗೆ ಗೋಚರವಾಗುತ್ತವೆ. ಕರ್ಣೇಂದ್ರಿಯಕ್ಕೆ ಕೇಳಿಸುತ್ತವೆ ಮತ್ತು ಹೃದಯಕ್ಕೆ ಸ್ಪರ್ಶವಾಗುತ್ತವೆಯಷ್ಟೆ. ಸರ್ವಜ್ಞನಾದ ದೇವನು ಮತ್ತು ಅವನ ಪ್ರವಾದಿ ಸ್ವರ್ಗದ ವೈಭವಗಳು ಇಂದ್ರಿಯಾತೀತವೆಂದು ಸ್ಪಷ್ಟವಾಗಿ ಹೇಳಿರುವಾಗ, ಹಸುಗಳ ಅಥವಾ ಎಮ್ಮೆಗಳ ಹಾಲು ಸ್ವರ್ಗದಲ್ಲಿ ನದಿಗಳೋಪಾದಿಯಲ್ಲಿ ಹರಿಯುವುವೆಂದು ನಂಬುವುದಾದರೆ ನಾವು ಪವಿತ್ರ ಖುರ್‌ಆನಿನಿಂದ ದೂರಕ್ಕೆ ಸರಿಯುವೆವು. ಸ್ವರ್ಗದ ಆ ಅನುಗ್ರಹಗಳು ಭೌತಿಕ ವೈಭವಗಳಿಂದ ಕೂಡಿದವು ಆಗಿದ್ದರೆ, ಅಲ್ಲಿ ಅಪಾರ ಹೈನಸಂಪತ್ತು ಮತ್ತು ವೃಕ್ಷಗಳ ಮೇಲೆ ಅಗಣಿತ ಜೇನುಗೂಡುಗಳು ಇರಬೇಕಾಗಿವೆಯೆಂದೂ ಅನೇಕ ದೇವದೂತರು ಹಾಲನ್ನೂ ಜೇನನ್ನೂ ಶೇಖರಿಸಿ ನದಿಗಳಲ್ಲಿ ಹರಿಯಿಸುವ ಕೆಲಸದಲ್ಲಿ ನಿಯುಕ್ತರಾಗಿರಬೇಕಾಗಿದೆಯೆಂದೂ ನಂಬಬೇಕಾದೀತು. ಸ್ವರ್ಗೀಯ ವೈಭವಗಳು ಈ ಲೋಕಕ್ಕೆ ಪರಿಚಿತವಲ್ಲವೆಂದು ಪ್ರಸ್ತಾವಿಸುವ ವಚನಗಳು ಅಡಕವಾದ ಪವಿತ್ರ ಖುರ್‌ಆನಿನ ಅಧ್ಯಾಪನಕ್ಕೆ ಈ ರೀತಿಯ ವಿಶ್ವಾಸವು ಅನುಯೋಜ್ಯವಾಗುವುದೇ? ಆ ಅನುಗ್ರಹಗಳು ಆತ್ಮವನ್ನು ಪ್ರಕಾಶಗೊಳಿಸಿ ದೈವಜ್ಞಾನವನ್ನು ವೃದ್ಧಿಗೊಳಿಸುವ ಆತ್ಮಭೋಜನವೆಂದು ಖುರ್‌ಆನ್ ಕಲಿಸುತ್ತದೆ. ಈ ಸ್ವರ್ಗಾನುಗ್ರಹಗಳು ಭೌತಿಕ ವಸ್ತುಗಳಂತೆ ಸಾದೃಶ್ಯರೂಪದಲ್ಲಿ ಖುರ್‌ಆನಿನಲ್ಲಿ ವಿವರಿಸಲ್ಪಟ್ಟಿದ್ದರೂ ಅವುಗಳ ಉದ್ಭವ ಆಧ್ಯಾತ್ಮಿಕತೆ ಮತ್ತು ನೈತಿಕತೆಯನ್ನು ಆಧರಿಸಿಕೊಂಡಿದೆಯೆಂದು ಸಂಗಡವೇ ಹೇಳಲಾಗಿದೆ.

ಸ್ವರ್ಗದಲ್ಲಿ ನೀಡಲ್ಪಡುವ ಅನುಗ್ರಹಗಳನ್ನು ಅನುಭವಿಸುವಾಗ ಅವು ಮೊದಲು ಸಹ ತಮಗೆ ಲಭಿಸಿರುವುದಾಗಿ ಭಕ್ತಜನರು ಹೇಳುವರೆಂದು ಕೆಳಗೆ ಉದ್ಧರಿಸುವ ಖುರ್‌ಆನ್ ವಾಕ್ಯದಲ್ಲಿ ಹೇಳಲಾದುದರಿಂದ ಅವು ಭೌತಿಕ ವೈಭವಗಳೆಂದು ಭಾವಿಸಬೇಕಾಗಿಲ್ಲ. ಅದು ಈ ರೀತಿಯಾಗಿದೆ:

"ವ ಬಶ್ಶಿರಲ್ಲದೀನ ಆಮನೂ ವ ಅಮಿಲುಸ್ಸಾಲಿಹಾತಿ ಅನ್ನ ಲಹುಂ ಜನ್ನಾತಿನ್ ತಜ್‌ರೀ ತಹ್‌ತಿಹಲ್ ಅನ್‌ಹಾರ್ - ಕುಲ್ಲಮಾ ರುಜಿಕೂ ಮಿನ್‌ಹಾ ಮಿನ್ ಸಮರತಿನ್ ರಿಜ್‌ಕನ್—ಕಾಲೂ ಹಾದಲ್ಲದೀ ರುಜಿಕ್ನಾ ಮಿನ್ ಕಬ್ಲು- ವ ಉತೂ ಬಿಹೀ ಮುತಶಾಬಿಹಾ" (2:26).

ವಿಶ್ವಾಸವನ್ನು ಕೈಗೊಂಡು ಅನ್ಯೂನವಾದ ಸತ್ಕರ್ಮ ಗೈಯುವವರಿಗೆ, ಕೆಳಭಾಗದಲ್ಲಿ ಸರಿತ್ತುಗಳು ಪ್ರವಹಿಸುವ ತೋಟಗಳಿಗೆ ಅವರು ಹಕ್ಕುದಾರರೆಂಬ ಶುಭ ವಾರ್ತೆಯನ್ನು ನೀಡಿರಿ; ಅವುಗಳ ಫಲಗಳನ್ನು ಅಲ್ಲಿ ಅವರಿಗೆ ನೀಡಲ್ಪಡುವಾಗ, 'ಈ ಫಲಗಳನ್ನು ಮೊದಲು ಸಹ ನಮಗೆ ನೀಡ

ಲಾಗಿದವೃ' ಎಂದು ಅವರು ಹೇಳುವರು; (ಏಕೆಂದರೆ ಪೂರ್ವ ಜೀವಿತದಲ್ಲಿ ಅನುಭವಿಸಿದ ಫಲಗಳಿಗೆ) ಹೋಲಿಕೆಯುಳ್ಳವು ಅವರಿಗೆ ನೀಡಲಾಗುವುದು.

ಭಕ್ತಜನರು ಮೊದಲು ಈ ಲೋಕದಲ್ಲಿ ಅನುಭವಿಸಿರುವುದಾಗಿ ಇಲ್ಲಿ ಹೇಳಲಾದ ಫಲಗಳು ಭೌತಿಕ ವೈಭವಗಳೆಂದು ಭಾವಿಸುವುದು ತೀರಾ ಅಸಮಂಜಸವೂ ಖುರ್‌ಆನ್ ವಾಕ್ಯದ ಅರ್ಥಕ್ಕೆ ಕಟು ವಿರುದ್ಧವೂ ಆಗಿದೆ. ಸತ್ಯವಿಶ್ವಾಸಿಗಳಾಗಿ ಸತ್ಕರ್ಮ ಗೈಯುವ ಭಕ್ತರು ಧರ್ಮ ವಿಶ್ವಾಸವೆಂಬ ತೋಟ ಮತ್ತು ಸತ್ಕರ್ಮಗಳೆಂಬ ಸರಿತ್ತುಗಳಿಂದ ಕೂಡಿದ ಸ್ವರ್ಗವನ್ನು ತಮಗಾಗಿ ಸ್ವಂತ ಕೈಗಳಿಂದ ನಿರ್ಮಿಸುತ್ತಾರೆಂದು ಪ್ರಸ್ತುತ ವಾಕ್ಯ ತಿಳಿಸಿಕೊಡುತ್ತದೆ. ಆ ಪವಿತ್ರ ಧಾಮದ ಫಲಗಳನ್ನು ಅವರು ಈ ಲೋಕನಲ್ಲಿ ಆಸ್ವಾದಿಸುತ್ತಾರೆ. ಅದರ ಫಲಗಳನ್ನೇ ಅವರು ಪರಲೋಕದಲ್ಲೂ ಅನುಭವಿಸುವರು; ಅವುಗಳಾದರೋ ಬಹಳ ಮಾಧುರ್ಯವುಳ್ಳ ಫಲಗಳಾಗಿ ರೂಪಾಂತರ ಹೊಂದಿ ಗೋಚರಿಸುವುವು. ಹೀಗೆ, ಆ ಫಲಗಳನ್ನೂ ಐಹಿಕ ಜೀವಿತದ ಆಧ್ಯಾತ್ಮಿಕ ನೆಲೆಯಲ್ಲಿ ಆಸ್ವಾದಿಸುವುದರಿಂದ, ಪರಲೋಕದಲ್ಲಿ ಅವರಿಗೆ ಅವುಗಳನ್ನು ಗುರುತಿಸಲು ಸಾಧ್ಯವಾಗಿ, ಪೂರ್ವ ಜೀವಿತ ಕಾಲದ ಆ ಫಲಗಳೊಡನೆ ಸಾಮ್ಯತೆಯುಳ್ಳದ್ದಾಗಿ ಕಾಣುವುದರಿಂದ 'ಈ ಫಲಗಳು ಮೊದಲು ನಮಗೆ ನೀಡಲ್ಪಟ್ಟಿವೆಯುಷ್ಟೆ' ಎಂದು ಅವರು ಹೇಳುವರು. ಹೀಗೆ, ಈ ಲೋಕದಲ್ಲಿ ದೈವಾನುರಾಗ ಮತ್ತು ದೈವಪ್ರೀತಿಯೆಂಬ ಆತ್ಮಭೋಜನ ಆಸ್ವಾದಿಸುವವರಿಗೆ ಪರಲೋಕದಲ್ಲಿ ಅದೇ ಆಹಾರ ಪ್ರತ್ಯಕ್ಷ ರೂಪದಲ್ಲಿ ನೀಡಲ್ಪಡುವುದೆಂದು ಪ್ರಸ್ತುತ ದೈವವಾಕ್ಯ ಸ್ಪಷ್ಟವಾಗಿ ಹೇಳಿಕೊಡುತ್ತದೆ. ಅವರು ಈ ರೀತಿಯಲ್ಲಿ ದೈವ ಪ್ರೇಮ ಮತ್ತು ದೈವ ಪ್ರಸಾದವನ್ನು ಅನುಭವಿಸಿ ಅದರ ರುಚಿಯನ್ನು ತಿಳಿದಿರುವುದರಿಂದ, ಪರಲೋಕದ ಸುಖಾನುಭವ ಸಂದರ್ಭದಲ್ಲಿ, ತಮಗೆ ಐಹಿಕ ಜೀವಿತದ ಪ್ರಶಾಂತವಾದ ಏಕಾಂತದಲ್ಲೂ ರಾತ್ರಿಯ ಅಂಧಕಾರದಲ್ಲೂ ಸಾಕ್ಷಾತ್ ಪ್ರೇಮ ಅಕ್ಷಯವಾದ ದೇವನ ಅನುರಾಗ ಪರವಶತೆಯಿಂದ ಕೂಡಿದ ಧ್ಯಾನನಿಷ್ಠೆಯಲ್ಲಿ ಸಿದ್ಧಿಸಿದ ಆನಂದಾನುಭೂತಿಯನ್ನು ಅವರು ಸ್ಮರಿಸುವರು. ಒಟ್ಟಾರೆ ಹೇಳುವುದಾದರೆ, ಪ್ರಸ್ತುತ ಖುರ್‌ಆನ್ ವಾಕ್ಯ ಈ ಲೋಕದ ಭೌತಿಕಾನುಗ್ರಹಗಳ ಕುರಿತಾಗಲಿ ಅನುಭೋಗ್ಯ ವೈಭವಗಳ ಕುರಿತಾಗಲಿ ಪ್ರಸ್ತಾವಿಸುವುದಿಲ್ಲ.

ಆದರೆ, ದೈವಭಕ್ತರಿಗೆ ಈ ಲೋಕದಲ್ಲಿ ಆಧ್ಯಾತ್ಮಿಕ ನೆಲೆಯಲ್ಲಿ ಸ್ವರ್ಗೀಯ ಅನುಗ್ರಹಗಳು ಅನುಭವವಾಗಿದ್ದರೆ, ಆ ಅನುಗ್ರಹಗಳನ್ನು ಇಲ್ಲಿ ಯಾರೂ ಕಂಡಿಲ್ಲ, ಕೇಳಿಲ್ಲ, ಯಾರ ಹೃದಯದಲ್ಲೂ ರೂಪಗೊಂಡಿಲ್ಲವೆಂದು ಪ್ರಸ್ತಾಪಿಸಿರುವುದು ಹೇಗೆ ಸರಿಯಾಗುತ್ತದೆಯೆಂದೂ, ಈ ಸ್ಥಿತಿಯಲ್ಲಿ ಮೇಲೆ ಉದ್ಧರಿಸಲಾದ ಎರಡು ಖುರ್‌ಆನ್ ವಾಕ್ಯಗಳಿಗೆ ಪರಸ್ಪರ ಅರ್ಥ ವೈರುಧ್ಯ ಉಂಟಾಗುವುದಿಲ್ಲವೇ ಎಂದೂ ಶಂಕೆ ಮೂಡಬಹುದು. ಎರಡನೆಯ ವಾಕ್ಯದಲ್ಲಿ ಪೂರ್ವಜೀವಿತದಲ್ಲಿ ನೀಡಲಾದ ಫಲಗಳ ಕುರಿತು ಹೇಳಿದುದರ ತಾತ್ಪರ್ಯ ಲೌಕಿಕ ವೈಭವಗಳೆಂದಾಗುವಾಗ ಮಾತ್ರವೇ ಪರಸ್ಪರ ವೈರುಧ್ಯ ಉಂಟಾಗುತ್ತದೆ, ಆದರೆ ಆ ದೈವವಾಕ್ಯ ವಿವಕ್ಷಿಸುವುದು ಭೌತಿಕಾನುಗ್ರಹಗಳನ್ನಲ್ಲ, ಆತ್ಮಿಕಾನುಗ್ರಹಗಳನ್ನಾಗಿದೆ. ಆಗ ಇಲ್ಲಿ ಯಾವುದೇ ಅರ್ಥವೈಪರೀತ್ಯ ಉಂಟಾಗುವುದಿಲ್ಲ. ದೈವಜ್ಞಾನಿಯಾದ ಯಥಾರ್ಥ ಭಕ್ತನಿಗೆ ಆಧ್ಯಾತ್ಮಿಕ ಸ್ಥಿತಿಯಲ್ಲಿ ಈ ಲೋಕದಲ್ಲಿ ಲಭಿಸುವುದೆಲ್ಲಾ ಪರಲೋಕಕ್ಕೆ ಸಂಬಂಧಿಸಿದ ಅನುಗ್ರಹವೇ ಆಗಿದೆ. ಈ ಅನುಗ್ರಹದ ಮಾದರಿಯನ್ನು, ಅವನಿಗೆ ಪಾರತ್ರಿಕ ಆಸಕ್ತಿಯನ್ನು ವೃದ್ಧಿಗೊಳಿಸಲಿಕ್ಕೆ ಈ ಲೋಕದಲ್ಲೇ ಮುಂಚಿತವಾಗಿ ನೀಡಲಾಗುತ್ತದೆ.

ದೈವಾನುಭೂತಿಯುಂಟಾಗಿರುವ ಮನುಷ್ಯನು ಈ ಲೋಕಕ್ಕೆ ಸಂಬಂಧಪಟ್ಟವನಲ್ಲ; ಆದ್ದರಿಂದ ಲೋಕವು ಅವನನ್ನು ದ್ವೇಷಿಸುತ್ತದೆ. ಆದರೆ ಅವನು ಪರಲೋಕಕ್ಕೆ ಸಂಬಂಧಪಟ್ಟವನಾಗಿರುವುದರಿಂದ ಅವನಿಗೆ ಸ್ವರ್ಗೀಯ ಅನುಗ್ರಹಗಳು ನೀಡಲ್ಪಡುತ್ತವೆ. ಲೌಕಿಕ ಮನುಷ್ಯನು ಐಹಿಕ ಅನುಗ್ರಹಗಳನ್ನು ಸಂಪಾದಿಸುವಂತೆಯೇ ಪಾರಲೌಕಿಕ ದೈವಭಕ್ತನು ಸ್ವರ್ಗೀಯಾನುಗ್ರಹಗಳನ್ನು ಗಳಿಸುತ್ತಾನೆ. ಒಟ್ಟಿನಲ್ಲಿ, ಸ್ವರ್ಗದ ಅನುಗ್ರಹ ವಸ್ತುಗಳು ಕಣ್ಣುಗಳಿಗೂ ಕಿವಿಗಳಿಗೂ ಹೃದಯಗಳಿಗೂ ಅಗೋಚರವೂ ಅಪರಿಚಿತವೂ ಆಗಿವೆಯೆಂಬುದು ಸತ್ಯ. ಯಾವೊಬ್ಬನು ಐಹಿಕ ಜೀವಿತದಲ್ಲಿ ದೇಹ ಸುಖಗಳನ್ನು ಮೃತ್ಯುವಿಗೊಡ್ಡುತ್ತಾನೋ ಅವನಿಗೆ ಪರಲೋಕದಲ್ಲಿ ಪ್ರತ್ಯಕ್ಷವಾಗುವ ಪಾನಕ ಇಹದಲ್ಲಿ ಆತ್ಮಿಕ ಸ್ಥಿತಿಯಲ್ಲಿ

ಕುಡಿಸಲಾಗುತ್ತದೆ. ಪರಲೋಕದಲ್ಲಿ ಅದನ್ನು ಪ್ರತ್ಯಕ್ಷ ರೂಪದಲ್ಲಿ ನೀಡಲಾಗುವ ಸಂದರ್ಭದಲ್ಲಿ ಅವನಿಗೆ ಐಹಿಕ ಜೀವಿತದಲ್ಲುಂಟಾದ ಅದರ ಅನುಭವ ನೆನಪಿಗೆ ಬರುತ್ತದೆ. ಇದನ್ನು ತನಗೆ ಪೂರ್ವಜೀವಿತದಲ್ಲಿ ನೀಡಲಾಗಿತ್ತೆಂದು ಆಗ ಅವನು ಹೇಳುವನು. ಆದರೆ ಈ ಅನುಗ್ರಹ ಭೌತಿಕ ಕಣ್ಣು, ಕಿವಿ ಮತ್ತು ಇತರ ಇಂದ್ರಿಯಗಳಿಗೆ ಅಗೋಚರವೂ ಅಪರಿಚಿತವೂ ಆಗಿದೆಯೆಂಬ ಪ್ರಜ್ಞೆ ಅವನಿಗಿರುತ್ತದೆ. ಅವನು ಇಹಲೋಕಕ್ಕೆ ಸಂಬಂಧಪಟ್ಟವನಲ್ಲವಾದರೂ ಈ ಲೋಕದಲ್ಲೇ ಇದ್ದವನಾದುದರಿಂದ ಅದು ಲೌಕಿಕಾನುಗ್ರಹಗಳ ಪೈಕಿಯದಲ್ಲವೆಂದೂ ಅಂತಹ ಅನುಗ್ರಹವನ್ನು ಇಹದಲ್ಲಿ ತನ್ನ ಕಣ್ಣಿನಿಂದಾಗಲಿ ಕಿವಿಯಿಂದಾಗಲಿ ಹೃದಯದಿಂದಾಗಲಿ ಅನುಭವಿಸಿಲ್ಲವೆಂದೂ ಸಾಕ್ಷ್ಯವಹಿಸುವನು. ಆದರೆ, ಆ ಅನುಗ್ರಹದ ಮಾದರಿ ಅವನು ಇಹದಲ್ಲಿ ಅನುಭವಿಸಿದ್ದು ಅವನ ಆತ್ಮಿಕ ಪುನರುಜ್ಜೀವನ ಘಟ್ಟದಲ್ಲಾಗಿತ್ತು. ಆ ಜೀವಿತವಾದರೋ ಈ ಲೋಕದ ಕೀಳ್ಮಟ್ಟದ ಕಟ್ಟುಪಾಡುಗಳಿಂದೆಲ್ಲಾ ಬೇರ್ಪಟ್ಟು ಪರಲೋಕದೊಂದಿಗೆ ಒಂದು ದೃಢ ಬಂಧವನ್ನು ಏರ್ಪಡಿಸುವಂತಹದ್ದಾಗಿತ್ತು.

ಮರಣಾನಂತರ ಜೀವಿತದ ಅನುಭವಾವಸ್ಥೆಗಳ ಸಂಬಂಧಿಸಿ ಪ್ರಧಾನವಾದ ಮೂರು ತತ್ವಗಳನ್ನು ಪವಿತ್ರ ಖುರ್‌ಆನ್ ವಿವರಿಸಿರುವುದು ಇಲ್ಲಿ ಸ್ಮರಣಾರ್ಹ. ಅವನ್ನು ಇಲ್ಲಿ ಪ್ರತ್ಯಪ್ರತ್ಯೇಕವಾಗಿ ವಿವರಿಸಬಹುದು.

ಒಂದನೆಯ ತತ್ವ ಮರಣಾನಂತರ ಜೀವಿತ ಹೊಸ ಒಂದು ಅವಸ್ಥೆಯಲ್ಲವೆಂದೂ ಅದು ಐಹಿಕ ಜೀವಿತಾವಸ್ಥೆಯ ಒಂದು ಪ್ರತಿರೂಪವಾಗಿರುವುದೆಂದೂ ಪವಿತ್ರ ಖುರ್‌ಆನ್ ಪದೇ ಪದೇ ಬೋಧಿಸುತ್ತದೆಯೆಂಬುದಾಗಿದೆ. ಖುರ್‌ಆನ್ ಹೀಗೆ ಹೇಳುತ್ತದೆ:

"ವ ಕುಲ್ಲ ಇನ್ಸಾನಿನ್ ಅಲ್‌ಸಮ್ನಾಹು ತಾಇರಹು ಫೀ ಉನುಕಿಹೀ ವ ನುಖ್‌ರಿಜು ಲಹೂ ಯೌಮಲ್ ಖಿಯಾಮತಿ ಕಿತಾಬನ್ ಯ್ಯಲ್ಕಾಹು ಮನ್‌ಶೂರಾ" (17:14).

ನಾವು ಈ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನ ಕರ್ಮಫಲಗಳನ್ನು ಅವನ ಕುತ್ತಿಗೆಗೆ ಕಟ್ಟಿದ್ದೇವೆ. ಗೋಪ್ಯವಾಗಿರುವ ಈ ಫಲಗಳನ್ನು ಪುನರುತ್ಥಾನ ದಿನದಂದು ತೆರೆದ ಪುಸ್ತಕದ ರೂಪದಲ್ಲಿ ಬಹಿರಂಗಪಡಿಸುವೆವು.

ಈ ವಾಕ್ಯದಲ್ಲಿ ಪ್ರಯೋಗಿಸಲ್ಪಟ್ಟ 'ತಾಇರ್' ಎಂಬ ಪದ ಇಲ್ಲಿ ಗಮನಾರ್ಹವಾಗಿದೆ. ಇದರ ಶಬ್ದಾರ್ಥ 'ಪಕ್ಷಿ' ಎಂದಾಗಿದ್ದರೂ ಉಪಮಾಲಂಕಾರವಾಗಿ 'ಕರ್ಮ' ಎಂಬರ್ಥದಲ್ಲಿ ಇಲ್ಲಿ ಉಪಯೋಗಿಸಲಾಗಿದೆ. ಏಕೆಂದರೆ ಒಳ್ಳೆಯ ಅಥವಾ ಕೆಟ್ಟ ಯಾವ ಕರ್ಮವಾಗಲಿ ಸಂಭವಾನಂತರ ಹಕ್ಕಿಯಂತೆ ಹಾರಿ ಕಣ್ಮರೆಯಾಗುತ್ತದೆ. ಎಂದರೆ, ಆ ಕಾರ್ಯ ನಿರ್ವಹಣೆಯ ಜೊತೆಗೆ ಅದರಿಂದ ಅನುಭವಿಸಿದ ಕ್ಲೇಶವಾಗಲಿ ಆನಂದವಾಗಲಿ ಮರೆಯಾಗುತ್ತದೆ. ಆ ಕ್ರಿಯೆಯ ಶುಭಾಶುಭ ಫಲ ಅಥವಾ ಚಿಹ್ನೆ ಮಾತ್ರ ಹೃದಯದಲ್ಲಿ ಬಾಕಿಯಾಗುತ್ತದೆ. ಮನುಷ್ಯನ ಯಾವುದೇ ಕರ್ಮವು ಅದರ ಕುರುಹನ್ನು ಪರೋಕ್ಷವಾಗಿ ಹೃದಯದಲ್ಲಿ ಅಚ್ಚೊತ್ತುತ್ತದೆಯೆಂಬುದು ಪವಿತ್ರ ಖುರ್‌ಆನಿನ ಒಂದು ಪಾಠವಾಗಿದೆ. ಕರ್ಮ ಯಾವ ರೀತಿಯಲ್ಲಿರುತ್ತದೋ ಅದಕ್ಕನುಸಾರವಾಗಿ ದೈವಕರ್ಮ ಸಹ ಬಹಿರಂಗವಾಗುತ್ತದೆ. ಆ ನಿಯತಿಕರ್ಮ ಮನುಷ್ಯನ ಕ್ರಿಯಾಫಲವಾದ ಒಳಿತು ಅಥವಾ ಕೆಡುಕು ನಾಶಗೊಳ್ಳಲು ಬಿಡುವುದಿಲ್ಲ; ಮಾತ್ರವಲ್ಲ, ಅದರ ಚಿಹ್ನೆ ಹೃದಯದಲ್ಲೂ ಮುಖದಲ್ಲೂ ಕಣ್ಣುಗಳಲ್ಲೂ ಕಿವಿಗಳಲ್ಲೂ ಕೈಗಳಲ್ಲೂ ಕಾಲುಗಳಲ್ಲೂ ಎಲ್ಲಾ ಗುಪ್ತ ರೂಪದಲ್ಲಿ ಒತ್ತಲ್ಪಡುತ್ತದೆ. ಅವನಲ್ಲಿ ಗುಪ್ತವಾಗಿರುವ "ಕರ್ಮಗ್ರಂಥ" ಇದೇ ಆಗಿದೆ. ಐಹಿಕ ಜೀವಿತದಲ್ಲಿ ಪರೋಕ್ಷವಾಗಿ ರೂಪುಗೊಳ್ಳುವ ಈ ಕರ್ಮವೃತ್ತಾಂತ ಗ್ರಂಥ ಪರಲೋಕದಲ್ಲಿ ಪ್ರತ್ಯಕ್ಷವಾಗುತ್ತದೆ. ಪವಿತ್ರ ಖುರ್‌ಆನ್ ಒಂದೆಡೆ ಸ್ವರ್ಗವಾಸಿಗಳ ಕುರಿತು ಹೀಗೆ ಹೇಳುತ್ತದೆ:

"ಯೌಮ ತರಲ್ ಮೂಅ್‌ಮಿನೀನ ವಲ್ ಮೂಅ್‌ಮಿನಾತಿ ಯಸ್‌ಆ ನೂರುಹುಂ ಬೈನ ಅಯ್ದೀಹಿಂ ವ ಬಿಅಯ್ಮಾನಿಹಿಂ" (57:13)

ಆ ದಿನದಂದು ಸತ್ಯವಿಶ್ವಾಸಿಗಳೂ ಸತ್ಯ ವಿಶ್ವಾಸಿನಿಯರೂ ತಮಗೆ ಪರೋಕ್ಷವಾಗಿ ಸಿದ್ಧಿಸಿದ ಪ್ರಕಾಶ ಅವರ ಮುಂದೆ ಬಲಭಾಗದಲ್ಲಿ ಪ್ರವಹಿಸುವುದಾಗಿ ಕಾಣುವರು.

ಖುರ್‌ಆನಿನ ಮತ್ತೊಂದೆಡೆಯಲ್ಲಿ ಅಧರ್ಮಿಗಳ ಕುರಿತು ಹೀಗೆ ಹೇಳಲಾಗಿದೆ:

"ಅಲ್‌ಹಾಕುಮುತ್ತಕಾಸುರ್- ಹತ್ತಾ ಸುರು ತುಮುಲ್ ಮಕಾಬಿರ್-ಕಲ್ಲಾ ಸೌಫ ತಅ್‌ಲ ಮೂನ್- ಸುಮ್ಮ ಕಲ್ಲಾ ಸೌಫತಅ್‌ಲ ಮೂನ್- ಕಲ್ಲಾ ಲೌ ತಅ್‌ಲಮೂನ ಇಲ್ಮಲ್‌ಯಕೀನ್- ಲತರವುನ್ನಲ್ ಜಹೀಮ - ಸುಮ್ಮಲತರವುನ್ನಹಾ ಅಯ್ನಲ್ ಯಕೀನ್- ಸುಮ್ಮಲತುಸ್‌ಅನ್ನ ಯೌ ಮಇದಿನ್ ಅನಿನ್ನಈಂ". (ಅಧ್ಯಾಯ 102)

ನಿಮ್ಮ ಮಿತಿ ಮೀರಿದ ಲೌಕಿಕ ತೃಷ್ಣೆಯು ನೀವು ಸಮಾಧಿಗಳನ್ನು ತಲಪುವ ವರೆಗೆ ನಿಮ್ಮನ್ನು ಪಾರತ್ರಿಕ ಜೀವಿತ ವಿಚಾರದ ಬಗ್ಗೆ ಅಲಕ್ಷ್ಯರನ್ನಾಗಿ ಮಾಡುತ್ತದೆ. ನೀವು ಲೋಕದ ಬಗ್ಗೆ ಹೆಚ್ಚು ಗಮನ ಹರಿಸದಿರಿ; ಏಕೆಂದರೆ ಪ್ರಪಂಚಾನುರಾಗ ಸತ್ಫಲ ನೀಡುವುದಿಲ್ಲವೆಂದು ನೀವು ಶೀಘ್ರದಲ್ಲೇ ತಿಳಿಯುವಿರಿ. ಮತ್ತೂ ನಾನು ನಿಮ್ಮೊಡನೆ ಹೇಳುತ್ತೇನೆ: ಪ್ರಪಂಚಾನುರಾಗದ ದೋಷ ಫಲವನ್ನು ನೀವು ಬೇಗನೇ ತಿಳಿಯುವಿರಿ. ನಿಮಗೆ ನಿರ್ಣಯಾತ್ಮಕ ಜ್ಞಾನ ಸಿದ್ಧಿಸಿದರೆ ಈ ಲೋಕದಲ್ಲೇ ನೀವು ನರಕವನ್ನು ಕಾಣುವಿರಿ. ಆ ಬಳಿಕ ಮರಣದ ನಂತರ ಪುನರುತ್ಥಾನ ವರೆಗಿನ ಮಧ್ಯಮ ಘಟ್ಟವಾದ 'ಬರ್‌ಸಖ್'ನಲ್ಲಿ ನೀವು ಅದನ್ನು ನಿಶ್ಚಯಾತ್ಮಕ ದೃಷ್ಟಿಯಲ್ಲಿ ಕಾಣುವಿರಿ. ಕೊನೆಗೆ ಪುನರುತ್ಥಾನ ಘಟ್ಟದಲ್ಲಿ ನೀವು ನ್ಯಾಯ ವಿಚಾರಣೆಗೆ ಪಾತ್ರರಾಗಿ ಶಿಕ್ಷೆಗೆ ಗುರಿಯಾಗುವಾಗ ಅನುಭವ ಮೂಲಕ ನಿಮಗೆ ನರಕದ ಬಗ್ಗೆ ಸರಿಯಾದ ಜ್ಞಾನ ಉಂಟಾಗುವುದು.

ಅಧರ್ಮಿಗಳಿಗೆ ನರಕಜೀವಿತ ಈ ಲೋಕದಲ್ಲೇ ಗುಪ್ತವಾಗಿ ನೆಲೆಗೊಂಡಿರುತ್ತದೆಯೆಂದೂ ಗಾಢವಾಗಿ ಚಿಂತಿಸಿದರೆ ಅವರಿಗೆ ನರಕವನ್ನು ಇಲ್ಲೇ ಕಾಣಲಾಗುವುದೆಂದೂ ಈ ದೈವ ವಾಕ್ಯಗಳು ಪ್ರಸ್ತಾವಿಸುತ್ತವೆ. ಇಲ್ಲಿ ಅಲ್ಲಾಹು ಜ್ಞಾನವನ್ನು ಮೂರು ವಿಧದಲ್ಲಿ ವಿಂಗಡಿಸಿದ್ದಾನೆ. "ಇಲ್ಮುಲ್ ಯಖೀನ್" ಅಥವಾ "ಅನುಮಾನ ಜ್ಞಾನ", "ಐನುಲ್ ಯಖೀನ್" ಅಥವಾ "ದರ್ಶನ ಜ್ಞಾನ" ಮತ್ತು "ಹಖ್ಖುಲ್ ಯಖೀನ್" ಅಥವಾ "ಅನುಭವ ಜ್ಞಾನ". ಮೂರು ಉದಾಹರಣೆಗಳಿಂದ ಇದನ್ನು ಸ್ಪಷ್ಟಪಡಿಸಬಹುದು. ದೂರದಿಂದ ಹೊಗೆಯೆದ್ದು ಕಾಣುವಾಗ. ನೋಡುವವನ ಮನೋತಲದಲ್ಲಿ ಅದಕ್ಕೆ ಕಾರಣೀಭೂತವಾದ ಅಗ್ನಿಯ ಜ್ಞಾನ ಉದಿಸುತ್ತದೆ. ಧೂಮ ಮತ್ತು ಅಗ್ನಿಯ ಅವಿಚ್ಛಿನ್ನ ಸಂಬಂಧ ನಿಮಿತ್ತ ಹೊಗೆಯಿರುವಲ್ಲಿ ಬೆಂಕಿಯಿರಬೇಕೆಂಬುದು ದಿಟವಷ್ಟೆ. ಆದ್ದರಿಂದ ಹೊಗೆಯೆದ್ದು ಬರುವ ಆ ಸ್ಥಳದಲ್ಲಿ ಬೆಂಕಿ ಇರಬೇಕೆಂದು ಅವನು ನಿರ್ಣಯಿಸುತ್ತಾನೆ. ಈ ಜ್ಞಾನ "ಇಲ್ಮುಲ್ ಯಖೀನ್" ಅಥವಾ "ಅನುಮಾನ ಜ್ಞಾನ"ವಾಗಿದೆ. ಅವನು ನೇರಾಗಿ ಹೋಗಿ ಆ ಹೊಗೆ ಎದ್ದ ಸ್ಥಳದಲ್ಲಿ ಬೆಂಕಿಯ ಜ್ವಾಲೆಯನ್ನು ಕಾಣುವುದಾದರೆ ಆ ಅರಿವಿಗೆ "ಐನುಲ್ ಯಖೀನ್" ಅಥವಾ "ದರ್ಶನ ಜ್ಞಾನ" ಎಂದು ಹೇಳಲಾಗುತ್ತದೆ. ಆ ಅಗ್ನಿಯನ್ನು ಸ್ಪರ್ಶಿಸುವಾಗ ಅವನಿಗೆ ಉಂಟಾಗುವ ಅನುಭವ "ಹಖ್ಖುಲ್ ಯಖೀನ್" ಅಥವಾ "ಅನುಭವ ಜ್ಞಾನ" ವಾಗಿದೆ. ಇದೇ ಪ್ರಕಾರ ನರಕದ ಕುರಿತು ಈ ಲೋಕದಲ್ಲಿ ಅನುಮಾನ ಜ್ಞಾನವೂ 'ಬರ್‌ಸಖ್' ಎಂಬ ಮಧ್ಯಮ ಘಟ್ಟದಲ್ಲಿ ದರ್ಶನ ಜ್ಞಾನವೂ ಪುನರುತ್ಥಾನ ಘಟ್ಟದಲ್ಲಿ ಪರಿಪೂರ್ಣವಾದ ಅನುಭವ ಜ್ಞಾನವೂ ಸಿದ್ಧಿಸುವುದೆಂದು ಪ್ರಸ್ತುತ ದೈವವಾಕ್ಯಗಳಿಂದ ಸ್ಪಷ್ಟವಾಗುತ್ತದೆ.

( ಮುಂದುವರಿಯುವುದು )

**Read Ahmadiyya Periodicals in different languages to study different religions.**

# BADR

URDU WEEKLY

Single Copy: 0–40 Paise
Annual Subscription: Rs. 20/–

Apply To : The Manager,
"Badr" Urdu Weekly, P. O. QADIAN-143516. (Punjab)

# MINARET

ENGLISH QUARTERLY JOURNAL

Single Copy: Rs. 1–25
Annual Subscription: Rs. 5/–

Apply to: Mr. M. P. Koyatty
Minaret Accounting Section
14/346, Francis Road,
CALICUT–670003 (Kerala)

# SATHYADOOTHAN

MALAYALAM MONTHLY

Single Copy : 0-50 Paise
Annual Subscription: Rs. 6/–

Apply to: The Manager,
Sathyadoothan Monthly
CANNANORE-670001.

# SAMADHANA VAZHI

TAMIL MONTHLY

Single Copy : 0–35 Paise
Annual Subscription: Rs. 4/–

Apply to : The Manager
Samadhana Vazhi Monthly
3, United India Colony
Kodambakkam, MADRAS-600024

# Turning Europe toward Islam



Khalifatul Mashi III, the Supreme Head of the Ahmadiyya Movement in Islam, at his London press conference yesterday in which he announced the first stage of the conversion of Europe to Islam, including the translation of the Holy Quran into 100 languages. — AP photograph


ಅಹ್ಮದಿಯಾ ಖಲೀಫರವರು ಆಗಸ್ಟ್ 14ರಂದು ಲಂಡನಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತಾಡುತ್ತಿದ್ದಾರೆ. ಯುರೋಪಿನಲ್ಲಿ ಇಸ್ಲಾಮಿನ ಪ್ರಚಾರ ಮತ್ತು 100 ಭಾಷೆಗಳಲ್ಲಿ ಖುರ್‌ಆನನ್ನು ಭಾಷಾಂತರಿಸುವ ಅಹ್ಮದಿಯಾ ಸಂಘಟನೆಯ ಕಾರ್ಯಕ್ರಮದ ಕುರಿತು ಸಹ ಅವರು ಪ್ರಸ್ತಾಪಿಸಿದರು. ಈ ಗೋಷ್ಠಿಯಲ್ಲಿ 60 ಪತ್ರಿಕಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಫೋಟೋ: "ಗಲ್ಫ್ ನ್ಯೂಸ್", ದುಬೈ: 15-8-1980

Regd. with the Registrar of Newspapers for India. Regd. No. R. N. 27354/75
**YUGARASHMI Kannada Quaterly, Sept.-Oct. 1980/Tabook-Ikha 1359**

## English Translation of the HOLY QUARAN with Arabic Text & Extensive Index

**Price: Rs. 15-00**




**Postal Charge Extra**

---

### AHMADIYYA ENGLISH LITERATURE

1. THE TEACHINGS OF ISLAM — Rs. 6-00
   by Hazrat Mirza Ghulam Ahmad
2. JESUS IN INDIA — 2-25
   by Hazrat Mirza Ghulam Ahmad
3. CHARACTERISTICS OF THE QURANIC TEACHINGS — 1-00
   by Hazrat Mirza Bashiruddin Mahmud Ahmad
4. THE HOLY PROPHET MUHAMMAD — 1-50
   by Hazrat Mirza Bashiruddin Mahmud Ahmad
5. WHERE DID JESUS DIE? — 2-25
   by J. D. Shams, Ex-Imam, London Mosque

**Write to: NAZIR DAWAT-O-TABLIGH, Qadian (Punjab)-143516**

Edited and Published by Muhammad Yusuf on behalf of Jamath Ahmadiyya Mangalore at 10-23/1008, Ansari Road, Bunder, Mangalore–575 001.
Printed at Karavali Printers, Azizuddin Road, Bunder, Mangalore–575001.